بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّي عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللهُ بِبَدْرٍ وَّاَنْتُمْ اَذِلَّةٌ

ವರ್ಷ: 03

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 05

ವಾರ್ಷಿಕ ಶುಲ್ಕ ರೂ.575/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

03 ಫೆಬ್ರವರಿ 2022, 03 ತಬ್ಲೀಗ್ 1401 ತಬ್‌ಲೀಗ್ ಹಿಜರಿ ಶಮ್‌ಸಿ,
01 ರಜಬ್ 1443 ಹಿಜರಿ ಖಮರಿ.

### ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ وَبَارِكْ لَنَا فِيْ عُمُرِهٖ وَاَمْرِهٖ

### ಅಲ್ಲಾಹನ ಉಪದೇಶ

وَمَنْ اَظْلَمُ مِمَّنِ افْتَرٰى عَلَى اللّٰهِ كَذِبًا اَوْ كَذَّبَ بِاٰيٰتِهٖ ؕ اِنَّهٗ لَا يُفْلِحُ الظّٰلِمُوْنَ (الانعام:22)

(ಅಲ್‌ಅನ್‌ಆಂ : 22)

**ಅಂದರೆ: ಅಲ್ಲಾಹನ ಬಗ್ಗೆ ಸುಳ್ಳನ್ನು ಸೃಷ್ಟಿಸಿ ಹೇಳುವವನಿಗಿಂತ ಅಥವಾ ಅವನ ದೃಷ್ಟಾಂತಗಳನ್ನು ಸುಳ್ಳೆಂದು ಬಗೆಯುವವನಗಿಂತ ದೊಡ್ಡ ಅಧರ್ಮಿ ಯಾರು? ಖಂಡಿತವಾಗಿಯೂ ಅಧರ್ಮಿಗಳು ವಿಜಯ ಹೊಂದಲಾರರು.**

# ಅಹ್ಮದಿಯಾ ಜಮಾಅತಿನ ಕೇಂದ್ರ ಖಾದಿಯಾನ್ ದಾರುಲ್ ಅಮಾನ್‌ನಲ್ಲಿ 126ನೇ ವಾರ್ಷಿಕ ಸಮ್ಮೇಳನ ಅನುಗ್ರಹಪೂರ್ಣವಾದ ಯಶಸ್ವಿ ಆಯೋಜನೆ.

ಕೋವಿಡ್ ಮಹಾಮಾರಿಯು ಹೃದಯಗಳಲ್ಲಿರುವ ದ್ವೇಷ ದೂರ ಮಾಡಲಿಲ್ಲ? ಅಲ್ಲಾಹನ ಈ ಮುನ್ನೆಚ್ಚರಿಕೆಯಿಂದ ಮನುಷ್ಯನು ಯಾವುದೇ ಪಾಠವನ್ನು ಕಲಿಯುತ್ತಿಲ್ಲ. ಇದೇ ವರ್ತನೆ ಮುಂದುವರಿದರೆ ಅದರ ಭಯಂಕರವಾದ ಪರಿಣಾಮಗಳನ್ನು ಕಾಣಬಹುದು.

**ಇಂದು ನಾನು ಇಸ್ಲಾಮಿನ ಶಾಂತಿ ಶಿಕ್ಷಣಗಳ ಕುರಿತು ಕೆಲವು ನಿದರ್ಶನಗಳನ್ನು ಪ್ರಸ್ತುತಪಡಿಸುವೆನು. ಅದರಂತೆ ನಡೆದುಕೊಂಡರೆ ಲೋಕವು ಶಾಂತಿ ಮತ್ತು ಸಮಾಧಾನಗಳ ತಾಣವಾಗಬಹುದು.**

* ಇಸ್ಲಾಮ್ ಅನ್ಯಧರ್ಮಿಯರ ಸ್ಥಾಪಕರಿಗೆ ತಪ್ಪು ಆರೋಪಗಳನ್ನು, ನಿಂದನೆ ಮಾಡುವುದರಿಂದ ತಡೆಯುತ್ತದೆ.
* ಇಸ್ಲಾಮ್ ಎಲ್ಲಾ ಧರ್ಮಗಳನ್ನು ಸುಳ್ಳು ಎಂದು ಹೇಳುವುದಿಲ್ಲ. ಇಸ್ಲಾಂ ಹೇಳುವುದು ಪ್ರತಿ ಸಮುದಾಯದಲ್ಲೂ ಪ್ರವಾದಿಗಳು ಆಗಮಿಸಿರುವರು. ಪವಿತ್ರ ಖುರ್‌ಆನ್‌ನ ವಚನ **"ವ ಇಮ್ಮಿನ್ ಉಮ್ಮತಿನ್ ಇಲ್ಲಾ ಖಲಾ ಫೀಹಾ ನಝೀರ್"** ಪ್ರಕಾಶದಲ್ಲಿ ಒಬ್ಬ ಮುಸಲ್ಮಾನನು ಹಝ್‌ರತ್ ಈಸಾ(ಅ) ರನ್ನು, ಹಝ್‌ರತ್ ಮೂಸಾ(ಅ) ರನ್ನು ಅಥವಾ ಹಿಂದೂ ಅವತಾರಪುರುಷರನ್ನು ಗೌರವ ದೃಷ್ಟಿಯಿಂದ ನೋಡಲು ಬಾಧ್ಯಸ್ಥನಾಗಿರುತ್ತಾನೆ.
* ಇಸ್ಲಾಮ್ ಹೇಳುವುದು ಎಲ್ಲ ಧರ್ಮಗಳ ಅನುಯಾಯಿಗಳನ್ನು ಗೌರವಿಸಬೇಕು ಮತ್ತು ಎಲ್ಲ ಧರ್ಮಗಳ ಸ್ಥಾಪಕರನ್ನು ಗೌರವಿಸಬೇಕು.
* ಇಸ್ಲಾಮಿನ ಕುರಿತು ಒಂದು ತಪ್ಪು ಕಲ್ಪನೆ ಸೃಷ್ಟಿಸಲಾಗಿದೆ. ಇಸ್ಲಾಮ್ ಉಗ್ರವಾದದ ಧರ್ಮವಾಗಿದೆ. ಮತ್ತು ಪ್ರಾರಂಭದಲ್ಲಿ ದೌರ್ಜನ್ಯದಿಂದ ಮುಸಲ್ಮಾನರನ್ನಾಗಿ ಮಾಡಲಾಗಿದೆ. ನಿಜ ಹೇಳಬೇಕಾದರೆ ಇಸ್ಲಾಮ್ ಅದನ್ನು ಅಲ್ಲಗಳೆಯುತ್ತದೆ. ಈ ಲೋಕದಲ್ಲಿ ಇಸ್ಲಾಮ್ ಧರ್ಮವನ್ನು ಸ್ವೀಕರಿಸದ ಯಾರನ್ನೂ ಸಹ ಇಸ್ಲಾಮ್ ಶಿಕ್ಷಿಸಲಿಲ್ಲ. ಇಂದು ಸಹ ಮುಸಲ್ಮಾನರ ನಡತೆ ಇಸ್ಲಾಮಿನ ಶಿಕ್ಷಣದನ್ವಯ ಆದರೆ ಲೋಕದ ದೃಷ್ಟಿ ಇಸ್ಲಾಮ್‌ನತ್ತ ತಿರುಗಬಹುದು.

ಜಲ್ಸದ ಅನುಗ್ರಹಗಳನ್ನು ಭಾಗಿದಾರರು ಜೊತೆಯಲ್ಲಿ ಕೊಂಡು ಹೋಗುವವರಾಗಬೇಕು. ಲೋಕದ ಎಲ್ಲ ಕಡೆಯಿಂದಲು ಈ ಜಲ್ಸದ ಕಾರ್ಯಕ್ರಮಗಳನ್ನು ಆಲಿಸುವವರು. ಒಂದು ಉತ್ಸಾಹ ತಮ್ಮೊಳಗೆ ಸೃಷ್ಟಿಸಿಕೊಳ್ಳಬೇಕು ಮತ್ತು ತಮ್ಮ ಕ್ಷೇತ್ರಗಳಲ್ಲಿ ಇಸ್ಲಾಮಿನ ಪವಿತ್ರವಾದ ಶಿಕ್ಷಣಗಳ ಪ್ರಕಾಶದಲ್ಲಿ ಒಂದು ಕ್ರಾಂತಿಯನ್ನು ಹುಟ್ಟು ಹಾಕುವವರಾಗಬೇಕು.

**ಮುಸ್ಲಿಮ್ ಟೆಲಿವಿಷನ್ ಅಹ್ಮದಿಯಾ ಇಂಟರ್ ನ್ಯಾಷನಲ್ ಮೂಲಕ ಸಯ್ಯದ್‌ನಾ ಹಝ್‌ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್ (ಅಬಿಅ) ರವರು ಸಮ್ಮೇಳನವನ್ನುದ್ದೇಶಿಸಿ ಮಾಡಿದ ಅನುಗ್ರಹಪೂರ್ಣ ಸಂಬೋಧನೆ**

* ಕೋವಿಡ್ ಪರಿಸ್ಥಿತಿಗಳಿಂದಾಗಿ ಹುಝೂರ್ ಅನ್ವರ್(ಅತಬಿಅ) ಅವರ ಮಾರ್ಗದರ್ಶನದ ಮೇರೆಗೆ ಮತ್ತು ಸರಕಾರದ ಕೋವಿಡ್ ನಿಯಮಗಳನ್ವಯ ಸೀಮಿತ ನೆಲೆಯಲ್ಲಿ ಸಮ್ಮೇಳ ಆಯೋಜಿಸಲಾಗಿತ್ತು. * ಆದರೆ Live Streaming ಮೂಲಕ ಸಮ್ಮೇಳನದ ವಿಶಾಲವಾದ ನೆಲೆಯಲ್ಲಿ ಪ್ರಯೋಜನ ಪಡೆಯಲಾಯಿತು. * Live Streaming ಮೂಲಕ ಒಂದು ಲಕ್ಷ ಆರು ಸಾವಿರದ ಆರುನೂರ ನಲವತ್ತಾರು ಜನರು ಸಮ್ಮೇಳನದ ಕಾರ್ಯಕ್ರಮಗಳನ್ನು ನೋಡಿ, ಆಲಿಸಿ ಆನಂದಪಟ್ಟರು. * ಎಂಟು ದೇಶಗಳ ಜನರು ಪ್ರತಿನಿಧಿಸಿದ್ದರು. * ನಮಾಝ್ ತಹಜ್ಜುದ್ ಖುರ್‌ಆನ್ ಪಾಠ ಮತ್ತು ದೇವಸ್ಮರಣೆಯಿಂದ ವಾತಾವರಣ ತುಂಬಿತ್ತು. * ಉಲಮಾಅಗಳ (ಮತಪಂಡಿತರ) ಅರ್ಥಪೂರ್ಣ ಭಾಷಣಗಳು, ಆರು ಅನ್ಯದೇಶಿಯ ಭಾಷೆಗಳಲ್ಲಿ ಜಲ್ಸ ಕಾರ್ಯಕ್ರಮಗಳ ಅನುವಾದ, ಜಮಾಅತ್ ಬಾಂಧವರ ಹೆಚ್ಚಿನ ಜ್ಞಾನಾರ್ಜನೆಗಾಗಿ, ತರಬೇತಿ ಆಧಾರವಾಗಿ Documentary ಮತ್ತು ವಿವಿಧ ಮಾಹಿತಿಗಾಗಿ ವಸ್ತು ಪ್ರದರ್ಶನಗಳ ಆಯೋಜನೆ. * ವಿವಾಹಗಳ ಘೋಷಣೆ, ಪ್ರಿಂಟ್ ಮತ್ತು ಎಲೆಕ್ಟ್ರಾನಿಕ್ ಮೀಡಿಯಾದವರಿಂದ ಜಲ್ಸ ಸಮಾಚಾರಗಳ ಪ್ರಸಾರ. * ಹೀಗೆ ಶಾಂತಿಪೂರ್ಣ ಹಾಗೂ ಆಹ್ಲಾದಕರ ಪರಿಸರದಲ್ಲಿ ಜಲ್ಸದ ಎಲ್ಲ ಕಾರ್ಯಕ್ರಮಗಳು ಅಂತ್ಯಗೊಂಡವು.

***ವರದಿ: ಮನ್ಸೂರ್ ಅಹ್ಮದ್ ಮಸ್ರೂರ್ (ಮುನ್‌ತಝಿಮ್ ರಿಪೋರ್ಟಿಂಗ್)***

**(ಭಾಗ-2)**

**ದಿನಾಂಕ: 24 ಡಿಸೆಂಬರ್ ಜಲ್ಸದ ಪ್ರಥಮ ದಿನ**

**ಉದ್ಘಾಟನಾ ಅಧಿವೇಶನ**

ಜಲ್ಸ ಸಾಲಾನದ ಉದ್ಘಾಟನಾ ಅಧಿವೇಶನ ಮುಕರ್ರಮ್ ಮೌಲಾನಾ ಮುಹಮ್ಮದ್ ಕರೀಮುದ್ದೀನ್ ಶಾಹಿದ್ ಸಾಹಿಬ್ ಸದರ್ - ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್ ಅವರ ಅಧ್ಯಕ್ಷತೆಯಲ್ಲಿ ಜರುಗಿತು ಅದಕ್ಕಿಂತ ಮುಂಚೆ ಅವರು 10 ಗಂಟೆ ಸರಿಯಾಗಿ ಅಹ್ಮದಿಯತ್ತಿನ ಧ್ವಜಾರೋಹಣ ನೆರವೇರಿಸಿದರು. ಮತ್ತು ದುಆ ಮಾಡಿಸಿದರು. ಮುಕರ್ರಮ್ ತಾರಿಖ್ ಅಹ್ಮದ್ ಲೋನ್ ಸಾಹಿಬ್ ಆಫ್ ಕಾರಾಪುರ, ಕಾಶ್ಮೀರ, ಅವರು ಖುರ್‌ಆನ್ ಪಾರಾಯಣ ಮಾಡಿದರು ಅವರು ಸೂರಃ ಅನ್ವಾರಿನ 21-26 ವಚನಗಳನ್ನು ಪಠಿಸಿದರು. ಈ ವಚನಗಳ ಅನುವಾದ ಮುಕರ್ರಮ್ ಜಮಾಲ್ ಶರೀಅತ್ ಅಹ್ಮದ್ ಸಾಹಿಬ್ ನಾಇಬ್ ಇನ್ಚಾರ್ಜ್ ನೂರುಲ್ ಇಸ್ಲಾಮ್ ವಿಭಾಗ ನೆರವೇರಿಸಿಕೊಟ್ಟರು.

*(ಪುಟ 10ರಲ್ಲಿ ಮುಂದುವರಿಸಲಾಗಿದೆ)*

لَآ اِلٰہَ اِلَّا اللّٰہُ مُحَمَّدٌ رَّسُوْلُ اللّٰہِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِی الْعَالَمِ ۞ شَرَّ السُّمُوْمِ عَدَاوَۃُ الصُّلَحَاءِ

### ಶೇಖ್ ಮುಹಮ್ಮದ್ ಹುಸೇನ್ ಬಟಾಲ್ವಿಯರ ಅರಬಿ ಭಾಷೆ ಕಲಿಕೆಯ ಪರೀಕ್ಷೆ, ಮುಹಮ್ಮದ್ ಹುಸೇನ್ ಪರೀಕ್ಷೆಯಲ್ಲಿ ಉತ್ತೀರ್ಣರಾದರೆ ಅವರಿಗಾಗಿ ಐವತ್ತು ರೂಪಾಯಿಗಳ ಬಹುಮಾನ

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಈ ಬಹುಮಾನದ ಪಂಥಾಹ್ವಾನ ನಾವು ಅವರ ಗ್ರಂಥ "ಹುಜ್ಜತುಲ್ಲಾಹ್" ರೂಹಾನಿ ಖಝಾಯನ್ ಸಂಪುಟ 12 ರಿಂದ ಪ್ರಸ್ತುತಪಡಿಸುತ್ತಿದ್ದೆವು. ಮುಹಮ್ಮದ್ ಹುಸೇನ್ ಬಟಾಲ್ವಿ ಕುರಿತು ಹಿಂದಿನ ಸಂಚಿಕೆಗಳಲ್ಲಿ ಬರೆಯಲಾಗಿದೆ. ಈ ವ್ಯಕ್ತಿ ಜನಸಾಮಾನ್ಯರೊಂದಿಗೆ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರಿಗೆ ಅರೆಬಿ ಭಾಷೆ ಬರುವುದಿಲ್ಲ ಎಂಬ ಅಪಪ್ರಚಾರ ಮಾಡಿದನು. ಹಝ್ರತ್ ಮಸೀಹ್ ಮೌಊದ್(ಅ) ರವರ ಅರಬಿ ಗ್ರಂಥ ಹಾಗೂ ಬರಹಗಳ ಮೇಲೆ ಆಕ್ಷೇಪಗಳನ್ನು ಎತ್ತಿದನು. ಮತ್ತು ಒಂದು ಸಂದರ್ಭದಲ್ಲಿ ಅವರ ಒಂದು ಅರಬಿ ದಿವ್ಯವಾಣಿಯ ಮೇಲೂ ಆಕ್ಷೇಪ ಮಾಡಿ ಹೇಳಿದನು ಅರಬಿ ವ್ಯಾಕರಣದ ಪ್ರಕಾರ ಅರಬ್ ಪದ ಜೊತೆಗೆ ಲಾಮ್ ಬರುವುದಿಲ್ಲ ಬದಲಿಗೆ "ಮಿನ್" ಬರುತ್ತದೆ. ಮುಹಮ್ಮದ್ ಹುಸೇನ್ ಹೇಳುವ ಉದ್ದೇಶ ಅಲ್ಲಾಹನು ತಪ್ಪು ಮಾಡುವುದಿಲ್ಲ ಅಂದ ಮೇಲೆ ಮಸೀಹ್ ಮೌಊದ್(ಅ) ರವರು ಈ ದೇವವಾಣಿ ಎಂದು ಸುಳ್ಳು ಹೇಳಿದ್ದಾರೆ, (ನವೂಝು ಬಿಲ್ಲಾಹ್ ಮಿನ್ ಝಾಲಿಕ್) ಆದರೆ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು. ಹಿದಾಯತನ್ನು ಓದಿದ ಒಂದು ಮಗು ಸಹ ತಿಳಿಯುತ್ತದೆ. ವ್ಯಾಕರಣದ ಪ್ರಕಾರ ಲಾಮ್ ಸಹ ಮಿನ್ ವಿವರಿಸಿದಂತೆಯೇ ವಿವರಿಸಲಾಗುತ್ತದೆ. ಆದ್ದರಿಂದ ಮುಹಮ್ಮದ್ ಹುಸೇನ್‌ರಿಗೆ ಉಂಟಾದ ಅವಮಾನ ಹೇಳತೀರದು. ಅದರಿಂದ ಅವರ ಅರಬಿ ಕಲಿಕೆಯ ಮಟ್ಟ ಸಹ ತಿಳಿಯಬಹುದಾಗಿದೆ. ಅನಾವಶ್ಯಕವಾಗಿ "ಅನಾ ಆಯಲಮು' (ನಾನು ಬಲ್ಲವನಾಗಿದ್ದೇನೆ) ಎಂದು ಹುಂಕರಿಸಿ ತಂತಾನೆ ಅವಮಾನಕ್ಕೆ ಗುರಿಯಾದರು. ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ಶೇಖ್ ಮುಹಮ್ಮದ್ ಹುಸೇನ್‌ರವರ ಜಂಭವನ್ನು ಮುರಿಯಲು ಈ ಹಿಂದೆ ಸಹ ಎಷ್ಟೋ ಸಲ ಅವರಿಗೆ ಅರಬಿ ಬರಹ ಮತ್ತು ಅರಬಿಯಲ್ಲಿ ಪವಿತ್ರ ಖುರ್‌ಆನ್‌ನ ವ್ಯಾಖ್ಯಾನ ಬರೆಯಲು ಆಹ್ವಾನ ನೀಡಲಾಗಿತ್ತು. ಆದರೆ ಶೇಖ್ ಸಾಹೇಬರು ಎಂದೂ ಅದನ್ನು ಒಪ್ಪಲಿಲ್ಲ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಇದು ಅಲ್ಲಾಹನ ದೃಷ್ಟಾಂತ ಅಲ್ಲದೇ ಮತ್ತೇನು. ಒಬ್ಬ ವ್ಯಕ್ತಿ (ನಿಮ್ಮ ಅಭಿಪ್ರಾಯದಲ್ಲಿ ಅವನು ಅನಕ್ಷರಸ್ಥ, ಅವನಿಗೆ ಒಂದಿಷ್ಟು ಸಹ ಜ್ಞಾನವಿಲ್ಲ) ಎಲ್ಲಾ ಚಿಂತಕರಿಗೆ, ತನ್ನನ್ನು ದೊಡ್ಡ ಪಂಡಿತರೆಂದು ಕರೆಸಿಕೊಂಡವರಿಗೆ ಘಂಟಾಘೋಷವಾಗಿ ಆಹ್ವಾನನೀಡುತ್ತಿರುವಾಗ, ನಾನು ಬರೆದ ವ್ಯಾಖ್ಯಾನದ ಎದುರಾಗಿ ಅಂತಹುದೇ ವ್ಯಾಖ್ಯಾನ ನೀವು ಬರೆದು ತೋರಿಸಿದರೆ ಸಾವಿರ ರೂಪಾಯಿ ಬಹುಮಾನ ಕೊಡುವೆನು ಹಾಗೂ ನೂರುಲ್ ಹಖ್ ಗ್ರಂಥದಂತೆ ಬರೆದರೆ ಐದು ಸಾವಿರ ರೂಪಾಯಿಗಳನ್ನು ಮುಂಗಡವಾಗಿ ನಿಮಗೆ ಒಪ್ಪಿಸುವೆನು. ಎಂದರೂ ಯಾವ ಮೌಲ್ವಿಯೂ ಉಸಿರಾಡುವುದಿಲ್ಲ. ಅವರ ಪಾಂಡಿತ್ಯ ಇದೇ ಏನು? ಅದನ್ನು ಆಧರಿಸಿ ನನಗೆ ಕಾಫಿರ್ ಎಂದಿರುವರೆ. ಓ ಶೇಖನೇ ಈಗಲಾದರೂ ಆ ದಿವ್ಯವಾಣಿ ಪೂರ್ತಿ ಆಗಿದೆಯೋ ಇಲ್ಲವೋ? ಏನಾದರೂ ಬಾಕಿ ಇದೆಯೇ? ಒಂದು ಲೋಕವೇ ತಿಳಿದಿದೆ. ಮತ್ತು ಕಾಫರ್ ಫತ್ವಾ ಹೊರಡಿಸುವವರ ಬಂಡವಾಳ ಬಯಲಿಗೆ ಬರಲಿ ಎಂಬುದು ಆಗಿದೆ. ಕರಾಮತುಸ್ಸಾದಿಖೀನ್ ಗ್ರಂಥ ಆರಬಿಯಲ್ಲಿ ರಚಿಸಿದ್ದೇವೆ ಮತ್ತು ಅನಂತರ ಪತ್ರಿಕೆ ನೂರುಲ್ ಹಖ್ ಸಹ ಅರಬಿಯಲ್ಲಿ ಬರೆದಿದ್ದೇವೆ ಮತ್ತು ನಾನು ಸ್ಪಷ್ಟವಾಗಿ ಜಾಹೀರಾತು ನೀಡಿದ್ದೇನೆ. ಶೇಖ್ ಸಾಹಿಬ್ ಅಥವಾ ಕಾಫಿರ್ ಫತ್ವಾ ಹೊರಡಿಸಿದ ಎಲ್ಲಾ ಮೌಲ್ವಿಗಳಲ್ಲಿ ಒಬ್ಬರಾದರೂ ಕರಾಮತುಸ್ಸಾದಿಖೀನ್ ಗ್ರಂಥದಂತಹ ಗ್ರಂಥ ರಚಿಸಿ ತೋರಿಸಿದರೆ, ಅವರಿಗೆ ಒಂದು ಸಾವಿರ ರೂಪಾಯಿ ಬಹುಮಾನ ನೀಡುವೆನು. ನೂರುಲ್ ಹಖ್ ಗ್ರಂಥಕ್ಕೆ ಎದುರಾಗಿ ಬರೆದರೆ ಐದು ಸಾವಿರ ರೂಪಾಯಿ ನೀಡುವೆನು. ಆದರೆ ಎದುರಾಗಿ ಬರೆಯಲು ಅವರೆಲ್ಲರೂ ವಿಫಲಗೊಂಡರು. (ಸಿರ್‍ರುಲ್ ಖಿಲಾಫ್, ರೂಹಾನಿ ಖಝಾಈನ್, ಸಂಪುಟ–8, ಪುಟ–398)

ಅನಂತರ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) 'ಸಿರ್‍ರುಲ್ ಖಿಲಾಫ್" ಗ್ರಂಥ ರಚಿಸಿದರು. ಅದನ್ನು ಎದುರಿಸಲು ಸಹ ಮುಹಮ್ಮದ್ ಹುಸೇನ್ ಬಟೌಲ್ವಿ ಅವರಿಗೆ ಆಹ್ವಾನಿಸಿದರು. ಅವರು ತನ್ನ ಗ್ರಂಥಧ ಮುಖಪುಟದಲ್ಲಿಯೇ ಬರೆದರು. "ಈ ಗ್ರಂಥ ಶೇಖ್ ಮುಹಮ್ಮದ್ ಹುಸೇನ್ ಬಟೌಲ್ವಿ ಮತ್ತು ಇತರ ಕಾಫಿರ್ ಪತ್ವಾ ಹೊರಡಿಸಿದ ಮೌಲ್ವಿಗಳಿಗೆ ಅವರು ಮಾಡಿದ ಆರೋಪಗಳನ್ನು ಮತ್ತು ಅವರ ಪಾಂಡಿತ್ಯದ ಅಸಲಿಯತ್ತು ಜಾಹೀರುಪಡಿಸಲು 27 ರೂಪಾಯಿ ಬಹುಮಾನ ಕೊಡುವ ಭರವಸೆಯೊಂದಿಗೆ ಪ್ರಕಟಪಡಿಸಿದರು. ಅದಕ್ಕಾಗಿ 27 ದಿನಗಳ ಕಾಲವಕಾಶವು ನೀಡಲಾಯಿತು. ಈ 27 ದಿನಗಳು ದಿನಕ್ಕೊಂದು ರೂಪಾಯಿಯಂತೆ ಪರಿಗಣಿಸಲಾಯಿತು.

ಅಂದಹಾಗೆ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಈ ಹಿಂದೆಯೂ ಸಹ ಹಲವು ಬಾರಿ ಮುಹಮ್ಮದ್ ಹುಸೇನರಿಗೆ ಅರಬಿಯಲ್ಲಿ ತನ್ನ ಎದುರಿಗೆ ಬರೆಯಲು ಆಹ್ವಾನ ನೀಡಿದ್ದರು. ಆದರೆ ಮುಹಮ್ಮದ್ ಹುಸೇನರು ಒಮ್ಮೆಯೂ ಸಹ ಎದುರಿಗೆ ಹೊರಬರಲಿಲ್ಲ. ಎಲ್ಲ ಸಲ ಎದುರಿಸಲಾರದೇ ಪರಾರಿ ಮಾರ್ಗ ಹಿಡಿದು ಅವಮಾನಿತರಾದರು. ಆದರೆ ಶೇಖ್ ಸಾಹೇಬರು ಯಾವ ಮಣ್ಣಿನಿಂದ ಸೃಷ್ಟಿಸಲ್ಪಟ್ಟರು ಗೊತ್ತಿಲ್ಲ. ಹಿಂದಿನ ಎಲ್ಲಾ ಅವಮಾನಗಳನ್ನು ಕರಗಿಸಿಕೊಂಡು ಮತ್ತದೇ ಆರೋಪಗಳ ಸರಣಿ ಪ್ರಾರಂಭಿಸಿದ್ದಾರೆ. ಆಗ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಮತ್ತೊಮ್ಮೆ ನ್ಯಾಯಪೂರ್ತಿಕರಣದ ದೃಷ್ಟಿಯಿಂದ ತನ್ನ ಗ್ರಂಥ "ಹುಜ್ಜತುಲ್ಲಾಹ್" ದ ಪ್ರಾರಂಭದಲ್ಲಿಯೇ ಅವರ ಅರಬಿ ಪಾಂಡಿತ್ಯ ಜನರಿಗೆ ತಿಳಿಯುವಂತಾಗಲು ಅವರಿಗೆ ಐವತ್ತು ರೂಪಾಯಿಯ ಬಹುಮಾನದ ಪಂಥಾಹ್ವಾನ ನೀಡಿದರು. ಈ ಬಹುಮಾನದ ಪಂಥಾಹ್ವಾನ ಬಗ್ಗೆ ವಿವರಿಸುವ ಮೊದಲು ಮುಹಮ್ಮದ್ ಹುಸೇನ್‌ರವರ ಅರಬಿ ಅರ್ಹತೆಯ ಬಗ್ಗೆ ಒಂದಿಷ್ಟು ವಿವರ ನೀಡುವೆವು.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಶೇಖ್ ಬಟಾಲ್ವಿ ಸಾಹಿಬ್ ಈ ವಿನೀತನ ಅರಬಿ ಬರಹದ ಕೆಲ ನ್ಯೂನತೆಗಳನ್ನು ಎತ್ತಿ ತೋರಿಸಿದ್ದಾರೆ. ಅದರಿಂದ ಏನಾದರೂ ಸಾಬಿತಾಗುವಂತಿದ್ದರೆ ಶೇಖ್ ಸಾಹಿಬರ ಜಾಣತನ ಮತ್ತು ಲಜ್ಜೆಗೇಡಿತನ ಎಷ್ಟರಮಟ್ಟಿಗೆ ತಲುಪಿದೆ ಎಂದರೆ, ಅವರ ದೃಷ್ಟಿಯಲ್ಲಿ ಸರಿ ತಪ್ಪಾಗಿಯೂ, ಸಾಹಿತ್ಯ ಅವರ ದೃಷ್ಟಿಯಲ್ಲಿ ಅಸಾಹಿತ್ಯವಾಗಿಯೂ ಕಂಡುಬರುತ್ತದೆ. ಶೇಖ್ ಸಾಹೇಬರೇನಾದರೂ ತನ್ನ ಬಂಡವಾಳ ತಾನೇ ಬಯಲಿಗೆ ತರಿಸಿಕೊಳ್ಳುತ್ತಾರೆ ಗೊತ್ತಿಲ್ಲ. ಏನೇನೆಲ್ಲ ಅವಮಾನಗಳು ಅವರ ನಸೀಬಿನಲ್ಲಿದೆ. ಕೆಲ ವಿದ್ವಾಂಸರು ಅವರ ಮಾತುಗಳನ್ನು ಕೇಳಿ, ಈ ತರಹದ ಆರೋಪಗಳನ್ನು ತಿಳಿದು ಅವರ ಮೇಲೆ ಕನಿಕರಪಡುತ್ತಾರೆ. ಏನಾದರೂ ಈ ವ್ಯಕ್ತಿ ಇಷ್ಟರಮಟ್ಟಿಗೆ ಹುದಿಲಿನಲ್ಲಿ ಸಿಕ್ಕಿಬಿದ್ದಿದ್ದಾರೆ. (ಕರಾಮತುಸ್ಸಾದಿಖೀನ್. ರೂಹಾನಿ ಖಝಾಈನ್, ಸಂಪುಟ–7, ಪುಟ–63).

ನಾನು ಜನರಿಗೆ ದೃಢಪಡಿಸಬಯಸುತ್ತೇನೆ. ಶೇಖ್ ಬಟೌಲ್ವಿ ಅರಬಿ ಜ್ಞಾನದಿಂದ ಏನೇನೂ ಅರಿವು ಹೊಂದಿಲ್ಲ. ಅರಬಿಯ ನ್ಯೂನತೆ ಕಂಡುಹಿಡಿಯಲು ಆಧುನಿಕ ಸಾಹಿತ್ಯ ಮತ್ತು ಹಳೆಯ ಅರಬ್ ಸಾಹಿತ್ಯದ ಮೇಲೆ ಹಿಡಿತ ಹೊಂದಿದವರಿಂದ ಮಾತ್ರ ಸಾಧ್ಯ. ಅರಬಿಯ ವ್ಯಾಕರಣ, ನುಡಿಗಟ್ಟು ತಿಳಿದಿರಬೇಕು. ಸಾವಿರಾರು ಪದ್ಯದ ಸಾಲುಗಳು ಅವರ ಮುಂದಿರಬೇಕು, ಆದರೆ ಈ ಪರಪುಟ್ಟನಿಗೆ ಉರ್ದು ಸಾಹಿತ್ಯ ಸಹ ಗೊತ್ತಿಲ್ಲ. ಮತ್ತೆ ನೋಡಿದರೆ ಅದರಲ್ಲಿಯೇ ಅವರ ಗಡ್ಡ ಬಿಳಿಯಾಗಿದೆ. ಒಂದು ಎರಡು ಮೂರು ನೂರು ಸಾಲಿನ ಪದ್ಯವನ್ನಾದರೂ ಬರೆದಿದ್ದನ್ನೊ ಅಥವಾ ಹೇಳಿದ್ದನ್ನು ಯಾರಾದರೂ ಕೇಳಿರುವರೆ, ನನಗಂತೂ ಅವರು ಒಂದೇ ಒಂದು ಸಾಲು ಸಹ ಸಾಹಿತ್ಯದಿಂದ ಕೂಡಿದ್ದು ಅವರಿಂದ ಬರೆಯಲು ಸಾಧ್ಯವಿಲ್ಲ. (ಅದೇ ಪುಟ–164).

"ಹುಜ್ಜತುಲ್ಲಾಹ್" ಗ್ರಂಥದಲ್ಲಿ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಮುಹಮ್ಮದ್ ಹುಸೇನ್ ಬಟಾಲ್ವಿಯವರ ಅರಬಿ ಅರ್ಹತೆ, ಜನರಲ್ಲಿ ಬಯಲುಗೊಳಿಸಲು ಪಂಥಾಹ್ವಾನ ನೀಡಿದ್ದನ್ನು ನಾವು ಈ ಕೆಳಗೆ ಪ್ರಸ್ತುತಪಡಿಸುವೆವು. ಅವರು ನುಡಿದರು.

ಎಲ್ಲೈ ವೀಕ್ಷಕರೇ ಮತ್ತು ಸರಿ ತಪ್ಪುಗಳಲ್ಲಿ ವ್ಯತ್ಯಾಸ ಕಂಡುಹಿಡಿಯುವ ಅರ್ಹತೆಯುಳ್ಳವರೇ, ನೀವು ತಿಳಿದಿದ್ದೀರಿ, ನಾನು ಈ ಹಿಂದೆ ಅರಬಿಯಲ್ಲಿ ಕೆಲ ಗ್ರಂಥಗಳನ್ನು ಬರೆದಿದ್ದೆ. ಆ ಗ್ರಂಥಗಳನ್ನು ಒಂದು ಮನೆಗೆ ಶೃಂಗರಿಸಿದಂತೆ ಶೃಂಗರಿಸಿದ್ದೆ ಮತ್ತು ಉನ್ನತಿಕರಿಸಿದ್ದೆ. ಮತ್ತು ನೀವು

*(ಪುಟ ಸಂಖೆ 09 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಹಝ್ರತ್ ಅಬೂಬಕರ್(ರ) ಅವರ ಪ್ರಾಮಾಣಿಕತೆ ಮತ್ತು ನಿಷ್ಠೆಯ ಉದಾಹರಣೆಯನ್ನು ತೋರಿಸಿದರು, ಅದು ಶಾಶ್ವತತೆಯವರೆಗೆ ಉದಾಹರಣೆಯಾಗಿ ಉಳಿಯುತ್ತದೆ. (ಹಝ್ರತ್ ಮಸೀಹ್ ಮೌಊದ್(ಅ))**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ್, ಸಿದ್ದೀಖೆ ಅಕ್ಬರ್ ಹಝ್ರ್‌ರತ್ ಅಬೂಬಕರ್ ಸಿದ್ದೀಖ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಪ್ರವಾದಿ ಮುಹಮ್ಮದ್(ಸ) ಅವರು ಮಕ್ಕದಿಂದ ಮದೀನಕ್ಕೆ ಹೊರಡುವಾಗ ಮಕ್ಕ ಪಟ್ಟಣಕ್ಕೆ ಕೊನೆಯ ಬಾರಿಗೆ ನೋಡಿ ಬಹಳ ದುಃಖದಿಂದ ನಗರವನ್ನು ಉದ್ದೇಶಿಸಿ ಹೇಳಿದರು: ಓ ಮಕ್ಕಾ ಪಟ್ಟಣ! ನೀನು ನನಗೆ ಎಲ್ಲಕ್ಕಿಂತ ಹೆಚ್ಚು ಪ್ರಿಯವಾಗಿದ್ದೆ, ಆದರೆ ನಿನ್ನ ಜನರು ನನ್ನನ್ನು ಇಲ್ಲಿ ಉಳಿಯಲು ಬಿಡುವುದಿಲ್ಲ. ಆ ಸಮಯದಲ್ಲಿ, ಹಝ್ರತ್ ಅಬೂಬಕರ್(ರ) ಅವರು ಬಹಳ ದುಃಖದಿಂದ ಹೇಳಿದರು: ಈ ಜನರು ತಮ್ಮ ಪ್ರವಾದಿಯನ್ನು ಹೊರಹಾಕಿದ್ದಾರೆ, ಈಗ ಅವರು ಖಂಡಿತವಾಗಿಯೂ ನಾಶವಾಗುತ್ತಾರೆ.**

**ಮೂರು ದಿವಂಗತರಾದ ಮುಲ್ತಾನ್ ಜಿಲ್ಲೆಯ ಅಮೀರ್ ಆಗಿದ್ದ ಸನ್ಮಾನ್ಯ ಮಲಿಕ್ ಫಾರೂಖ್ ಅಹ್ಮದ್ ಖೋಖರ್ ಸಾಹಿಬ್, ಇಂಡೋನೇಶ್ಯದ ರಹ್ಮತುಲ್ಲಾಹ್ ಸಾಹಿಬ್, ಮತ್ತು ಯಾರೀಪೂರ ಕಾಶ್ಮೀರದ ಅಲ್‌ಹಾಜ್ ಅಬ್ದುಲ್ ಹಮೀದ್ ಟಾಕ್ ಸಾಹಿಬ್‌ರ ಪತ್ನಿಯಾದ ಖಾನಿತ ಝುಫರ್ ಸಾಹಿಬ್‌ರವರ ಸದ್ಗುಣಗಳ ಪ್ರಸ್ತಾವನೆ ಹಗೂ ನಮಾಝೆ ಜನಾಝ ನಿರ್ವಹಣೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **31-12-2021** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ
أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ
اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔
اِيَّاكَ نَعْبُدُ وَاِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔
صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಕಳೆದ ಖುತ್ಬದಲ್ಲಿ ಹಝ್ರತ್ ಅಬೂಬಕರ್(ರ)ರ ಸೌರ್ ಗುಹೆಯ ಘಟನೆಯ ಪ್ರಸ್ತಾಪ ನಡೆಯುತ್ತಿತ್ತು. ಸೌರ್ ಗುಹೆಯ ಸಮೀಪಕ್ಕೆ ಶತ್ರುಗಳು ತಲುಪಿದ ಘಟನೆಯ ಬಗ್ಗೆ ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳುತ್ತಾನೆ: ನೀವು ಪ್ರವಾದಿಗೆ ನೆರವು ನೀಡದಿದ್ದರೆ ತಿಳಿದುಕೊಳ್ಳಿರಿ, ಅವಿಶ್ವಾಸಿಗಳು ಅವರನ್ನು ತನ್ನ ಊರಿನಿಂದ ಬಹಿಷ್ಕರಿಸಿದಾಗ ದಿಟವಾಗಿಯೂ ಅಲ್ಲಾಹನು ಅವರಿಗೆ ನೆರವಿತ್ತಿದ್ದನು – ಅವರು ಇಬ್ಬರಲ್ಲಿ ಒಬ್ಬರಾಗಿದ್ದರು – ಅವರೀರ್ವರೂ ಆ ಗುಹೆಯಲ್ಲಿದ್ದಾಗ; 'ನೀನು ವ್ಯಥೆಪಡಬೇಡ, ಖಂಡಿತವಾಗಿಯೂ ಅಲ್ಲಾಹನು ನಮ್ಮೊಂದಿಗಿದ್ದಾನೆ' ಎಂದು ಅವರು ತನ್ನ ಸಂಗಡಿಗನೊಡನೆ ಹೇಳಿದ್ದಾಗ. ಆ ಸಂದರ್ಭದಲ್ಲಿ ಅಲ್ಲಾಹನು ತನ್ನ ಕಡೆಯಿಂದಿರುವ ಸಾಂತ್ವನವನ್ನು ಅವರಿಗೆ ಇಳಿಸಿಕೊಟ್ಟನು. ನಿಮಗೆ ಅಗೋಚರವಾದ ಸೈನ್ಯಗಳಿಂದ ಅವನು ಅವರಿಗೆ ಬೆಂಬಲವಿತ್ತನು ಹಾಗೂ ಅವಿಶ್ವಾಸಿಗಳ ಮಾತನ್ನು ನಿಷ್ಫಲಗೊಳಿಸಿದನು. ಅಲ್ಲಾಹನ ವಚನ ಮಾತ್ರವೇ ಸರ್ವೋನ್ನತವಾದುದು. ಅಲ್ಲಾಹನು ಪ್ರತಾಪವಂತನೂ ವಿವೇಕಶಾಲಿಯೂ ಆಗಿದ್ದಾನೆ.

ಪವಿತ್ರ ಖುರ್‌ಆನಿನಲ್ಲಿ ಸೌರ್ ಗುಹೆಯ ಬಗ್ಗೆ ಈ ಉಲ್ಲೇಖವೂ ಇದೆ ಅಂದರೆ ಮಕ್ಕದ ಸತ್ಯನಿಷೇಧಿಗಳು ಗುಹೆಯ ಮುಂಭಾಗದಲ್ಲಿ ನಿಂತುಕೊಂಡು ಮಾತನಾಡುತ್ತಿದ್ದಾಗ ಹಝ್ರ್‌ರತ್ ಪೈಗಂಬರ್(ಸ) ಹಿಡಿಯಲ್ಪಡುವರು ಎಂಬ ಶಂಕೆಯಿಂದ ಹಝ್ರ್‌ರತ್ ಅಬೂಬಕರ್(ರ) ಗಾಬರಿಗೊಂಡರು. ಆಗ ಹಝ್ರ್‌ರತ್ ಪೈಗಂಬರ್(ಸ) ಹೇಳಿದರು: **ಲಾ ತಹ್‌ಝುನ್ ಇನ್ನಲ್ಲಾಹ ಮಅನಾ**. ದುಃಖಿಸಬೇಡ, ಖಂಡಿತವಾಗಿಯೂ ಅಲ್ಲಾಹನು ನಮ್ಮೊಂದಿಗಿದ್ದಾನೆ. (ಶರಹ್ ಝುರ್‌ಖಾನಿ ಅಲಲ್ ಮವಾಹಿಬ್, ಭಾಗ-2, ಪುಟ-122-123, ದಾರುಲ್ ಕುತುಬ್ ಇಲ್ಮಿಯ ಬೈರೂತ್ 1996)

ಪ್ರವಾದಿ(ಸ)ರವರನ್ನು ಹಿಂಬಾಲಿಸುತ್ತ ಜನರು ಸೌರ್ ಗುಹೆಯಿರುವ ಪರ್ವತದ ಬಳಿಗೆ ತಲುಪಿದ ನಂತರ ಪತ್ತೆದಾರನು ಹೇಳಿದನು: ಅವರಿಬ್ಬರೂ ಇಲ್ಲಿಂದ ಮುಂದಕ್ಕೆ ಹೋಗಿಲ್ಲ. (ತಾರೀಖ್ ಅಲ್‌ಖಮೀಸ್, ಸಂಪುಟ-2, ಪುಟ-15, ದಾರುಲ್ ಕುತುಬ್ ಇಲ್ಮಿಯ 2009)

ಸೌರ್ ಗುಹೆಯ ಮೊಂಭಾಗದಲ್ಲಿ ನಿಂತು ಪತ್ತೆದಾರರು ಈ ಮಾತುಗಳನ್ನು ಆಡುವಾಗ ಯಾರೋ ಗುಹೆಯ ಒಳಗೆ ಇಣುಕಲು ಪ್ರಯತ್ನಿಸಿದರು. ಆಗ ಉಮಯ್ಯ ಬಿನ್ ಖಲ್ಫ್ ಕಠಿಣವಾಗಿ ಮತ್ತು ಪರಿವೆಯಿಲ್ಲದೆ ಹೀಗೆ ಹೇಳಿದನು: ಈ ಬಲೆ ಮತ್ತು ಮರವನ್ನು ನಾನು ಮುಹಮ್ಮದ್‌ರ (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ಜನನಕ್ಕಿಂತ ಮುಂಚಿನಿಂದಲೇ ನೋಡುತ್ತಿದ್ದೇನೆ. ನಿಮ್ಮ ಬುದ್ಧಿ ಕೆಟ್ಟು ಹೋಗಿವೆ. ಅವರು ಇಲ್ಲಿ ಹೇಗೆ ಇರಲು ಸಾಧ್ಯ? (ಅಲ್‌ಮವಾಹಿಬ್ ಲಿದ್ದುನಿಂಯಾ, ಸಂಪುಟ-1, ಪುಟ-292-293, ಅಲ್‌ಮಕ್ತಬ್ ಇಸ್ಲಾಮಿಯ ಬೈರೂತ್ 2004)

ಹಝ್ರ್‌ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೇಳುತ್ತಾರೆ: ಮುಹಮ್ಮದ್(ಸ)ರನ್ನು ಜೀವಂತವಾಗಿ ಅಥವಾ ಮೃತರಾದ ಸ್ಥಿತಿಯಲ್ಲಿ ಹಿಡಿದು ತರುವವರಿಗೆ ಮಕ್ಕದ ಖುರೈಶಿಗಳು ನೂರು ಒಂಟೆಗಳ ಬಹುಮಾನದ ಘೋಷಣೆಯನ್ನು ಮಾಡಿದ್ದರು. ಈ ಬಹುಮಾನದ ಲಾಲಸೆಯಿಂದ ಅನೇಕ ಜನರು ಮಕ್ಕದ ನಾಲ್ಕೂ ಕಡೆಗಳಿಗೆ ಹೊರಟಿದ್ದರು. ಖುರೈಶಿನ ಸರದಾರರು ಗುಹೆಯ ಬಳಿಗೆ ತಲುಪಿದಾಗ ಅವರು ಹೀಗೆ ನೋಡಿದರು: ಗುಹೆಯ ಮುಂಭಾಗದಲ್ಲಿ ಇದ್ದ ಮರದ ಕೊಂಬೆಗಳಲ್ಲಿ ಗುಹೆಯ ನೇರ ಮುಖಭಾಗದಲ್ಲಿ ಇದ್ದ ಕೊಂಬೆಯಲ್ಲಿ ಒಂದು ಪಾರಿವಾಳ ಗೂಡು ಕಟ್ಟಿ ಮೊಟ್ಟೆಗಳನ್ನು ನೀಡಿತ್ತು ಮತ್ತು ಜೇಡ ಬಲೆಯನ್ನು ಹೆಣೆದಿತ್ತು. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಮುಂದೆ ಹೇಳುತ್ತಾರೆ: ಬಾಹ್ಯವಾಗಿ ಇದು ದುರ್ಬಲ ವರದಿಯಾಗಿದೆ. ಆದರೆ ಹೀಗೆ ನಡೆದಿದ್ದರೂ ಅಚ್ಚರಿಯ ಮಾತೇನಲ್ಲ. ಏಕೆಂದರೆ ಜೇಡವು ಕೆಲವೊಮ್ಮೆ ಕೆಲವು ನಿಮಿಷಗಳಲ್ಲಿ ಒಂದು ವಿಸ್ತಾರ ಜಾಗದಲ್ಲಿ ಬಲೆಯನ್ನು ಮಾಡುತ್ತದೆ ಮತ್ತು ಪಾರಿವಾಳಕ್ಕೂ ಗೂಡು ಕಟ್ಟಲು ಮತ್ತು ಮೊಟ್ಟೆಗಳನ್ನು ಹಾಕಲು ಹೆಚ್ಚು ತಡವಾಗುವುದಿಲ್ಲ. ಆದ್ದರಿಂದ ಅಲ್ಲಾಹನು ತನ್ನ ಪ್ರವಾದಿಯ ಸಂರಕ್ಷಣೆಗಾಗಿ ಇಂತಹ ಏರ್ಪಾಡು ಮಾಡುವುದು ಅಸಂಭವನೀಯವಾದ ಸಂಗತಿಯೇನಲ್ಲ. ಬದಲಾಗಿ ಆ ಹೊತ್ತಿನಲ್ಲಿ ಹೀಗೆ ಆಗುವ ಸಂಪೂರ್ಣ ಸಾಧ್ಯತೆಯಿದೆ.

ಖುರೈಶಿಗಳು ಎಷ್ಟು ಸಮೀಪಕ್ಕೆ ತಲುಪಿದ್ದರು ಎಂದರೆ, ಅವರ ಕಾಲುಗಳು ಗುಹೆಯ ಒಳಗಿನಿಂದ ಕಾಣಬಹುದಾಗಿತ್ತು. ಅವರ ಶಬ್ದ ಕೇಳುತ್ತಿತ್ತು ಎಂದು ವರದಿಯಲ್ಲಿ ಬಂದಿದೆ.

ಆ ಸಂದರ್ಭದಲ್ಲಿ ಹಝ್ರತ್ ಅಬುಬಕರ್(ರ) ಭಯಭೀತರಾದರು ಆದರೆ ಪ್ರವಾದಿ(ಸ.ಅ) ಅವರನ್ನು ಮೃದುವಾಗಿ ಕೇಳಿದರು: ಯಾ ರಸೂಲಲ್ಲಾಹ್! ಖುರೈಶಿಗಳು ಎಷ್ಟು ಹತ್ತಿರದಲ್ಲಿದ್ದಾರೆ ಎಂದರೆ ಅವರ ಪಾದಗಳು ಗೋಚರಿಸುತ್ತವೆ ಮತ್ತು ಅವರು ಸ್ವಲ್ಪ ಮುಂದೆ ನೋಡಿದರೆ ಅವರು ನಮ್ಮನ್ನು ನೋಡಬಹುದು. ಅದಕ್ಕೆ ಪ್ರವಾದಿ(ಸ) ನುಡಿದರು: **ಲಾ ತಹ್‌ಝುನ್ ಇನ್ನಲ್ಲಾಹ ಮಅನ** ಅಂದರೆ, ಚಿಂತಿಸಬೇಡಿ, ಅಲ್ಲಾಹನು ನಮ್ಮೊಂದಿಗಿದ್ದಾನೆ, ನಂತರ ಅವರು ಹೇಳಿದರು: **ವಮಾ ಝುನ್ನುಕ ಯಾ ಅಬಾಬಕ್ರಿ ಬಿಇಸ್ನೈನಲ್ಲಾಹು ಸಾಲಿಸುಹುಮಾ** ಅಂದರೆ, ಓ ಅಬೂಬಕರ್! ಮೂರನೆಯವರೊಂದಿಗೆ ಅಲ್ಲಾಹನಿರುವ ಆ ಇಬ್ಬರು ಜನರ ಬಗ್ಗೆ ನೀವು ಏನು ಯೋಚಿಸುತ್ತೀರಿ? ಮತ್ತೊಂದು ವರದಿಯ ಪ್ರಕಾರ, ಖುರೈಶಿಗಳು ಗುಹೆಯ ಬಾಯಿಯನ್ನು ತಲುಪಿದಾಗ, ಹಝ್ರತ್ ಅಬೂಬಕರ್(ರ) ಭಯಭೀತರಾದರು. ಅವರ ಗಾಬರಿಯನ್ನು ಕಂಡ ಪ್ರವಾದಿ(ಸ) ಅವರಿಗೆ ಆತಂಕಪಡುವ ಅಗತ್ಯವಿಲ್ಲ ಎಂದು ಸಮಾಧಾನಪಡಿಸಿದರು. ಹಝ್ರತ್ ಅಬೂಬಕರ್(ರ) ಕೋಮಲ ಧ್ವನಿಯಲ್ಲಿ ಹೇಳಿದರು: **ಇನ್‌ಖುತಿಲ್‌ತು ಫಅನಾ ರಜುಲುನ್ ವಾಹಿದುನ್ ವಇನ್‌ಖುತಿಲ್‌ತ ಅನ್‌ತ ಹಲಕತಿಲ್**

**ಉಮ್ಮತು** ಅಂದರೆ ಯಾ ರಸೂಲಲ್ಲಾಹ್! ಯಾ ರಸೂಲಲ್ಲಾಹ್, ನಾನು ಕೊಲ್ಲಲ್ಪಟ್ಟರೆ ನಾನಂತು ಒಂದು ಜೀವ ಮಾತ್ರ. ಆದರೆ ನಿಮಗೆ ಏನಾದರೂ ಹಾನಿಯಾದರೆ ಸಂಪೂರ್ಣ ಸಮುದಾಯ ಅಳಿಯಲ್ಪಡುವುದು. ಸರ್ವಶಕ್ತನಾದ ಅಲ್ಲಾಹನಿಂದ ಇಲ್‌ಹಾಮ್ ಪಡೆದು ಅವರು(ಸ) ಹೇಳಿದರು: **ಲಾ ತಹ್‌ಝುನ್ ಇನ್ನಲ್ಲಾಹ ಮಅನ** ಎಂದಿಗೂ ಚಿಂತಿಸಬೇಡಿ ಏಕೆಂದರೆ ಅಲ್ಲಾಹನು ನಮ್ಮೊಂದಿಗಿದ್ದಾನೆ ಮತ್ತು ನಾವಿಬ್ಬರೂ ಅವನ ರಕ್ಷಣೆಯಲ್ಲಿದ್ದೇವೆ ಅಂದರೆ, ನೀವು ನನ್ನ ಬಗ್ಗೆ ಚಿಂತೆ ಮಾಡುತ್ತಿದ್ದೀರಿ ಮತ್ತು ನಿಮ್ಮ ಪ್ರಾಮಾಣಿಕತೆಯಲ್ಲಿ ನಿಮಗೆ ನಿಮ್ಮ ಜೀವನದ ಬಗ್ಗೆ ಕುರಿತು ಯಾವುದೇ ಚಿಂತೆ ಇಲ್ಲ ಆದರೆ ಸರ್ವಶಕ್ತನಾದ ಅಲ್ಲಾಹನು ಈ ಸಮಯದಲ್ಲಿ ನನ್ನ ರಕ್ಷಕ ಮಾತ್ರವಲ್ಲದೆ ನಿಮ್ಮ ರಕ್ಷಕನೂ ಆಗಿದ್ದಾನೆ ಮತ್ತು ಅವನು ನಮ್ಮಿಬ್ಬರನ್ನು ವೈರಿಗಳಿಂದ ರಕ್ಷಿಸುವನು.

(ಸೀರತ್ ಖತಮುನ್ನಬೀಈನ್, ಪುಟ–237–239)

ಇದು ಸೀರತ್ ಖಾತುಮುನ್ನಬೀಈನ್‌ನ ಉಲ್ಲೇಖವಾಗಿದೆ. ಹಝ್ರತ್ ಮುಸ್ಲಿಹ್ ಮೌಊದ್(ರ) ಇದರ ಕುರಿತು ಒಂದೆಡೆ ಹೇಳುತ್ತಾರೆ: ರಸೂಲುಲ್ಲಾಹ್(ಸ) ಅವರನ್ನು ಅಲ್ಲಾಹನ ಕಡೆಯಿಂದ ಹಿಜ್ರತ್ ಮಾಡಲು ಆದೇಶವಾದಾಗ ಅವರು ಹಝ್ರತ್ ಅಬೂಬಕರ್(ರ) ಅವರನ್ನು ತಮ್ಮೊಂದಿಗೆ ಕರೆದುಕೊಂಡು ಮೆಕ್ಕಾದಿಂದ ಆರು ಅಥವಾ ಏಳು ಮೈಲುಗಳಷ್ಟು ದೂರವಿರುವ ಸೌರ್ ಪರ್ವತದ ಮೇಲಿರುವ ಗುಹೆಯಲ್ಲಿ ಅಡಗಿಕೊಂಡರು. ಬೆಳಿಗ್ಗೆ, ಪ್ರವಾದಿ(ಸ) ಅವರು ತಮ್ಮ ಮನೆಯಲ್ಲಿ ಇಲ್ಲದಿರುವುದನ್ನು ಮತ್ತು ಎಲ್ಲಾ ಕಾವಲುಗಾರರ ಹೊರತಾಗಿಯೂ, ಪ್ರವಾದಿ(ಸಲ್ಲಲ್ಲಾಹು ಅಲೈಹಿವಸಲ್ಲಮರು) ಯಶಸ್ವಿಯಾಗಿ ಹೊರಟುಹೋದುದನ್ನು ಕಂಡ ಸತ್ಯನಿಷೇಧಿಗಳು ತಕ್ಷಣ ಅವರನ್ನು ಹುಡುಕಲು ಹೊರಟಿದರು ಮತ್ತು ಕೆಲವು ಮಕ್ಕಾದ ಅತ್ಯುತ್ತಮ ಪತ್ತೆದಾರರನ್ನು ಕಡೆದುಕೊಂಡು ಹೋದರು ಅವರು ಇವರನ್ನು ಸೌರ್ ಪರ್ವತದ ತನಕ ತಲುಪಿಸಿದರು. ಆ ಸಂದರ್ಭದಲ್ಲಿ ಶತ್ರುಗಳು ಗುಹೆಯ ತುದಿಯಲ್ಲಿ ನಿಂತಿದ್ದರು ಮತ್ತು ಗುಹೆಯ ಬಾಯಿ ಕಿರಿದಾಗಿರಲಿಲ್ಲ, ಒಳಗೆ ಇಣುಕಿ ನೋಡುವುದು ಕಷ್ಟಕರವಾಗಿರಲಿಲ್ಲ ಆದರೆ ಅದು ವಿಶಾಲವಾದ ಬಾಯಿ ತೆರೆದ ಗುಹೆಯಾಗಿದ್ದು, ಇದರಲ್ಲಿ ಯಾರಾದರೂ ಸಹ ಇಣಿಕಿ ನೋಡಿ ಅವರನ್ನು ಸುಲಭವಾಗಿ ಕಂಡುಹಿಡಿಯಬಹುದಾಗಿತ್ತು. ಆದರೆ ಅಂತಹ ಪರಿಸ್ಥಿತಿಯಲ್ಲಿಯೂ ಸಹ, ಪ್ರವಾದಿ ಮುಹಮ್ಮದ್(ಸ) ಅವರ ಮೇಲೆ ಯಾವುದೇ ಭಯದ ಆತಂಕವಿರಲಿಲ್ಲ, ಬದಲಿಗೆ ಒಂದು ದೈವಶಕ್ತಿಯ ಅನುಗ್ರಹದಿಂದ ಹಝ್ರತ್ ಅಬೂಬಕರ್(ರ) ರವರ ಹೃದಯವು ದೃಢವಾಯಿತು ಮತ್ತು ಅವರು ಹಝ್ರತ್ ಮೂಸ(ರ)ರವರ ಸಂಗಡಿಗರ ಹಾಗೆ ನಾವು ಹಿಡಿಯಲ್ಪಟ್ಟೆವು ಎಂದು ಹೇಳಲಿಲ್ಲ ಬದಲಿಗೆ ಇಂತಹ ಸಂದರ್ಭದಲ್ಲಿ ಅವರು ಹೇಳಿದ್ದು ಯಾ ರಸೂಲಲ್ಲಾಹ್(ಸ)!! ಶತ್ರುಗಳು ಎಷ್ಟು ಸಮೀಪಕ್ಕೆ ತಲುಪಿರುವರು ಎಂದರೆ, ಅವರು ನೋಡಲು ಬಯಸುವುದಾದರೆ ನೋಡಬಹುದಾಗಿದೆ ಆದರೆ ಪ್ರವಾದಿ(ಸ) ಹೇಳಿದರು: **ಉಸ್ಕುತ್ ಯಾ ಅಬಾ ಬಕರಿನ್ ಇಸ್ನಾನಿಲ್ಲಾಹು ಸಾಲಿಸುಹುಮಾ**. ಅಬೂಬಕರ್!! ಮೌನವಾಗಿರಿ. ನಾವು ಈ ಸಂದರ್ಭದಲ್ಲಿ ಇಬ್ಬರಲ್ಲ ಮೂರು ಜನವಿರುವುದು ನಮ್ಮೊಂದಿಗೆ ಮೂರನೇಯವನು ಅಲ್ಲಾಹನಿದ್ದಾನೆ ಹೀಗಾಗಿ ಅವರು ನಮಗೆ ನೋಡಲು ಹೇಗೆ ಸಾಧ್ಯ. ತದನಂತರ ಹೀಗೆಯೇ ಆಯಿತು. ಶತ್ರುಗಳು ಗುಹೆಯ ಮುಂಭಾಗಕ್ಕೆ ತಲುಪಿದ್ದರೂ, ಮುಂದೆ ಚಲಿಸುವ ಶಕ್ತಿಯಿಲ್ಲದೆ ಅಲ್ಲಿಂದ ಇಣುಕಿ ನೋಡದೆ ದುರಂತದ ಮಾತುಗಳನ್ನು ಗೊಣಗುತ್ತಾ ಹಿಂತಿರುಗಿದರು. ಈ ಘಟನೆಯ ಒಂದು ಅಂಶವೆಂದರೆ ಹಝ್ರತ್ ಮೂಸ(ಅ) ಅವರ ಸಹಚರರು ಭಯಭೀತರಾಗಿ ಹೇಳಿದರು: ಹೇ ಮೂಸಾ, ನಾವು ಹಿಡಿಗೂಡಲ್ಪಟ್ಟೆವು. ಆದರೆ ಮುಹಮ್ಮದ್(ಸ)ರಿಗೆ ಅಲ್ಲಾಹನೊಂದಿಗೆ ಇದ್ದ ಭರವಸೆಯ ಪ್ರಭಾವ ಅವರ ಸಂಗಡಿಗನ ಮೇಲೆಯೂ ಆಗಿತ್ತು. ನಾವು ಹಿಡಿಗೂಡಲ್ಪಟ್ಟೆವು ಎಂಬ ಮಾತು ಅವರ ನಾಲಗೆಯಿಂದ ಹೊರಡಲಿಲ್ಲ. ಅವರು ಇಷ್ಟು ಮಾತ್ರ ಹೇಳಿದರು: ಶತ್ರುಗಳು ಎಷ್ಟು ಸಮೀಪಕ್ಕೆ ತಲುಪಿರುವರು ಎಂದರೆ, ಅವರು ನೋಡಲು ಬಯಸುವುದಾದರೆ ನೋಡಬಹುದು. ಆದರೆ ಮುಹಮ್ಮದ್(ಸ) ಈ ಭ್ರಮೆಯನ್ನು ಸಹಿಸದೆ ಹೇಳಿದರು: ಹೀಗೆ ಯೋಚಿಸಬೇಡಿ, ಈ ಸಮಯದಲ್ಲಿ ನಾವು ಇಬ್ಬರಲ್ಲ. ನಮ್ಮೊಂದಿಗೆ ಇನ್ನೊಂದು ಅಸ್ತಿತ್ವವಿದೆ ಮತ್ತು ಅವನು ನಮ್ಮ ಅಲ್ಲಾಹನು." (ತಫ್ಸಿರ್ ಕಬೀರ್, ಸಂಪುಟ–7, ಪುಟಗಳು–147, 146)

ಹಝ್ರತ್ ಮುಸ್ಲಿಹ್ ಮೌಊದ್(ರ) ಮತ್ತೊಂದು ಸ್ಥಳದಲ್ಲಿ ಹೇಳುತ್ತಾರೆ: ಮಕ್ಕದ ಜನರು ಪ್ರವಾದಿ(ಸ) ಅವರ ಮೇಲೆ ಬಹಳ ತೀವ್ರವಾಗಿ ಹಿಂಸಾಚಾರವನ್ನು ಪ್ರಾರಂಭಿಸಿದಾಗ ಮತ್ತು ಅದರ ಕಾರಣದಿಂದಾಗಿ ಧರ್ಮ ಪ್ರಚಾರದಲ್ಲಿ ತಡೆವುಂಟಾದಾಗ ಅಲ್ಲಾಹನು ಪ್ರವಾದಿ(ಸ) ಅವರನ್ನು ಮೆಕ್ಕವನ್ನು ತೊರೆಯಲು ಆದೇಶಿಸಿದನು. ಹಝ್ರತ್ ಅಬೂಬಕರ್(ರ) ಕೂಡ ಅವರೊಂದಿಗೆ ಮೆಕ್ಕಾವನ್ನು ತೊರೆಯಲು ಒಪ್ಪಿಕೊಂಡರು. ಈ ಹಿಂದೆ ಹಲವಾರು ಬಾರಿ ಮಕ್ಕ ಬಿಟ್ಟು ಹೊರಡಲು ಅವರನ್ನು ಕೇಳಲಾಯಿತು ಆದರೆ ಅವರು ಪವಿತ್ರ ಪ್ರವಾದಿ(ಸ) ಅವರನ್ನು ಬಿಡಲು ಸಿದ್ಧರಿರಲಿಲ್ಲ. ಪ್ರವಾದಿ(ಸ) ಹೊರಡಲು ಸಿದ್ಧರಾದಾಗ ಅವರು ಹಝ್ರತ್ ಅಬೂಬಕರ್(ರ) ಅವರನ್ನು ತಮ್ಮೊಂದಿಗೆ ಕರೆದೊಯ್ದರು. ರಾತ್ರಿ ಅವರು ಹೊರಟು ಹೋದಾಗ ಹಝ್ರತ್ ಮೊಸ್ಲೆಹ್ ಮೌದ್(ರ) ಹೇಳುತ್ತಿದ್ದಾರೆ: ಈ ಜಾಗವನ್ನು ನಾನು ಸಹ ಹಜ್ಜ್ ಸಂದರ್ಭದಲ್ಲಿ ನೋಡಿದ್ದೇನೆ. ಇದು ಪರ್ವತದಲ್ಲಿ ಎರಡು ಅಥವಾ ಮೂರು ಗಜಗಳಷ್ಟು ಅಗಲವಿರುವ ಒಂದು ಸಣ್ಣ ಗುಹೆಯಾಗಿದೆ, ಅಲ್ಲಿ ಹೋಗಿ ಅವರು ತಂಗಿದರು. ಅವರು ಹೊರಟುಹೋದರು ಎಂದು ಮಕ್ಕಾದ ಜನರು ತಿಳಿದಾಗ, ಅವರು ಅವರನ್ನು ಹಿಂಬಾಲಿಸಿದರು. ಅರೇಬಿಯಾದಲ್ಲಿ, ಮಹಾನ್ ಪತ್ತೆದಾರರು(ಹೆಜ್ಜೆ ಗುರುತುಗಳನ್ನು ಗುರುತಿಸುವರು) ಇದ್ದರು, ಅವರ ಸಹಾಯದಿಂದ, ಹಿಂಬಾಲಕರು ಪವಿತ್ರ ಪ್ರವಾದಿ(ಸ) ಮತ್ತು ಹಝ್ರತ್ ಅಬೂಬಕರ್(ರ) ಕುಳಿತಿದ್ದ ಸ್ಥಳವನ್ನು ತಲುಪಿದರು. ಅಲ್ಲಾಹನ ಅನುಗ್ರಹದಿಂದ, ಗುಹೆಯ ಮುಂಭಾಗದಲ್ಲಿ ಕೆಲವು ಪೊದೆಗಳು ಬೆಳೆದವು, ಅದರ ಕೊಂಬೆಗಳು ಹೆಣೆದುಕೊಂಡಿತ್ತು. ಅವರು ಆ ಕೊಂಬೆಗಳನ್ನು ತೆಗೆದು ಒಳಗೆ ನೋಡಿದರೆ, ಪ್ರವಾದಿ(ಸ) ಮತ್ತು ಹಝ್ರತ್ ಅಬೂಬಕರ್(ರ) ಕುಳಿತಿರುವುದನ್ನು ಅವರು ನೋಡಬಹುದಾಗಿತ್ತು. ಪರಿಶೋಧಕರು (ಪತ್ತೆದಾರರು) ಅಲ್ಲಿಗೆ ತಲುಪಿದಾಗ, ಅವರು ಆಕಾಶಕ್ಕೆ ಏರಿದ್ದಾರೆ ಅಥವಾ ಅವರು ಇಲ್ಲಿ ಕುಳಿತಿದ್ದಾರೆ. ಇಲ್ಲಿಂದ ಇನ್ನುಮುಂದೆ ಅವರು ಹೋಗಲಿಲ್ಲ ಎಂದು ಹೇಳಿದರು. ಯೋಚಿಸಿ ನೋಡಿ ಆ ಸಂದರ್ಭ ಹೇಗಿರಬಹುದು. ಆ ಸಂದರ್ಭದಲ್ಲ ಹಝ್ರತ್ ಅಬೂಬಕರ್(ರ) ಭಯಭೀತರಾಗುತ್ತಾರೆ ಆದರೆ ತಮ್ಮ ಜೀವಕ್ಕಾಗಿ ಅಲ್ಲ ಬದಲಿಗೆ ಪ್ರವಾದಿ(ಸ) ಅವರಿಗಾಗಿ. ಆಗ ಪ್ರವಾದಿ(ಸ) ಹೇಳುತ್ತಾರೆ **ಲಾ ತಹ್‌ಝುನ್ ಇನ್ನಲ್ಲಾಹ ಮಅನ** ನೀನೇಕೆ ಹೆದರುತ್ತೀಯಾ ಅಲ್ಲಾಹನು ನಮ್ಮೊಂದಿಗಿದ್ದಾನೆ. ಪವಿತ್ರ ಪ್ರವಾದಿ(ಸ) ತಮ್ಮೊಂದಿಗೆ ಅಲ್ಲಾಹನನ್ನು ನೋಡದಿದ್ದರೆ ಅಂತಹ ಸಂದಿಗ್ಧ ಸಮಯದಲ್ಲಿ ಅವರು ಹೇಗೆ ಭಯಪಡುತ್ತಿರಲಿಲ್ಲ. ದೃಢವಾದ ಹೃದಯವುಳ್ಳ ಮನುಷ್ಯನು ಸಹ ಶತ್ರುಗಳ ದಾಳಿಗೆ ಹೆದರುತ್ತಾನೆ, ಆದರೆ ಪ್ರವಾದಿ(ಸ) ಅವರ ಶತ್ರುಗಳು ಅವರ ಹತ್ತಿರ ನಿಂತಿದ್ದರು ಬದಲಿಗೆ ಅವರ ಶತ್ರುಗಳು ಅವರ ತಲೆಯ ಮೇಲೆ ನಿಂತಿದ್ದರು ಮತ್ತು ಆ ಶತ್ರುಗಳು ಯಾರು ಎಂದರೆ ತಮ್ಮನ್ನು ಹದಿಮೂರು ವರ್ಷಗಳಿಂದ ಕೊಲ್ಲಲು ಪ್ರಯತ್ನಿಸುತ್ತಿದ್ದವನು ಮತ್ತು ಪರಿಶೋಧಕರು ಅವರನ್ನು ಒಂದೋ ಆಕಾಶಕ್ಕೆ ಏರಿದ್ದಾರೆ ಅಥವಾ ಇಲ್ಲಿ ಕುಳಿತಿದ್ದಾರೆ ಎಂದು ಹೇಳುತ್ತಿದ್ದರು. ಈ ಜಾಗದಿಂದ ಆಚೆ ಹೋಗಲಿಲ್ಲ. ಆ ಸಮಯದಲ್ಲಿ, ಪವಿತ್ರ ಪ್ರವಾದಿ(ಸ) ಹೇಳಿದರು: **ಲಾ ತಹ್‌ಝುನ್ ಇನ್ನಲ್ಲಾಹನ ಮಅನ** ಅಲ್ಲಾಹನು ನಮ್ಮೊಂದಿಗಿದ್ದಾನೆ, ನೀವೇಕೆ ಚಿಂತಿಸಬೇಕು? ಸರ್ವಶಕ್ತನಾದ ಅಲ್ಲಾಹನ ಆಧ್ಯಾತ್ಮವೇ ಅವರನ್ನು ಹೀಗೆ ಹೇಳಲು ಕಾರಣವಾಯಿತು. ಅವರು ತನ್ನೊಳಗೆ ಸರ್ವಶಕ್ತನಾದ ಅಲ್ಲಾಹನನ್ನು ನೋಡುತ್ತಿದ್ದರು ಮತ್ತು ನನ್ನ ಮರಣದಿಂದ ಸರ್ವಶಕ್ತನಾದ ಅಲ್ಲಾಹನ ಪರಿಜ್ಞಾನವು ನಾಶವಾಗುತ್ತದೆ ಎಂದು ಭಾವಿಸುತ್ತಿದ್ದರು, ಆದ್ದರಿಂದ ಯಾರೂ ನನ್ನನ್ನು ನಾಶಮಾಡಲು ಸಾಧ್ಯವಿಲ್ಲ. (ಇರ್‌ಫಾನೆ ಇಲಾಹಿ ಔರ್ ಮುಹಬ್ಬತ್ ಬಿಲ್ಲಾಹ್ ಕಾ ಆಲಿ ಮರ್ತಬ, ಅನ್ವರ್–ಉಲ್–ಉಲೂಮ್, ಸಂಪುಟ–11, ಪುಟ–223–224)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಈಸ ಮಸೀಹ್(ಅ) ತನ್ನ ಒಡನಾಟಕ್ಕಾಗಿ ಒಬ್ಬ ವ್ಯಕ್ತಿಯನ್ನು ಮಾತ್ರ ಆರಿಸಿಕೊಂಡರು, ಅಂದರೆ ಧೂಮಾನನ್ನು, ನಮ್ಮ ಪ್ರವಾದಿ(ಸ) ಅವರು ಮದೀನಕ್ಕೆ ವಲಸೆ ಹೋದಾಗ ಹಝ್ರತ್ ಅಬುಬಕರ್(ರ) ಅವರನ್ನು ಮಾತ್ರ ಆರಿಸಿಕೊಂಡರು. ಏಕೆಂದರೆ ರೋಮನ್ ಸಾಮ್ರಾಜ್ಯವು ಹಝ್ರತ್ ಈಸ ಮಸೀಹರನ್ನು ಬಂಡಾಯಗಾರ ಎಂದು ಘೋಷಿಸಿದ್ದರು. ಮತ್ತು ಅದೇ ಅಪರಾಧದಿಂದಾಗಿ ಪಿಲಾತನು ಸೀಸರ್ನ ಆದೇಶದಿಂದ ಕೊಲ್ಲಲ್ಪಟ್ಟನು ಏಕೆಂದರೆ ಅವನು ಯೇಸುವಿನ ಬೆಂಬಲಿಗನಾಗಿದ್ದನು ಮತ್ತು ಅವನ ಹೆಂಡತಿಯು ಸಹ ಯೇಸುವಿನ ಶಿಷ್ಯೆ ಆಗಿದ್ದಳು. ಆದ್ದರಿಂದ ಯೇಸು ಈ ದೇಶವನ್ನು ರಹಸ್ಯವಾಗಿ ಬಿಟ್ಟು ಹೋಗುವುದು ಅವಶ್ಯವಾಗಿತ್ತು. ಮತ್ತು ನಿಮ್ಮೊಂದಿಗೆ ಯಾವುದೇ ಕಾರವಾನ್ ತೆಗೆದುಕೊಂಡಿಲ್ಲ. ಆದ್ದರಿಂದ, ಅವರು ಈ ಪ್ರಯಾಣದಲ್ಲಿ ತಮ್ಮೊಂದಿಗೆ ಧುಮಾನನ್ನು ಮಾತ್ರ ಕರೆದುಕೊಂಡು ಹೋದರು, ನಮ್ಮ ಪ್ರವಾದಿ(ಸ) ಅವರು ಮದೀನಾಕ್ಕೆ ಪ್ರಯಾಣಿಸುವಾಗ ಹಝ್ರತ್ ಅಬೂಬಕರ್(ರ) ಅವರನ್ನು ಮಾತ್ರ ಕರೆದುಕೊಂಡು ಹೋದರಂತೆ ಮತ್ತು ನಮ್ಮ ಪ್ರವಾದಿ(ಸ.ಅ) ಅವರ ಉಳಿದ ಸಹಚರರಂತೆ. ಯೇಸುವಿನ ಶಿಷ್ಯರು ಸಹ ವಿವಿಧ ಸಮಯಗಳಲ್ಲಿ ವಿವಿಧ ರೀತಿಯಲ್ಲಿ

ಯೇಸುವಿನ ಸೇವೆಯನ್ನು ತಲುಪಿದ್ದರು. (ಝುಮೀಮ ಬರಾಹೀನೆ ಅಹ್ಮದೀಯ, ಭಾಗ-5, ರೂಹಾನಿ ಖಝಾಈನ್, ಸಂಪುಟ-21, ಪುಟ-402)

ನಂತರ ಒಂದು ಸ್ಥಳದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಹಝ್ರತ್ ಅಬೂಬಕರ್ ಸಿದ್ದೀಕ್(ರ) ಅವರ ಸತ್ಯನಿಷ್ಠತೆಯು ಈ ವಿಪತ್ತಿನ ಸಮಯದಲ್ಲಿ ಪವಿತ್ರ ಪ್ರವಾದಿ(ಸ) ಅವರನ್ನು ಮುತ್ತಿಗೆ ಹಾಕಿದಾಗ ಬಹಿರಂಗವಾಯಿತು. ಕೆಲವು ಸತ್ಯನಿಷೇಧಿಗಳ ಬಹಿಷ್ಕರಿಸುವ ಅಭಿಪ್ರಾಯವನ್ನು ಹೊಂದಿದ್ದರೂ, ಆದರೆ ನಿಜವಾದ ಉದ್ದೇಶ ಮತ್ತು ಬಹುಮತದ ಅಭಿಪ್ರಾಯವು ನಿಮ್ಮ ಕೊಲೆಯ ಮೇಲೆ ಇತ್ತು. ಅಂತಹ ಪರಿಸ್ಥಿತಿಯಲ್ಲಿ, ಹಝ್ರತ್ ಅಬೂಬಕರ್(ರ) ಅವರ ಪ್ರಾಮಾಣಿಕತೆ ಮತ್ತು ನಿಷ್ಠೆಯು ಉದಾಹರಣೆಯನ್ನು ತೋರಿಸಿದರು, ಅದು ಶಾಶ್ವತತೆಯವರೆಗೆ ಉದಾಹರಣೆಯಾಗಿ ಉಳಿಯುತ್ತದೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಆಪತ್ತಿನ ಆ ಸಮಯದಲ್ಲಿ ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕರ್(ರ)ರನ್ನು ಆಯ್ಕೆ ಮಾಡಿದ್ದು ಅವರ ಸತ್ಯಸಂಧತೆ ಮತ್ತು ಉನ್ನತ ಮಟ್ಟದ ನಿಷ್ಠೆಗೆ ಪ್ರಬಲವಾದ ಪುರಾವೆಯಾಗಿದೆ......... ಆ ಸಮಯದಲ್ಲಿ ಹಝ್ರತ್ ಪೈಗಂಬರ್(ಸ)ರ ಬಳಿ ಎಪ್ಪತ್ತು ಎಂಬತ್ತರಷ್ಟು ಸಹಾಬಿಯರಿದ್ದರು. ಅವರಲ್ಲಿ ಹಝ್ರತ್ ಅಲಿ(ರ) ಕೂಡ ಇದ್ದರು. ಆದರೆ ಹಝ್ರತ್ ಪೈಗಂಬರ್(ಸ) ತನಗೆ ಜೊತೆಗಾರನನ್ನಾಗಿ ಆ ಸಹಾಬಿಯರಿಂದ ಹಝ್ರತ್ ಅಬೂಬಕರ್(ರ)ರನ್ನು ಆಯ್ಕೆ ಮಾಡಿದರು. ಇದರ ರಹಸ್ಯವೇನು? ಸಂಗತಿಯೇನೆಂದರೆ, ಹಝ್ರತ್ ಪೈಗಂಬರ್(ಸ) ಅಲ್ಲಾಹನ ಕಣ್ಣುಗಳ ಮೂಲಕ ನೋಡುತ್ತಾರೆ ಮತ್ತು ಅದರ ವಿವೇಕ ಅಲ್ಲಾಹನ ಕಡೆಯಿಂದಲೇ ಬರುತ್ತದೆ. ಆದ್ದರಿಂದ ಈ ಕೆಲಸಕ್ಕಾಗಿ ಅತ್ಯುತ್ತಮ ಮತ್ತು ಅನುಯೋಜ್ಯವಾದ ವ್ಯಕ್ತಿ ಹಝ್ರತ್ ಅಬೂಬಕರ್(ರ) ಆಗಿರುವರು ಎಂದು ಅಲ್ಲಾಹನೇ ಹಝ್ರತ್ ಪೈಗಂಬರ್(ಸ)ರಿಗೆ ದಿವ್ಯದರ್ಶನ ಮತ್ತು ದಿವ್ಯವಾಣಿ ಮೂಲಕ ತಿಳಿಸಿದನು. ಹಝ್ರತ್ ಅಬೂಬಕರ್(ರ) ಈ ಕಷ್ಟದ ಸಮಯದಲ್ಲಿ ಅವರ ಜೊತೆಯಾದರು. ಅದು ಅಪಾಯಕರವಾದ ಪರೀಕ್ಷಣೆಯ ಘಟ್ಟವಾಗಿತ್ತು. ಹಝ್ರತ್ ಈಸಾ ಮಸೀಹ್‌ರಿಗೆ ಈ ರೀತಿಯ ಸಮಯ ಬಂದಾಗ ಅವರ ಶಿಷ್ಯರು ಅವರನ್ನು ಬಿಟ್ಟು ಪರಾರಿಯಾದರು ಮತ್ತು ಒಬ್ಬನು ಅವರನ್ನು ಶಪಿಸಿದನು. ಆದರೆ ಸಹಾಬಿಯರಲ್ಲಿ ಪ್ರತಿಯೊಬ್ಬರು ಸಂಪೂರ್ಣವಾದ ಪ್ರಾಮಾಣಿಕತೆಯ ಮಾದರಿಯನ್ನು ತೋರಿಸಿದರು. ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕರ್(ರ)ರನ್ನು ತನ್ನ ಜೊತೆಗೆ ಸೇರಿಸುವ ವಾಕ್ಯದ ಬಗ್ಗೆ ಚಿಂತಿಸಿರಿ. ಅವರು ಹೇಳಿದರು: **ಇನ್ನಲ್ಲಾಹ ಮಅನಾ.** "ಮಅನಾ" ಎಂಬ ಪದದಲ್ಲಿ ಇಬ್ಬರೂ ಸೇರುತ್ತಾರೆ. ಎಂದರೆ ಅಲ್ಲಾಹನು ನಿನ್ನ ಮತ್ತು ನನ್ನ ಜೊತೆಗಿದ್ದಾನೆ. ಅಲ್ಲಾಹನು ಒಂದು ತಕ್ಕಡಿಯ ಒಂದು ತಟ್ಟೆಯಲ್ಲಿ ಹಝ್ರತ್ ಪೈಗಂಬರ್(ಸ)ರನ್ನು ಮತ್ತೊಂದು ತಟ್ಟೆಯಲ್ಲಿ ಹಝ್ರತ್ ಅಬೂಬಕರ್(ರ)ರನ್ನು ಇರಿಸಿದ್ದಾನೆ. ಈ ಸಮಯದಲ್ಲಿ, ಇಬ್ಬರೂ ಪ್ರಕ್ಷುಬ್ಧರಾಗಿದ್ದಾರೆ ಏಕೆಂದರೆ ಇದು ಇಸ್ಲಾಂ ಧರ್ಮದ ಅಡಿಪಾಯವನ್ನು ಹಾಕುವ ಅಥವಾ ಕೊನೆಗೊಳ್ಳುವ ಸಂದರ್ಭವಾಗಿದೆ. ಗುಹೆಯ ಬಳಿ ಶತ್ರುಗಳು ಇದ್ದಾರೆ ಮತ್ತು ವಿವಿಧ ಅಭಿಪ್ರಾಯಗಳು ನಡೆಯುತ್ತಿವೆ. ಕೆಲವರು ಈ ಗುಹೆಯಲ್ಲಿ ಹುಡುಕಿ ಎಂದು ಹೇಳುತ್ತಾರೆ ಏಕೆಂದರೆ ಹೆಜ್ಜೆಯ ಗುರುತುಗಳು ಇಲ್ಲಿಗೆ ಕೊನೆಗೊಳ್ಳುತ್ತದೆ ಆದರೆ ಕೆಲವರು ಹೇಳುತ್ತಾರೆ ಮನುಷ್ಯ ಹೇಗೆ ಇಲ್ಲಿಗೆ ಪ್ರವೇಶಿಸುತ್ತಾನೆ? ಜೇಡ ತನ್ನ ಬಲೆ ಹರಡಿದೆ ಪಾರಿವಾಳ ಮೊಟ್ಟೆ ಇಟ್ಟಿದೆ. ಈ ರೀತಿಯ ಧ್ವನಿಗಳು ಒಳಗೆ ತಲುಪುತ್ತಿದೆ ಅದನ್ನು ಅವರಿಬ್ಬರು ಬಹಳ ಸ್ಪಷ್ಟವಾಗಿ ಕೇಳುತ್ತಿದ್ದೀರಿ. ಶತ್ರುಗಳು ನಿರ್ಮೂಲನೆ ಮಾಡಲು ಮತ್ತು ಹುಚ್ಚರಂತೆ ಮುಂದುವರಿಯುವ ಸ್ಥಿತಿಯಲ್ಲಿ ಬಂದಿದ್ದಾರೆ ಆದರೆ ನಿಮ್ಮ ಧೈರ್ಯ ನೋಡಿರಿ ಶತ್ರು ನಿಮ್ಮ ತಲೆಯ ಮೇಲೆ ನಿಂತಿದ್ದಾನೆ ಅಂತಹ ಸಂದರ್ಭದಲ್ಲಿ ಪ್ರವಾದಿ(ಸ) ತಮ್ಮ ನಿಷ್ಠಾವಂತ ಸ್ನೇಹಿತನಿಗೆ ಹೇಳುತ್ತಾರೆ: **ಲಾತಹ್‌ಝನ್ ಇನ್ನಲ್ಲಾಹ ಮಅನ.** ಈ ಪದಗಳಿಂತ ಅರ್ಥವಾಗುವುದೇನೆಂದರೆ ಪದರವಾದಿ(ಸ)ರವರು ಈ ಪದಗಳನ್ನು ನೀವು ನಿಮ್ಮ ನಾಲಿಗೆಯಿಂದಲೇ ಉಚ್ಚರಿಸಿದ್ದಾರೆ ಎಂದು ತೋರುತ್ತದೆ. ಏಕೆಂದರೆ ಅವರು ಧ್ವನಿಯನ್ನು ಬಯಸುತ್ತಾರೆ. ಹೊರಗೆ, ಶತ್ರು ಸಮಾಲೋಚನೆ ಮಾಡುತ್ತಿದ್ದಾರೆ, ಮತ್ತು ಗುಹೆಯೊಳಗೆ, ಸೇವಕನು ಮತ್ತು ಒಡೆಯನು ಸಹ ಸಂಭಾಷಣೆಯಲ್ಲಿ ತೊಡಗಿದ್ದಾರೆ. ಶತ್ರುಗಳಿಗೆ ಅವರ ಧ್ವನಿ ಕೇಳುತ್ತದೆ ಎಂದು ಯೋಚಿಸಲಿಲ್ಲ. ಇದು ಸರ್ವಶಕ್ತನಾದ ಅಲ್ಲಾಹನಲ್ಲಿನ ಪರಿಪೂರ್ಣ ನಂಬಿಕೆ ಮತ್ತು ಜ್ಞಾನದ ಪುರಾವೆಯಾಗಿದೆ. ಸರ್ವಶಕ್ತನಾದ ಅಲ್ಲಾಹನ ವಾಗ್ದಾನಗಳಲ್ಲಿ ಸಂಪೂರ್ಣ ನಂಬಿಕೆಯಿದೆ. ಪ್ರವಾದಿ(ಸ) ಅವರ ಧೈರ್ಯಕ್ಕೆ ಈ ಉದಾಹರಣೆ ಸಾಕು." (ಮಲ್‌ಫೂಝಾತ್, ಸಂಪುಟ-1, ಪುಟ-376-378)

ಅದೇ ರೀತಿ ಇನ್ನೊಂದು ಕಡೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಸರ್ವಶಕ್ತನಾದ ಅಲ್ಲಾಹನು ತನ್ನ ಪವಿತ್ರ ಪ್ರವಾದಿಯ ರಕ್ಷಣೆಗಾಗಿ ಈ ಕಾರ್ಯವೂ ಪವಾಡವನ್ನಾಗಿಸಿದನು ಅಂದರೆ ವಿರೋಧಿಗಳು ಪ್ರವಾದಿ(ಸ) ತಮ್ಮ ನಿಷ್ಠಾವಂತ ಸ್ನೇಹಿತನೊಂದಿಗೆ ಕುಳಿತಿದ್ದ ಗುಹೆಯ ಮುಂಭಾಗಕ್ಕೆ ತಲುಪಿದರೂ ಆದರೆ ಅವರು ಪ್ರವಾದಿ(ಸ) ಅವರನ್ನು ನೋಡಲು ಸಾಧ್ಯವಾಗಲಿಲ್ಲ ಏಕೆಂದರೆ ಅಲ್ಲಾಹನು ಒಂದು ಜೋಡಿ ಪಾರಿವಾಳಗಳನ್ನು ಕಳುಹಿಸಿದ್ದನು ಅದು ಆ ರಾತ್ರಿಯೇ ಆ ಗುಹೆಯ ಬಾಗಿಲಲ್ಲಿ ತನ್ನ ಗುಡುಸಿಲು ಕಟ್ಟಿತು ಮತ್ತು ಮೊಟ್ಟೆ ಸಹ ನೀಡಿತು. ಅದೇ ರೀತಿ ಅಲ್ಲಾಹನ ಆಜ್ಞೆಯಿಂದ ಒಂದು ಜೇಡು ಆ ಗುಹೆಯ ಬಾಗಿಲಿನ ಮೇಲೆ ತಮ್ಮ ಮನೆ ಕಟ್ಟಿತು ಇದರಿಂದ ವಿರೋಧಿಗಳು ಮೋಸಗೊಳಿಸಲ್ಪಟ್ಟರು ಮತ್ತು ವಿಫಲರಾಗಿ ಹಿಂದಿರುಗಿದರು."
(ಸುರ್ಮ ಚಶ್ಮ ಆರ್ಯ, ರೂಹಾನಿ ಖಝಾಈನ್, ಸಂಪುಟ-2, ಪುಟ-66 ಅಡಿಟಿಪ್ಪಣಿ)

ಇನ್ನೊಂದು ವರದಿಯಲ್ಲಿ ಹೀಗೆ ಬಂದಿದೆ: ತೀರ್ಮಾನಿಸಲಾದ ಯೋಜನೆ ಪ್ರಕಾರ ಹಝ್ರತ್ ಅಬೂಬಕರ್‌ರ(ರ) ಬುದ್ಧಿವಂತ ಮಗನಾದ ಹಝ್ರತ್ ಅಬ್ದುಲ್ಲಾಹ್ ಬಿನ್ ಅಬೂಬಕರ್(ರ) ರಾತ್ರಿ ಸಮಯದಲ್ಲಿ ಸೌರ್ ಗುಹೆಗೆ ಬರುತ್ತಿದ್ದರು ಮತ್ತು ಪೂರ್ತಿ ದಿನದ ವಾರ್ತೆಗಳನ್ನು ಹೇಳಿಕೊಡುತ್ತಿದ್ದರು, ನಿರ್ದೇಶನಗಳನ್ನು ಪಡೆಯುತ್ತಿದ್ದರು ಹಾಗೂ ಮಕ್ಕದಲ್ಲೇ ರಾತ್ರಿ ಕಳೆದರು ಎಂಬಂತೆ ಮುಂಜಾನೆ ಮಕ್ಕಕ್ಕೆ ಮರಳಿ ಹೋಗುತ್ತಿದ್ದರು. ಆಮಿರ್ ಬಿನ್ ಫುಹೈರರ ಬುದ್ಧಿವಂತಿಕೆ ಏನಾಗಿತ್ತು ಎಂದರೆ, ರಾತ್ರಿ ಸಮಯದಲ್ಲಿ ಹಾಲು ನೀಡುವ ಆಡುಗಳ ಹಾಲನ್ನು ನೀಡಿದ ನಂತರ ಹಝ್ರತ್ ಅಬ್ದುಲ್ಲಾಹ್ ಬಿನ್ ಅಬೂಬಕರ್‌ರ(ರ) ಹೆಜ್ಜೆಗುರುತುಗಳನ್ನು ಅಳಿಸುವ ರೀತಿಯಲ್ಲಿ ಆಡುಗಳನ್ನು ವಾಪಾಸ್ಸು ಕೊಂಡು ಹೋಗುತ್ತಿದ್ದರು. (ಸಹೀಹ್ ಬುಖಾರಿ ಕಿತಾಬುಲ್ ಮನಾಖಿಬುಲ್ ಅನ್ಸಾರ್, ಹದೀಸ್-3905) (ಅಸ್ಸೀರತುನ್ನಬವೀಯ ಲಿಇಬ್ನೆ ಹಿಶ್ಶಾಮ್ ಭಾಗ-1-2, ಪುಟ-289, ದಾರುಲ್ ಕಿತಾಬ್ ಅಲ್‌ಅರಬಿ ಬೈರೂತ್ 2008)

ಕೆಲವು ಜೀವನಚರಿತ್ರೆಕಾರರು ಹಝ್ರತ್ ಅಸ್ಮಾ(ರ) ಪ್ರತಿದಿನ ಆಹಾರವನ್ನು ತರುತ್ತಿದ್ದರು ಎಂದು ಹೇಳಿದ್ದಾರೆ (ಅಸ್ಸೀರತುಲ್ ಹಲಬೀಯ, ಭಾಗ-2, ಪುಟ-54, ದಾರುಲ್ ಕುತುಬ್ ಇಲ್ಮಿಯ ಬೈರೂತ್ 2002) ಆದರೆ ಇದು ಕೇವಲ ಊಹೆಯ ಮತಾಗಿದೆ. ಈ ಅಪಾಯದ ಸಂದರ್ಭದಲ್ಲಿ ಓರ್ವ ಮಹಿಳೆಯ ದೈನಂದಿನ ಭೇಟಿ ರಹಸ್ಯಗಳನ್ನು ಬಹಿರಂಗಪಡಿಸಿದಂತಾಗುತ್ತದೆ ಎಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ ಮತ್ತು ಅಬ್ದುಲ್ಲಾ ಇಬ್ನ್ ಅಬುಬಕರ್ ಪ್ರತಿದಿನ ಬರುತ್ತಿದ್ದಾಗ ಹಝ್ರತ್ ಅಸ್ಮಾ(ರ) ಅವರಿಗೆ ಆಹಾರವನ್ನು ತರುವ ಅಗತ್ಯ ಏನಿತ್ತು? ಆದಾಗ್ಯೂ, ಅಲ್ಲಾಹನಿಗೆ ಚೆನ್ನಾಗಿ ತಿಳಿದಿದೆ. ಆದರೆ ಮೂರು ದಿನಗಳು ಹಾಗೆ ಕಳೆಯಿತು. ಮಕ್ಕದ ಜನರು ತಮ್ಮ ಹತ್ತಿರದಲ್ಲಿರುವ ಎಲ್ಲಾ ಸ್ಥಳಗಳನ್ನು ಹುಡುಕುವುದರಲ್ಲಿ ವಿಫಲರಾದಾಗ. ಅವರು ಸವಾಲೋಚಿಸಿದರು ಮತ್ತು ದೊಡ್ಡ ಬಹುಮಾನವನ್ನು ಘೋಷಿಸಿದರು. ಸತ್ತಮುತ್ತಲು ಘೋಷಣೆ ಕೂಗುವವನಿಗೆ ಕಳುಹಿಸಿ ಹೀಗೆ ಘೋಷಿಸಿದರು ಅಂದರೆ ಯಾರು ಮುಹಮ್ಮದ್(ಸ) ಅವರನ್ನು ಜೀವಂತವಾಗಿ ಅಥವಾ ಮರಣ ಸ್ಥಿತಿಯಲ್ಲಿ ತರುತ್ತಾರೊ ಅವರಿಗೆ ನೂರು ಒಂಟೆಗಳನ್ನು ಬಹುಮಾನವಾಗಿ ನೀಡಲಾಗುವುದು ಎಂದು. ಅಂತಹ ದೊಡ್ಡ ಬಹುಮಾನದ ಆಮಿಷದಲ್ಲಿ ಅನೇಕ ಜನರು ಪವಿತ್ರ ಪ್ರವಾದಿ(ಸ) ಅವರನ್ನು ಹುಡುಕುವುದರಲ್ಲಿ ನಿರತರಾದರು. (ಅಸ್ಸೀರತುಲ್ ಹಲಬೀಯ, ಸಂಪುಟ-2, ಪುಟ-58, ದಾರುಲ್ ಕುತುಬ್ ಇಲ್ಮಿಯ ಬೈರೂತ್ 2002)

ಸಹೀಹ್ ಬುಖಾರಿಯ ವರದಿಯ ಪ್ರಕಾರ, ಮೂರು ದಿನಗಳ ನಂತರದ ಬೆಳಿಗ್ಗಿನ ಸಮಯದಲ್ಲಿ ಒಂಟೆಗಳೊಂದಿಗೆ ತಲುಪಬೇಕೆಂದು ಅಬ್ದುಲ್ಲಾಹ್ ಬಿನ್ ಅರೀಖತ್‌ರಿಂದ ವಾಗ್ದಾನ ಪಡೆಯಲಾಗಿತ್ತು. ಅದರಂತೆ ಮೂರನೇ ದಿನದಂದು ಒಂಟೆಗಳೊಂದಿಗೆ ಅವರು ಸೌರ್ ಗುಹೆಗೆ ತಲುಪಿದರು. (ಅಸ್ಸೀರತುನ್ನಬವೀಯ ಲಿಇಬ್ನೆ ಹಿಶ್ಶಾಮ್, ಪುಟ-344, ದಾರುಲ್ ಕುತುಬ್ ಇಲ್ಮಿಯ ಬೈರೂತ್ 2001) (ಸಹೀಹ್ ಬುಖಾರಿ ಕಿತಾಬ್ ಮನಾಖಿಬುಲ್ ಅನ್ಸಾರ್, ಹದೀಸ್-3905) (ಫತ್‌ಹಲ್ ಬಾರಿ ಶರಹ್ ಸಹೀಹ್ ಬುಖಾರಿ, ಸಂಪುಟ-7, ಪುಟ-238, ದಾರುಲ್ ಮಾರಿಫ ಬೈರೂತ್)

ಈ ವರದಿಯು ಸೌರ್ ಗುಹೆಯಿಂದ ಮದೀನಾಕ್ಕೆ ಪ್ರಯಾಣವು ಬೆಳಿಗ್ಗೆ ಪ್ರಾರಂಭವಾಯಿತು ಎಂಬ ಭಾವನೆಯನ್ನು ನೀಡುತ್ತದೆ, ಆದರೆ ಬುಖಾರಿಯ ಎರಡನೇ ವರದಿಯಲ್ಲಿ ಪ್ರಯಾಣವು ರಾತ್ರಿಯಲ್ಲಿ ಪ್ರಾರಂಭವಾಯಿತು ಎಂಬ ವಿವರಣೆಯಿದೆ. ಆದ್ದರಿಂದ, ಹಝ್ರತ್ ಮಿರ್ಜಾ ಬಶೀರ್ ಅಹ್ಮದ್ ಸಾಹಿಬ್, ಅಬ್ದುಲ್ಲಾ ಬಿನ್ ಅರಿಖ್ತ್ ಅವರನ್ನು

ಉಲ್ಲೇಖಿಸುವಾಗ ಹೀಗೆ ಬರೆದಿದ್ದಾರೆ: ಪ್ರವಾದಿ(ಸ) ಮತ್ತು ಹಝ್ರತ್ ಅಬೂಬಕರ್(ರ) ಅವರು ಆತನನ್ನು ಮೊದಲೇ ಒಂಟೆಗಳನ್ನು ನೀಡಿ ಮೂರು ರಾತ್ರಿಗಳ ನಂತರ ಮೂರನೇಯ ದಿವಸ ಮುಂಜಾನೆ ಒಂಟೆಗಳನ್ನು ತೆಗೆದುಕೊಂಡು ಸೌರ್ ಗುಹೆಗೆ ತಲುಪಬೇಕು ಎಂದು ಸೂಚಿಸಿದ್ದರು. ಹೀಗಾಗಿ ಆತನು ತನ್ನ ವಾಗ್ದಾನದ ಪ್ರಕಾರ ಮೂರನೇಯ ದಿವಸ ಬೆಳಿಗ್ಗೆ ತಲುಪಿದನು. ಇದು ಬುಖಾರಿಯ ಪ್ರಸಿದ್ಧ ವರದಿಯಾಗಿದೆ ಆದರೆ ಇತಿಹಾಸಕಾರರು ಪ್ರವಾದಿ(ಸ) ರಾತ್ರಿಯಲ್ಲಿ ಹೊರಟುಹೋದರು ಎಂದು ಬರೆಯುತ್ತಾರೆ. ಮತ್ತು ಇದು ಬುಖಾರಿಯ ಮತ್ತೊಂದು ನಿರೂಪಣೆಯಿಂದ ದೃಢೀಕರಿಸಲ್ಪಟ್ಟಿದೆ. (ಸೀರತ್ ಖಾತುಮುನ್ನಬೀಈನ್, ಪುಟ-239-240)

ಪ್ರವಾದಿ(ಸ) ರವರು ಸೋಮವರ ರಾತ್ರಿ ಹೊತ್ತು ರಬೀ ಅಲ್-ಅವ್ವಲ್‌ನ ಮೊದಲ ದಿನ ಸೌರ್ ಗುಹೆಯಿಂದ ಹೊರಟರು. ಇಬ್ನ್ ಸಅದ್ ಪ್ರಕಾರ, ಅವರು ಸೋಮವಾರ ರಾತ್ರಿ, ರಬಿ ಅಲ್-ಅವ್ವಾಲ್ 4 ನೇ ರಾತ್ರಿ ಗುಹೆಯನ್ನು ತೊರೆದರು. (ತಾರೀಖ್ ಅಲ್‌ಖಮೀಸ್, ಸಂಪುಟ-2, ಪುಟ-18, ದಾರುಲ್ ಕುತುಬ್ ಇಲ್ಮಿಯ ಬೈರೂತ್ 2009)

ಮೊದಲ ದಿನಾಂಕವು ಖಮೀಸ್ ಅವರ ವರದಿಯಾಗಿದೆ. ಸಹೀಹ್ ಬುಖಾರಿಯ ವ್ಯಾಖ್ಯಾನಕಾರ ಅಲ್ಲಾಮಾ ಇಬ್ನ್ ಹಜರ್ ಅಸ್ಕಲಾನಿ ಅವರು ಇಮಾಮ್ ಹಕೀಮ್ ಅವರು ಸೋಮವಾರ ಮಕ್ಕಾವನ್ನು ತೊರೆದರು ಮತ್ತು ಸೋಮವಾರ ಮದೀನಾವನ್ನು ಪ್ರವೇಶಿಸಿದರು ಎಂಬ ನಿರಂತರ ಅಭಿಪ್ರಾಯಗಳಿವೆ ಎಂದು ಬರೆಯುತ್ತಾರೆ. ಮುಹಮ್ಮದ್ ಇಬ್ನ್ ಮೂಸಾ ಅಲ್-ಖ್ವಾರಿಜ್ಮಿ ಹೊರತುಪಡಿಸಿ ಅವರ ಪ್ರಕಾರ ಪ್ರವಾದಿ(ಸ) ಅವರು ಗುರುವಾರ ಮೆಕ್ಕಾವನ್ನು ತೊರೆದರು ಎಂದು ಹೇಳಿದರು. ಅಲ್ಲಾಮಾ ಇಬ್ನ್ ಹಜರ್, ಈ ವರದಿಗಳನ್ನು ಅನ್ವಯಿಸುವಾಗ, ಪವಿತ್ರ ಪ್ರವಾದಿ(ಸ) ಗುರುವಾರ ಮೆಕ್ಕಾವನ್ನು ತೊರೆದರು ಮತ್ತು ಶುಕ್ರವಾರ, ಶನಿವಾರ ಮತ್ತು ಭಾನುವಾರದಂದು ಮೂರು ರಾತ್ರಿ ಗುಹೆಯಲ್ಲಿ ಉಳಿದುಕೊಂಡ ನಂತರ ಸೋಮವಾರ ರಾತ್ರಿ ಮದೀನಾಕ್ಕೆ ತೆರಳಿದರು ಎಂದು ಬರೆಯುತ್ತಾರೆ. (ಫತೇಹ್ ಅಲ್-ಬಾರಿ ಶರ್ಹ್ ಸಾಹಿಹ್ ಅಲ್-ಬುಖಾರಿ ಲಿಇಬ್ನೆ ಹಜರ್, ಸಂಪುಟ-7, ಪುಟ-299, ಖದೀಮಿ ಕುತುಬ್ ಖಾನ, ಆರಾಮ್ ಬಾಗ್ ಕರಾಚಿ)

ಹಝ್ರತ್ ಪೈಗಂಬರ್(ಸ) ಖಸ್ವಾ ಎಂಬ ಒಂಟೆಯ ಮೇಲೆ ಸವಾರರಾದರು ಎಂದು ವರದಿಯಿದೆ. ಹಝ್ರತ್ ಅಬೂಬಕರ್(ರ) ತನ್ನ ಒಂಟೆಯ ಮೇಲೆ ತನ್ನೊಂದಿಗೆ ಆಮಿರ್ ಬಿನ್ ಫುಹೈರರನ್ನು ಸವಾರಿ ಮಾಡಿಸಿದರು ಮತ್ತು ಅರೀಖತ್ ತನ್ನ ಒಂಟೆಯಲ್ಲಿ ಸವಾರರಾದರು. ಹಝ್ರತ್ ಅಬೂಬಕರ್(ರ)ರ ಬಳಿ ಮನೆಯಲ್ಲಿ ಒಟ್ಟು ಐದು ಅಥವಾ ಆರು ಸಾವಿರ ದಿರ್ಹಂ ಇತ್ತು. ಅವರು ಹೊರಡುವಾಗ ಆ ಸಂಪತ್ತನ್ನು ತನ್ನ ಜೊತೆಗೆ ತೆಗೆದು ಕೊಂಡಿದ್ದರು. ಕೆಲವು ವರದಿಗಳ ಪ್ರಕಾರ, ಆಮಿರ್ ಬಿನ್ ಫುಹೈರಾ ಮತ್ತು ಹಝ್ರತ್ ಅಸ್ಮಾ(ರ) ಅವರು ಆಹಾರವನ್ನು ತಂದರು ಅದರಲ್ಲಿ ಹುರಿದ ಮೇಕೆಯ ಮಾಂಸವಿತ್ತು ಆದರೆ ಅವರು ಇಲ್ಲಿಗೆ ತಲುಪಿದಾಗ ಆಹಾರ ಮತ್ತು ಮಶ್ಕಿಜಾವನ್ನು ಕಟ್ಟಲು ಬಟ್ಟೆಯಿಲ್ಲ ಎಂದು ಅರಿತುಕೊಂಡರು, ಆದ್ದರಿಂದ ಹಝ್ರತ್ ಅಸ್ಮಾ(ರ) ಅವರು ತಮ್ಮ ನಿತಾಖ್(ಸೊಂಟಕ್ಕೆ ಕಟ್ಟುವ ಬಟ್ಟೆ)ಯನ್ನು ತೆರೆದು ಅದನ್ನು ಎರಡು ಭಾಗವಾಗಿ ಕತ್ತರಿಸಿದರು. ಒಂದರಿಂದ ಆಹಾರವನ್ನು ಕಟ್ಟಿದರು ಇನ್ನೊಂದರಿಂದ ಮಶ್ಕೀಝುವನ್ನು ಕಟ್ಟಿದರು. ಪವಿತ್ರ ಪ್ರವಾದಿ(ಸ) ಹಝ್ರತ್ ಅಸ್ಮಾ(ರ)ರವರಿಗೆ ಸ್ವರ್ಗದಲ್ಲಿರುವ ಎರಡು ನಿತಾಖ್‌ಗಳ ಸಂತೋಷದ ಸುದ್ದಿಯನ್ನು ನೀಡಿದರು ಮತ್ತು ಅವರೆಲ್ಲರನ್ನು ಕಳುಹಿಸಿ ಪ್ರಾರ್ಥಿಸುವ ಮೂಲಕ ತಮ್ಮ ಪ್ರಯಾಣವನ್ನು ಪ್ರಾರಂಭಿಸಿದರು: **ಅಲ್ಲಾಹುಮ್ಮ ಸ್‌ಹಬ್‌ನಿ ಫೀ ಸಫರಿ, ವಖ್ಲುಫ್‌ನೀ ಫೀ ಅಹ್ಲೀ** ಅಂದರೆ ಯಾ ಅಲ್ಲಾಹ್!! ನನ್ನ ಪ್ರಯಾಣದಲ್ಲಿ ನೀನು ನನ್ನ ಸಂಗಾತಿಯಾಗಿರಿ ಮತ್ತು ನನ್ನ ಕುಟುಂಬದಲ್ಲಿ ನನ್ನ ಉತ್ತರಾಧಿಕಾರಿಯಾಗಿರು." (ಮುಹಮ್ಮದ್ ರಸೂಲುಲ್ಲಾಹ್ ವಲ್ಲಝೀನ ಮಾಅಹು, ಅಬ್ದುಲ್ ಹಮೀದ್ ಜೂದಸ್ಸಹರ, ಸಂಪುಟ-3, ಪುಟ-61, ಮಕ್ತಬ ಮಿಸರ್) (ಅಸ್ಸೀರತುನ್ನಬವೀಯ ಲಿಇಬ್ನೆ ಹಿಶ್ಶಾಮ್, ಪುಟ-345, ದಆರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಮೊದಲೇ ಹೇಳಿದಂತೆ ನಿತಾಖ್‌ನಿಂದ ಆಹಾರ ಕಟ್ಟುವ ಘಟನೆಯು ಹಝ್ರತ್ ಅಬೂಬಕ್ಕರ್(ರ)ರವರ ಮನೆಯಿಂದ ಹೊರಡುವಾಗ ಸಂಭವಿಸಿತು ಆದರೇ ಏನೇ ಇರಲಿ ಇಲ್ಲಿಯು ಕೂಡ ಅದರ ಪ್ರಸ್ತಾವನೆ ಬಂದಿದೆ. ಇತಿಹಾಸದಲ್ಲಿ ಎರಡು ಕಡೆ ಈ ಘಟನೆಯ ಉಲ್ಲೇಖ ಕಂಡು ಬರುತ್ತದೆ. ಕೆಲವರ ಅಭಿಪ್ರಾಯದಲ್ಲಿ ಪ್ರವಾದಿ ಮುಹಮ್ಮದ್(ಸ)ರವರು ಹಿಜ್ರತ್‌ಗಾಗಿ ಮಕ್ಕದಲ್ಲಿ ಹಝ್ರತ್ ಅಬೂಬಕ್ಕರ್(ರ) ಅವರ ಮನೆಯಿಂದ ಸೌರ್ ಗುಹೆಗೆ ಹೊರಡುವಾಗ ಎಂದಾಗಿದೆ ಮತ್ತು ಇನ್ನು ಕೆಲವರ ಅಭಿಪ್ರಾಯದಲ್ಲಿ ಪ್ರವಾದಿ ಮುಹಮ್ಮದ್(ಸ)ರವರು ಸೌರ್ ಗುಹೆಯಿಂದ ಮದೀನಕ್ಕೆ ಹೊರಡುವಾಗ ಈ ಘಟನೆ ನಡೆಯಿತು ಎಂದಿದ್ದಾರೆ. ಹೀಗೆ ಎರಡು ರೀತಿಯ ಪ್ರಸ್ತಾವನೆ ಕಂಡುಬರುತ್ತದೆ. ಆದರೆ ಬುಖಾರಿಯಲ್ಲಿ ವಿವರಿಸಲಾದ ಹಝ್ರತ್ ಆಯೆಶಾ(ರ) ಅವರ ಪ್ರಯಾಣದ ವಿವರಗಳು ಇದು ಹಝ್ರತ್ ಅಬೂಬಕರ್(ರ) ಅವರ ಮನೆಯಿಂದ ನಿರ್ಗಮಿಸುವ ಘಟನೆ ಎಂಬ ಭಾವನೆಯನ್ನು ನೀಡುತ್ತದೆ. ಆದ್ದರಿಂದ, ಬುಖಾರಿಯ ವರದಿಗೆ ಆದ್ಯತೆ ನೀಡುವುದು ಹೆಚ್ಚು ಸೂಕ್ತವಾಗಿದೆ, ಏಕೆಂದರೆ ಮೊದಲನೆಯದಾಗಿ, ಸೌರ್ ಗುಹೆಯಲ್ಲಿ ತಂಗುವುದನ್ನು ಹೇಗೆ ರಹಸ್ಯವಾಗಿಡಲಾಗಿದೆ, ಅಲ್ಲಿ ಹಝ್ರತ್ ಅಸ್ಮಾ(ರ) ಅವರು ಆಹಾರವನ್ನು ಸಾಗಿಸುವುದು ತಪ್ಪಾಗಿರಬಹುದು ಏಕೆಂದರೆ ಹಝ್ರತ್ ಅಬ್ದುಲ್ಲಾ ಇಬ್ನ್ ಅಬುಬಕರ್(ರ) ಮತ್ತು ಹಝ್ರತ್ ಆಮಿರ್ ಇಬ್ನ್ ಫುಹೈರಾ(ರ) ಇಬ್ಬರು ಪ್ರತಿದಿನ ತಲೆಮರೆಸಿಕೊಂಡು ಹೋಗುತ್ತಿದ್ದರೆ, ಆದ್ದರಿಂದ ಓರ್ವ ಮಹಿಳೆಯ ನಿರ್ಗಮನವು ಸುರಕ್ಷತೆ ಮತ್ತು ಮುನ್ನೆಚ್ಚರಿಕೆಯ ಅವಶ್ಯಕತೆಗಳಿಗೆ ವಿರುದ್ಧವಾಗಿದೆ ಎಂದು ತೋರುತ್ತದೆ. ಅದೇನೇ ಇರಲಿ, ಮನೆಯಲ್ಲಿ ನಿತಾಖ್‌ನಿಂದ ಊಟ ಕಟ್ಟುವ ಘಟನೆಯೂ ಹಝ್ರತ್ ಅಸ್ಮಾ(ರ) ಅವರ ಭಕ್ತಿ ಮತ್ತು ಪ್ರೀತಿಯನ್ನು ಪ್ರತಿಬಿಂಬಿಸುತ್ತದೆ, ಆಹಾರವನ್ನು ಕಟ್ಟಲು ಬೇರೆ ಯಾವ ವಸ್ತುವನ್ನು ಹುಡುಕದೇ ತಮ್ಮ ಬಳಿ ಇರುವ ನಿತಾಖ್‌ನಿಂದಲೇ ಗಂಟು ಕಟ್ಟಿದರು. ಗುಹೆಯಲ್ಲಿ ಏನೂ ಇಲ್ಲದ ಕಾರಣ ಗುಹೆಯಲ್ಲಿ ಘಟನೆ ನಡೆದಿರಬಹುದು ಎಂದು ಹೇಳಬಹುದು ಆದರೆ ಮನೆಯಲ್ಲಿಯೂ ಕೂಡ ತಕ್ಷಣ ಏನೂ ಸಿಗದಿರಬಹುದು ಮತ್ತು ಸಮಯ ವ್ಯರ್ಥವಾಗುವ ಭಯವಿದ್ದ ಕಾರಣದಿಂದ ನಿಮ್ಮ ಬಳಿ ಇದ್ದ ನಿತಾಖ್ ಅನ್ನು ತೆರೆದು ಆಹಾರ ಕಟ್ಟಿದ ನಂತರ ಹಝ್ರತ್ ಅಬುಬಕರ್(ರ) ಮತ್ತು ಪವಿತ್ರ ಪ್ರವಾದಿ(ಸ) ಅವರಿಗೆ ಬೀಳ್ಕೊಟ್ಟರು. ಆದ್ದರಿಂದ, ಬುಖಾರಿಯವರ ವರದಿಯ ಪ್ರಕಾರ, ಆಹಾರವನ್ನು ಪ್ಯಾಕ್ ಮಾಡುವ ಘಟನೆಯು ಹಝ್ರತ್ ಅಬೂಬಕರ್(ರ) ಅವರ ಮನೆಯಿಂದ ನಿರ್ಗಮಿಸುತ್ತದೆಯೇ ಹೊರತು ಸೌರ್ ಗುಹೆಯಿಂದ ಮದೀನಾಕ್ಕೆ ಪ್ರಯಾಣದ ಆರಂಭವಲ್ಲ. ಹೇಗಾದರೂ, ವಲ್ಲಾಹು ಆಲಮು (ಅಲ್ಲಾಹನಿಗೆ ಎಲ್ಲವು ತಿಳಿದಿದೆ).

ಪವಿತ್ರ ಪ್ರವಾದಿ(ಸ) ಮತ್ತು ಹಝ್ರತ್ ಅಬೂಬಕರ್(ರ) ವಲಸೆ ಹೊರಟಾಗ, ಹಝ್ರತ್ ಅಬೂಬಕರ್ ತನ್ನ ಐದು ಅಥವಾ ಆರು ಸಾವಿರ ದಿರ್ಹಮ್‌ಗಳ ಸಂಪತ್ತನ್ನು ತನ್ನೊಂದಿಗೆ ತೆಗೆದುಕೊಂಡು ಹೋದರು ಎಂದು ಹಝ್ರತ್ ಅಸ್ಮಾ(ರ) ಹೇಳುತ್ತಾರೆ.

ಅದೇ ರೀತಿ ಅವರು ಹೇಳುತ್ತಾರೆ ನಮ್ಮ ಅಜ್ಜ ಅಬುಖುಹಾಫ ನಮ್ಮ ಬಳಿಗೆ ಬಂದರು. ಆ ವೇಳೆಗೆ ಅವರ ದೃಷ್ಟಿ ಮಾಯವಾಗಿತ್ತು. ಅವರು ಹೇಳಿದರು: ಅಲ್ಲಾಹನಆಣೆ! ಅವನು ಅಂದರೆ ಹಝ್ರತ್ ಅಬೂಬಕರ್(ರ) ತನ್ನನ್ನು ಮಾತ್ರವಲ್ಲದೆ ತನ್ನ ಸಂಪತ್ತಿನಿಂದಲೂ ನಿಮ್ಮನ್ನು ತೊಂದರೆಗೆ ಸಿಲುಕಿಸಿದ್ದಾನೆ ಎಂದು ನಾನು ಭಾವಿಸುತ್ತೇನೆ. ಈ ಬಗ್ಗೆ ಹಝ್ರತ್ ಅಸ್ಮಾ(ರ) ಹೇಳುತ್ತಾರೆ ನಾನು ಅವರಿಗೆ ಹೇಳಿದೆ: ಅಜ್ಜ ಇಲ್ಲ! ಇದು ಅಸಾಧ್ಯ. ಅವರು ನಮಗೆ ಸಾಕಷ್ಟು ಸಂಪತ್ತನ್ನು ಬಿಟ್ಟು ಹೋಗಿದ್ದಾರೆ. ನಾನು ಕೆಲವು ಕಲ್ಲುಗಳನ್ನು ತೆಗೆದುಕೊಂಡು ನನ್ನ ತಂದೆ ಸಂಪತ್ತನ್ನು ಇಡುತ್ತಿದ್ದ ಮನೆಯ ಕಿಡಕಿನಲ್ಲಿ ಇಡುತ್ತಿದ್ದೇನೆ ಎಂದು ಹೇಳಿದರು, ಮತ್ತು ನಾನು ಅದರ ಮೇಲೆ ಒಂದು ಬಟ್ಟೆಯನ್ನು ಹಾಯಿಸಿ ಅದರ ಮೇಲೆ ನಿಮ್ಮ ಕೈ ಇರಿಸಿ ನೋಡಿ ಎಂದು ಹೇಳಿದೆ. ಆಗ ಅವರು ಅದರ ಮೇಲೆ ಕೈಯಿಟ್ಟು, "ಪರವಾಗಿಲ್ಲ, ಅವನು ನಿನಗಾಗಿ ಇಷ್ಟು ಬಿಟ್ಟಿದ್ದರೆ, ಅವನು ನಿನಗಾಗಿ ಚೆನ್ನಾಗಿ ಮಾಡಿದ್ದಾನೆ" ಎಂದು ಹೇಳಿದರು. ಹಝ್ರತ್ ಅಸ್ಮಾ(ರ) ಹೇಳುತ್ತಾರೆ: ಅಲ್ಲಾಹನಆಣೆ! ಹಝ್ರತ್ ಅಬೂಬಕರ್(ರ) ನಮಗಾಗಿ ಏನನ್ನೂ ಬಿಡಲಿಲ್ಲ ಆದರೆ ಈ ಹಿರಿಯರನ್ನು ಈ ರೀತಿ ತೃಪ್ತಿಪಡಿಸಲು ನಾನು ಬಯಸಿದೆ. (ಅಸ್ಸೀರತುನ್ನಬವೀಯ ಲಿಇಬ್ನೆ ಹಿಶ್ಶಾಮ್ 345, ಹಿಜ್ರಾ ಅಲ್-ರಸೂಲ್, ದಾರುಲ್ ಕುತುಬ್ ಅಲ್-ಇಲ್‌ಮಿಯಾ ಬೈರುತ್ 2001)

ಹಝ್ರತ್ ಮಿರ್ಜಾ ಬಶೀರ್ ಅಹ್ಮದ್ ಸಾಹಿಬ್(ರ), ಸೌರ್ ಗುಹೆಯಿಂದ ನಿರ್ಗಮಿಸುವುದನ್ನು ಉಲ್ಲೇಖಿಸುವಾಗ ಬರೆದರು: ಹಝ್ರತ್ ಪೈಗಂಬರ್(ಸ) ಖಸ್ವಾ ಎಂಬ ಒಂಟೆಯ ಮೇಲೆ ಸವಾರರಾದರು ಎಂದು ವರದಿಯಿದೆ. ಹಝ್ರತ್ ಅಬೂಬಕರ್(ರ) ತನ್ನ ಒಂಟೆಯ ಮೇಲೆ ತನ್ನೊಂದಿಗೆ ಆಮಿರ್ ಬಿನ್ ಫುಹೈರರನ್ನು ಸವಾರಿ ಮಾಡಿಸಿದರು ಮತ್ತು ಅರೀಖತ್ ತನ್ನ ಒಂಟೆಯಲ್ಲಿ ಸವಾರರಾದರು ತದನಂತರ ಅವರು ಮಕ್ಕದಿಂದ ಹೊರಡುವಾಗ ಬಹಳ ದುಃಖದಿಂದ ಹೀಗೆ ಹೇಳಿದರು: ಈ ಜನರು ತಮ್ಮ ಪ್ರವಾದಿಯನ್ನು ಹೊರಗೆ ಹಾಕಿರುವರು. ಈಗ ಇವರು ಖಂಡಿತ ನಾಶವಾಗುವರು. (ಸೀರತ್ ಖಾತುಮುನ್ನಬೀಈನ್, ಪುಟ-240)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳೂತ್ತಾರೆ: ಎರಡು ದಿನಗಳ ಕಾಲ ಈ ಗುಹೆಯಲ್ಲಿ ಕಾದು ಕುಳಿತ ನಂತರ, ಪೂರ್ವ ನಿಯೋಜಿತ ಕಾರ್ಯಕ್ರಮದ ಪ್ರಕಾರ, ಸವಾರರನ್ನು ರಾತ್ರಿಯಲ್ಲಿ ಗುಹೆಗೆ ಕರೆತರಲಾಯಿತು ಮತ್ತು ಮುಹಮ್ಮದ್(ಸ) ಮತ್ತು ನಿಮ್ಮ ಸಂಗಡಿಗನನ್ನು ಎರಡು ವೇಗವಾಗಿ ಓಡುವ ಒಂಟೆಗಳ ಮೇಲೆ ಕಳುಹಿಸಲಾಯಿತು. ಒಂದು ಒಂಟೆಯ ಮೇಲೆ ಮುಹಮ್ಮದ್(ಸ) ಮತ್ತು ಮಾರ್ಗದರ್ಶಕನನ್ನು ಏರಿಸಲಾಯಿತು. ಒಂದು ವರದಿಯ ಪ್ರಕಾರ ಇವರಿಬ್ಬರು ಒಂದೇ ಒಂಟೆಯ ಮೇಲೆ ಕುಳಿತಿದ್ದರು. ಮತ್ತೊಂದು ವರದಿಯಲ್ಲಿ ಮೂರು ಒಂಟೆಗಳಿದ್ದವು. ಏನೇ ಇರಲಿ ಇನ್ನೊಂದು ಒಂಟೆಯ ಮೇಲೆ ಹಝ್ರತ್ ಅಬುಬಕರ್(ರ) ಮತ್ತು ಅವರ ಸೇವಕ ಆಮಿರ್ ಬಿನ್ ಫುಹೈರಾ ಸವಾರಿ ಮಾಡಿದರು. ಪ್ರವಾದಿ(ಸ) ಮದೀನಕ್ಕೆ ಹೊರಡುವ ಮುನ್ನ ಮಕ್ಕಾ ಕಡೆಗೆ ಮುಖ ಮಾಡಿದರು. ನೀವು ಹುಟ್ಟಿದ ಪವಿತ್ರ ನಗರ, ನಿಮ್ಮನ್ನು ನಿಯೋಜಿಸಲಾಗಿತ್ತು ಮತ್ತು ಹಝ್ರತ್ ಇಸ್ಮಾಈಲ್(ರ)ರವರ ಕಾಲದಿಂದಲೂ ನಿಮ್ಮ ಪೂರ್ವಜರು ವಾಸಿಸುತ್ತಿದ್ದರು. ಅವರು ಕೊನೆಯ ಬಾರಿಗೆ ನೋಡಿದರು ಮತ್ತು ಬಹಳ ದುಃಖದಿಂದ ನಗರವನ್ನು ಉದ್ದೇಶಿಸಿ ಹೇಳಿದರು: ಓ ಮಕ್ಕಾ ಪಟ್ಟಣ! ನೀನು ನನಗೆ ಎಲ್ಲಕ್ಕಿಂತ ಹೆಚ್ಚು ಪ್ರಿಯವಾಗಿದ್ದೆ, ಆದರೆ ನಿನ್ನ ಜನರು ನನ್ನನ್ನು ಇಲ್ಲಿ ಉಳಿಯಲು ಬಿಡುವುದಿಲ್ಲ. ಆ ಸಮಯದಲ್ಲಿ, ಹಝ್ರತ್ ಅಬೂಬಕರ್(ರ) ಅವರು ಬಹಳ ದುಃಖದಿಂದ ಹೇಳಿದರು: ಈ ಜನರು ತಮ್ಮ ಪ್ರವಾದಿಯನ್ನು ಹೊರಹಾಕಿದ್ದಾರೆ, ಈಗ ಅವರು ಖಂಡಿತವಾಗಿಯೂ ನಾಶವಾಗುತ್ತಾರೆ." (ದೀಬಾಚ ತಫ್ಸೀರ್-ಉಲ್-ಕುರಾನ್, ಅನ್ವರ್-ಉಲ್-ಉಲೂವ್, ಸಂಪುಟ-20, ಪುಟಗಳು-223-224) (ಅಸ್ಸೀರತುನ್ನಬವೀಯ ಲಿಇಬ್ನೆ ಹಿಶ್ಶಾಮ್, ಪುಟ-344, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಒಂದು ವರದಿಯ ಪ್ರಕಾರ ಮಕ್ಕದಿಂದ ಸುಮಾರು 82 ಮೈಲು ದೂರದಲ್ಲಿರುವ ಜುಹ್‌ಫ ಎಂಬ ಪ್ರದೇಶಕ್ಕೆ ತಲುಪಿದಾಗ **"ಇನ್ನಲ್ಲದೀ ಫರಝ ಅಲೈಕಲ್ ಖುರ್‌ಆನ ಲರಾದ್ದುಖ ಇಲಾ ಮಆದ್"** ಎಂಬ ಪವಿತ್ರ ಖುರ್‌ಆನಿನ ವಚನ ಅವತೀರ್ಣವಾಯಿತು. ಅದರ ಅರ್ಥ ಹೀಗಿದೆ: ನಿನ್ನ ಮೇಲೆ ಖುರ್‌ಆನ್ ಅಧ್ಯಾಪನೆಗಳನ್ನು ಕಡ್ಡಾಯಗೊಳಿಸಿದವನು ಖಂಡಿತವಾಗಿಯೂ ನಿನ್ನನ್ನು ಮರಳಬೇಕಾದ ಸ್ಥಳಕ್ಕೆ ಮರಳಿಸುವನು. (ಮುಹಮ್ಮದ್ ರಸೂಲುಲ್ಲಾಹ್ ಮಅಹು, ಅಬ್ದುಲ್ ಹಮೀದ್ಜೋದಃ ಅಸ್ಸಹಾರ್, ಸಂಪುಟ-3, ಪುಟ-64, ಮಿಸರ್) (ಶರಹ್ ಝುರ್‌ಖಾನಿ ಅಲ ಮವಾಹಿಬ್ ಲಿದ್ದುನಿಯಾ, ಸಂಪುಟ-2, ಪುಟ-172, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ರಾತ್ರಿ ಪೂರ್ತಿ ಈ ಯಾತ್ರೆ ಜಾರಿಯಲ್ಲಿತ್ತು. ಮಧ್ಯಾಹ್ನವಾಗುವಾಗ ಒಂದು ಪರ್ವತದ ನೆರಳಿನಲ್ಲಿ ಈ ಸಂಘವು ಆರಾಮ ಮಾಡಲು ನಿಂತಿತು. ಹಝ್ರತ್ ಅಬೂಬಕರ್(ರ) ಹಾಸಿಗೆಯನ್ನು ಮಾಡಿದರು. ಹಝ್ರತ್ ಪೈಗಂಬರ್(ಸ)ರೊಡನೆ ಆರಾಮ ಮಾಡಲು ವಿನಂತಿಸಿದರು. ಹೀಗೆ ಹಝ್ರತ್ ಪೈಗಂಬರ್(ಸ) ಮಲಗಿದರು. ಅನಂತರ ಹಿಂಬಾಲಿಸುವವರಲ್ಲಿ ಯಾರಾದರೂ ಬರುತ್ತಿದ್ದಾರೆಯೇ ಎಂದು ನೋಡಲಿಕ್ಕಾಗಿ ಹಝ್ರತ್ ಅಬೂಬಕರ್(ರ) ಹೊರಗೆ ಬಂದರು. ಅಷ್ಟರಲ್ಲಿ ದೂರದಿಂದ ಆಡುಗಳನ್ನು ಮೇಯಿಸುವವನೊಬ್ಬನು ನೆರಳನ್ನು ಹುಡುಕುತ್ತಾ ಅಲ್ಲಿಗೆ ಬಂದನು. ಹಝ್ರತ್ ಅಬೂಬಕರ್(ರ) ಅವನೊಡನೆ ಕೇಳಿದರು: ನೀನು ನಮಗಾಗಿ ಸ್ವಲ್ಪ ಹಾಲನ್ನು ಕರೆಯುವಿಯಾ? ಸರಿಯೆಂದು ಅವನು ಹೇಳಿದನು. ಮೊದಲು ಮೊಲೆಯನ್ನು ಸರಿಯಾಗಿ ಶುಚಿಗೊಳಿಸಲು ಹಝ್ರತ್ ಅಬೂಬಕರ್(ರ) ಹೇಳಿದರು. ಅನಂತರ ತನ್ನ ಮೇಲ್ನೋಟದಲ್ಲಿ ಹಾಲನ್ನು ಪಾತ್ರೆಯಲ್ಲಿ ಹಾಕಿಸಿದರು. ಹಾಲಿನ ಬಿಸಿಯನ್ನು ಕಡಿಮೆಗೊಳಿಸಲಿಕ್ಕಾಗಿ ಅದರಲ್ಲಿ ನೀರನ್ನು ಹಾಕಿದರು ಹಾಗೂ ಹಾಲನ್ನು ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಇರಿಸಿದರು. ಮತ್ತೊಂದು ವರದಿಯ ಪ್ರಕಾರ ಹಝ್ರತ್ ಅಬೂಬಕ್ಕರ್(ರ) ಹಾಲು ತಂದಾಗ ಪ್ರವಾದಿ(ಸ)ರವರು ಮಲಗಿದ್ದರು. ಆದ್ದರಿಂದ ಹಝ್ರತ್ ಅಬೂಬಕ್ಕರ್(ರ)ರವರು ಅವರನ್ನು ತೊಂದರೆ ಆಗಬಾರದು ಎಂದು ಏಳಿಸಲಿಲ್ಲ. ಹೀಗೆ ಅವಲ್ಪ ಸಮಯದ ನಂತರ ಪ್ರವಾದಿ(ಸ) ನಿದ್ದೆಯಿಂದ ಎದ್ದಾಗ ಅವರಿಗೆ ಹಾಲು ನೀಡಿದರು. ಹಝ್ರತ್ ಪೈಗಂಬರ್(ಸ) ಎಷ್ಟು ಕುಡಿದರು ಎಂದರೆ, ಅದರಿಂದ ಹಝ್ರತ್ ಅಬೂಬಕರ್(ರ) ಸಂತೋಷಗೊಂಡರು. ತದನಂತರ ನಾನು ಹೇಳಿದೆ ಯಾ ರಸೂಲಲ್ಲಾ!1 ಈಗ ಹೊರಡುವ ಸಮಯಬಂದಿದೆ. ಅದಕ್ಕೆ ಪ್ರವಾದಿ(ಸ) ನುಡಿದರು ನರಿ ಹೊರಡೋಣ. ಅಥವಾ ಇನ್ನೊಂದು ವರದಿಯ ಪ್ರಕಾರ ಪ್ರವಾದಿ(ಸ)ರವರು ಹೇಳಿದರು ಈಗ ಪುನಃ ನಮ್ಮ ಪ್ರಯಾಣ ಮುಂದುವರಿಸೋಣ? ಎಂದು. ಅದಕ್ಕೆ ನಾರಿ ಎಂದು ಹೇಳಿದೆವು. ಹೀಗೆ ಮತ್ತೆ ಪ್ರಯಾಣ ಮುಂದುವರಿಸಲಾಯಿತು. (ಸಹೀಹ್ ಬುಖಾರಿ ಕಿತಾಬ್ ಫಝಾಎಲುದ್ದಹಾಬ(ಸ), ಹದೀಸ್-3652) (ಸಬ್ಲುಲ್ ಹುದಾ ವರ್‍ರಶ್ಶಾದ್, ಸಂಪುಟ-3, ಪುಟ-243-244, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1993)

ಉರೈಖಿತ್‌ಜಿನಂತಹ ತುರಿತ (ಮಾರ್ಗ ತಜ್ಞ)ನ ಮೇಲ್ನೋಟದಲ್ಲಿ ತೀರಪ್ರದೇಶದ ಗ್ರಾಮಗಳ ಸಮೀಪದಿಂದ ಮದೀನದ ಕಡೆಗೆ ಈ ಯಾತ್ರೆ ಶುರುವಾಯಿತು. 100 ಒಂಟೆಗಳ ಬಹುಮಾನದ ಘೋಷಣೆಯು ಮೆಕ್ಕಾ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಾಮಾನ್ಯವಾಗಿತ್ತು ಮತ್ತು ಅನೇಕರು ಅದನ್ನು ಸ್ವೀಕರಿಸಲು ಬಯಸಿದ್ದರು. ಸುರಾಖ ಬಿನ್ ಮಾಲಿಕ್ ಹೇಳುತ್ತಾರೆ, ಇವರು ನಂತರ ಮುಸ್ಲಿಮರಾಗಿದ್ದರು, ಇಸ್ಲಾಮ್ ಸ್ವೀಕರಿಸಿದ ನಂತರ ಅವರು ಈ ಘಟನೆಯನ್ನು ವಿವರಿಸುತ್ತಾರೆ: ಖುರೈಶ್ ಅತ್ಯನಿಷೇಧಿಗಳ ದೂತರು ನಮ್ಮ ಬಳಿಗೆ ಬಂದು ಪ್ರವಾದಿ(ಸ) ಮತ್ತು ಹಝ್ರತ್ ಅಬೂಬಕರ್(ರ) ಇಬ್ಬರನ್ನು ಕೊಲ್ಲುವ ಅಥವಾ ಜೀವಂತವಾಗಿ ಸೆರೆಹಿಡಿಯುವವರಿಗೆ ದಿಯತ್ ಅನ್ನು ನಿಗದಿಪಡಿಸಿದ್ದರು.

ಸುರಾಖ ಹೇಳುತ್ತಾರೆ: ನಾನು ನನ್ನ ಜನರ ಬನು ಮುದ್‌ಲಿಜ್ ಅವರ ಸಭೆಯಲ್ಲಿ ಕುಳಿತಿದ್ದಾಗ ಒಬ್ಬ ವ್ಯಕ್ತಿ ಅವರ ಮುಂದೆ ಬಂದು ನಾವು ಕುಳಿತಿರುವಾಗ ನಮ್ಮ ಪಕ್ಕದಲ್ಲಿ ನಿಂತನು. ಆತನು ಹೇಳಿದನು: ಓ ಸುರಾಖ! ನಾನು ಕರಾವಳಿ ಪ್ರದೇಶದಲ್ಲಿ ನೆರಳನ್ನು ನೋಡಿದೆ ಅಥವಾ ಮೂರು ಜನರ ಕಾರವಾನ್ ಹೋಗುವುದನ್ನು ನಾನು ನೋಡಿದ್ದೇನೆ ಮತ್ತು ಅದು ಮುಹಮ್ಮದ್ ಇರಬಹುದು ಎಂದು ನಾನು ಭಾವಿಸುತ್ತೇನೆ. ಆಗ ಇದು ಮುಹಮ್ಮದ್‌ನ ಕಾರವಾನ್ ಎಂದು ನನಗೆ ತಿಳಿದಿತ್ತು ಆದರೆ ಈ ಬಹುಮಾನವನ್ನು ನನ್ನೊಂದಿಗೆ ಹಂಚಿಕೊಳ್ಳಲು ನಾನು ಬಯಸಲಿಲ್ಲ ಎಂದು ಸುರಾಕ ಬಿನ್ ಮಲಿಕ್ ಹೇಳುತ್ತಾರೆ. ಹಾಗಾಗಿ ನಾನು ತಕ್ಷಣ ಸಂದರ್ಭದ ರುಚಿಕರತೆಯನ್ನು ತೆಗೆದುಕೊಂಡು ಮಾಹಿತಿದಾರನಿಗೆ ಮೌನವಾಗಿರಲು ಸನ್ನೆ ಮಾಡಿದೆ ಮತ್ತು ನಾನೇ ಇಲ್ಲಿಂದ ಈಗಷ್ಟೆ ಮೂರು ಜನರು ಹೋಗಿದ್ದಾರೆ ಅವರಾಗಿರಬಹುದು ಎಂದು ಹೇಳಿದೆ, ಅದು ಪ್ರವಾದಿ ಮಹಮ್ಮದನ ಕಾರವಾನ್ ಆಗಲು ಸಾಧ್ಯವಿಲ್ಲ ಆದರೆ ನೀನು ಈಗ ಉಲ್ಲೇಖಿಸುತ್ತಿರುವ ಜನರು ನಮ್ಮ ಮುಂದೆಯಿಂದ ಹಾದು ಹೋಗಿದ್ದಾರೆ. ಅವರು ತಮ್ಮ ಕಳೆದುಹೋದ ಒಂಟೆಯನ್ನು ಹುಡುಕಲು ಹೋಗುತ್ತಿದ್ದವರೂ ಇದ್ದಾರೆ. ಯಾರಿಗೂ ಅನುಮಾನ ಬಾರದಂತೆ ನಾನು ಆ ಸಭೆಯಲ್ಲಿ ಸ್ವಲ್ಪ ಸಮಯ ಇದ್ದೆ ಎಂದು ಸುರಾಖ ಹೇಳುತ್ತಾರೆ ಮತ್ತು ನಂತರ ಅವರು ತನ್ನ ಸೇವಕಿಯೊಬ್ಬಳನ್ನು ನನ್ನ ವೇಗದ ಕುದುರೆಯನ್ನು ತೆಗೆದುಕೊಂಡು ಮನೆಯ ಹಿಂದಿನ ಯಾವುದೋ ಸ್ಥಳದಲ್ಲಿ ನಿಂತು ನನಗಾಗಿ ಮತ್ತು ಸ್ವಲ್ಪ ಸಮಯ ಕಾಯಲು ಹೇಳಿದರು. ಅವರೇ ಅಲ್ಲಿಗೆ ಬಂದರು ಮತ್ತೆ ಅವರು ಹೇಳುತ್ತಾರೆ ನಾನು ಮಾಟಮಂತ್ರ ಮಾಡಿದೆ ಆದರೆ ಆ ಮಾಟಮಂತ್ರವೂ ಪ್ರಯಾಣಕ್ಕೆ ವಿರುದ್ಧವಾಗಿ ತಿಳಿಸಿತು. ಆದರೆ ನಾನು ಗಮನ ಹರಿಸದೆ ನಾನಗೆ ತಿಳಿದಂತೆ ಹಝ್ರತ್ ಮುಹಮ್ಮದ್(ಸ) ರವರ ಕಾರವಾನ್‌ನ ಕಡೆಗೆ ಶೀಘ್ರದಲ್ಲೇ ಕಾರವಾನ್ ಅನ್ನು ತಲುಪಿದೆ ಮತ್ತು ಸ್ವಲ್ಪ ದೂರದಲ್ಲಿದ್ದಾಗ ನನ್ನ ಕುದುರೆ ಅಸಾಮಾನ್ಯವಾಗಿ ಎಡವಿ ನಾನು ಅದರಿಂದ ಬಿದ್ದೆ ಎಂದು ಸುರಾಖ ಹೇಳುತ್ತಾರೆ. ನಂತರ ನಾನು ಎದ್ದು ಪುನಃ ಮಾಟಮಂತ್ರ ಮಾಡಿದೆ ಆದರೆ ಅದು ಪುನಃ ನನ್ನ ವಿರುದ್ಧವೇ ಹೋಯಿತು ಆದರೆ ನಾನು ಮುಹಮ್ಮದ್(ಸ) ಅವರನ್ನು ಮರಳಿಸಿ ಹಿಂದಕ್ಕೆ ಕರೆದೊಯ್ದು ನೂರು ಒಂಟೆಗಳ ಬಹುಮಾನವನ್ನು ಪಡೆಯಲು ಬಯಸುತ್ತೇನೆ ಎಂದು ಭಾವಿಸಿದೆ. ನಂತರ ನಾನು ಎದ್ದು ಕುದುರೆಯನ್ನು ಏರಿದೆ ಮತ್ತು ಈಗ ನಾನು ಎಷ್ಟು ಹತ್ತಿರದಲ್ಲಿದ್ದೆನೆಂದರೆ ಅವರು ಮುಹಮ್ಮದ್(ಸ) ಮತ್ತು ಅಬೂಬಕರ್(ರ) ಎಂದು ನಾನು ಗುರುತಿಸಿದೆ ಆದರೆ ನಾನು ಮುಹಮ್ಮದ್(ಸಲ್ಲಲ್ಲಾಹು ಅಲೈಹಿವಸಲ್ಲಮ್) ಅವರ ಕೆಲವು ಪಠಣಗಳನ್ನು ಸಹ ಕೇಳಿದೆನು. ಪುನಃ ನಾನು ಮರಳಲ್ಲಿ ಬಿದ್ದೆ. ಮತ್ತು ನನ್ನ ಕುದುರೆಯ ಕಾಲುಗಳು ಮರಳಲ್ಲಿ ಹೂತಿಕೊಂಡಿತು. ಆಗ ನಾನು ಕುದುರೆಯನ್ನು ಖಂಡಿಸಿ ಎದ್ದುನಿಂತು ಅಂದರೆ ಕುದುರೆಯನ್ನು ಶಪಿಸಿ ಎದ್ದು ನಿಂತಾಗ ಕುದುರೆಯು ತನ್ನ ಕಾಲುಗಳನ್ನು ನೆಲದಿಂದ ತೆಗೆಯಲು ಸಾಧ್ಯವಾಗಲಿಲ್ಲ. ಕೊನೆಗೆ ನನ್ನ ಕುದುರೆ ನೆಟ್ಟಗೆ ನಿಂತಾಗ ಅದರ ಎರಡೂ ಕಾಲುಗಳಿಂದ ಧೂಳು ಎದ್ದು ಹೊಗೆಯಾಗಿ ಗಾಳಿಯಲ್ಲಿ ಹರಡಿತು. ಅದು ಎಷ್ಟು ಮುಳುಗಿದೆಯೆಂದರೆ, ಕಾಲುಗಳನ್ನು ಮಣ್ಣಿನಿಂದ ಅಥವಾ ಮರಳಿನಿಂದ ಹೊರತೆಗೆದಾಗ, ಧೂಳು ಹಾರಿಹೋಯಿತು. ಆದರೆ ಈಗ ನಾನು ಬಾಣಗಳಿಂದ ಮಾಟಮಂತ್ರ ಮಾಡಿದಾಗ ಅದು ನನಗೆ ಇಷ್ಟವಿಲ್ಲದನ್ನೆ ಹೊರಬಂತು. ಆದ್ದರಿಂದ ಕೊನೆಗೆ ನನಗೆ ಹಿಂಬಾಲಿಸುವುದು ಸರಿಯಲ್ಲವೆಂದು ಖಚಿತವಾಯಿತು. ಆಗ ಅವರು ಅಭಯ ನೀಡುವುದಾಗಿ ಉಚ್ಚವಾಗಿ ಹೇಳಿದರು. ಅದಕ್ಕೆ ಪ್ರವಾದಿ(ಸ) ಹಝ್ರತ್ ಅಬೂಬಕರ್(ರ) ಅವರಿಗೆ ಹೇಳಿದರು: ಅವನಿಗೆ ಏನು ಬೇಕು ಎಂದು ಕೇಳಿರಿ. ಅದಕ್ಕೆ

ಅವರು ನಾನು ಸುರಾಖ ಆಗಿದ್ದೇನೆ ಮತ್ತು ನಾನು ನಿಮ್ಮೊಂದಿಗೆ ಮಾತನಾಡಲು ಬಯಸುತ್ತೇನೆ ಎಂದು ಹೇಳಿದರು. ಮಕ್ಕಾದ ಜನರು ನಿಮ್ಮಿಬ್ಬರ ಮೃತ ಸ್ಥಿತಿಯಲ್ಲಿ ಅಥವಾ ಜೀವಂತವಾಗಿ ಸೆರೆಹಿಡಿಯಲು ನೂರು ಒಂಟೆಗಳ ಬಹುಮಾನವನ್ನು ನಿಗದಿಪಡಿಸಿದ್ದಾರೆ ಮತ್ತು ನಾನು ಅದೇ ದುರಾಸೆಯಲ್ಲಿ ನಿಮ್ಮನ್ನು ಹಿಂಬಾಲಿಸುತ್ತಿದ್ದೇನೆ, ಆದರೆ ನನ್ನೊಂದಿಗೆ ಏನಾಗಿದೆಯೋ ಅದರಿಂದ ನಾನು ನಿಮ್ಮನ್ನು ಹಿಂಬಾಲಿಸಿದ್ದು ಸರಿಯಲ್ಲ ಎಂದು ಖಚಿತವಾಯಿತು. ಅವರು ಪವಿತ್ರ ಪ್ರವಾದಿ(ಸ)ರವರ ಸೇವೆಯಲ್ಲಿ ಪ್ರಯಾಣದಲ್ಲಿ ಬೇಕಾದ ವಸ್ತುಗಳನ್ನು ಅರ್ಪಿಸಿದರು ಆದರೆ ಪವಿತ್ರ ಪ್ರವಾದಿ(ಸ) ಸ್ವೀಕರಿಸಲಿಲ್ಲ. ನಮ್ಮ ಬಗ್ಗೆ ಯಾರಿಗೂ ಹೇಳಬೇಡಿ ಎಂದು ಮಾತ್ರ ಹೇಳಿದರು. ನೀವು ಒಂದು ದಿನ ಖಂಡಿತ ಅರಸರಾಗುವಿರಿ ಎಂದು ನನಗೆ ದೃಢವಿಶ್ವಾಸವಿದೆ. ಆ ದಿನದಂದು ನನ್ನೊಡನೆ ಗೌರವಾದರದಿಂದ ವರ್ತಿಸಲಾಗುವುದು ಎಂದು ನನಗೆ ಲಿಖಿತ ವಾಗ್ದಾನವನ್ನು ನೀಡಿರಿ. ಹಝ್ರತ್ ಪೈಗಂಬರ್(ಸ) ಅವರಿಗೆ ಹಾಗೆ ಲಿಖಿತವನ್ನು ನೀಡಿದರು. (ಸಹೀಹ್ ಅಲ್-ಬುಖಾರಿ, ಕಿತಾಬ್ ಅಲ್- ಮನಾಕಿಬ್, ವರದಿ ಸಂಖ್ಯೆ. 3906) (ಸಬ್ಲುಲ್ ಹುದಾ ವರ್‍ರಶ್ಶಾದ್, ಸಂಪುಟ-3, ಪುಟ-248, ದಆರು ಕುತುಬ್ ಇಲ್ಮಿಯ ಬೈರೂತ್ 1993) (ಮುಹಮ್ಮದ್ ರಸೂಲುಲ್ಲಾಹ್ ವಲ್ಲಝೀನ ಮಾಅಹು, ಸಂಪುಟ-3, ಪುಟ-64-65, ಮಿಸರ್)

ಈ ಪ್ರಸ್ತಾಪವು ಇನ್ನು ಮುಂದೆ ನಡೆಯುವುದು. ನಾಳೆ ಇನ್ಶಾಅಲ್ಲಾಹ್ ಹೊಸ ವರ್ಷ ಆರಂಭವಾಗುತ್ತಿದೆ.

ಬರುತ್ತಿರುವ ವರ್ಷವನ್ನು ಅಲ್ಲಾಹನು ಜಮಾಅತಿನ ಪ್ರತಿಯೊಬ್ಬರಿಗೂ ಜಮಾಅತಿಗೂ ಎಲ್ಲ ರೀತಿಯಲ್ಲೂ ಅನುಗ್ರಹೀತವನ್ನಾಗಿ ಮಾಡಲಿ. ಎಲ್ಲ ರೀತಿಯ ಕೆಡುಕುಗಳಿಂದ ಜಮಾಅತನ್ನು ಸಂರಕ್ಷಿಸಲಿ. ಜಮಾಅತಿನ ವಿರುದ್ಧವಾಗಿ ಶತ್ರುಗಳು ನಡೆಸುವ ಪ್ರತಿಯೊಂದು ಯೋಜನೆ ಮಣ್ಣುಪಾಲಾಗಲಿ. ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರೊಡನೆ ಮಾಡಿರುವ ವಾಗ್ದಾನಗಳು ಈಡೇರುವುದಾಗಿ ನಾವು ಸಹ ನಮ್ಮ ಜೀವಿತದಲ್ಲಿ ನೋಡುವಂತಾಗಲಿ. ಅಲ್ಲಾಹನು ನಮಗೆ ಆ ದೃಶ್ಯಗಳನ್ನು ಸಹ ತೋರಿಸಲಿ. ಒಟ್ಟಿನಲ್ಲಿ ಬಹಳವಾಗಿ ಪ್ರಾರ್ಥನೆಗಳನ್ನು ಮಾಡುತ್ತಿರಬೇಕು.

ಹೊಸ ವರ್ಷವನ್ನು ಪ್ರಾರ್ಥನೆಯೊಂದಿಗೆ ಪ್ರವೇಶಿಸಿರಿ. ವಿಶೇಷವಾಗಿ ತಹಜ್ಜುದ್ ನಮಾಝನ್ನು ನಿರ್ವಹಿಸಿರಿ. ಕೆಲವು ಮಸೀದಿಗಳಲ್ಲಿ ಅದರ ವ್ಯವಸ್ಥೆಯನ್ನು ಮಾಡಲಾಗಿದೆ. ಎಲ್ಲಿ ಅದರ ಏರ್ಪಾಡು ಮಾಡಲಾಗಿಲ್ಲವೋ ಅಲ್ಲೂ ಮಾಡಬೇಕು. ಜಮಾಅತಿಯಾಗಿ ಇರದಿದ್ದರೆ ಒಬ್ಬಂಟಿಯಾಗಿಯೂ ಮತ್ತು ಮನೆಗಳಲ್ಲೂ ತಹಜ್ಜುದ್ ನಮಾಝನ್ನು ವಿಶೇಷವಾಗಿ ನಿರ್ವಹಿಸಿ ದುಆ ಮಾಡಬೇಕು. ಮೊದಲನೆಯದಾಗಿ ಇದು ಸ್ಥಿರವಾದ ಅಭ್ಯಾಸವಿರಬೇಕು. ಆದರೆ ನಾಳೆಯಿಂದ ಅದನ್ನು ನಿರ್ವಹಿಸುವಾಗ ಅಥವಾ ಇಂದು ರಾತ್ರಿಯಿಂದ ಅದನ್ನು ನಿರ್ವಹಿಸುವಾಗ ಅದನ್ನು ಜೀವಿತದ ಸ್ಥಾಯಿಯಾದ ಭಾಗವನ್ನಾಗಿ ಮಾಡಲು ಪ್ರಯತ್ನಿಸಬೇಕು.

ಎಲ್ಲರಿಗೂ ಅಲ್ಲಾಹನು ಅದರ ಸೌಭಾಗ್ಯ ನೀಡಲಿ. ದುರೂದ್ ಶರೀಫ್ ಮತ್ತು ಇಸ್ತಿಗ್ಫಾರ್ ಅಲ್ಲದೇ **ರಬ್ಬನಾ ಲಾ ತುಝಿಗ್ ಖುಲೂಬನಾ ಬಅ್‌ದ ಇದ್ ಹದೈತನಾ ವಹಬ್‌ಲನಾ ಮಿಲ್ಲದುನ್‌ಕ ರಹ್ಮತನ್ ಇನ್ನಕ ಅಂತಲ್ ವಹ್ಹಾಬ್** ಎಂಬ ಪ್ರಾರ್ಥನೆಯನ್ನು ಮಾಡಿರಿ. (ಅರ್ಥ: 'ಹೇ ನಮ್ಮ ಪ್ರಭೂ, ಸನ್ಮಾರ್ಗವನ್ನು ದಯಪಾಲಿಸಿದ ಬಳಿಕ ನಮ್ಮ ಹೃದಯಗಳು ವಕ್ರಗೊಳ್ಳುವಂತೆ ಮಾಡದಿರು ಮತ್ತು ನಮಗೆ ನಿನ್ನಿಂದ ಕಾರುಣ್ಯವನ್ನು ದಯಪಾಲಿಸು. ನಿಸ್ಸಂದೇಹವಾಗಿಯೂ ಅತಿ ಹೆಚ್ಚು ದಯಪಾಲಿಸುವವನು ನೀನೇ ಆಗಿರುವೆ.') ಈ ದುಆ ಸಹ ಮಾಡಿರಿ: **ರಬ್ಬನಗ್ಫಿರ್‌ಲನಾ ಝುನೂಬನಾ ವ ಇಸ್ರಾಫನಾ ಫೀ ಅಮ್ರಿನಾ ವ ಸಬ್ಬಿತ್ ಅಖ್‌ದಾಮನಾ ವನ್‌ಸುರ್‌ನಾ ಅಲಲ್ ಖೌಮಿಲ್ ಕಾಫಿರೀನ್**. (ಅರ್ಥ: 'ನಮ್ಮ ಪ್ರಭೂ, ನಮ್ಮ ಪಾಪಗಳನ್ನೂ ನಮ್ಮ ವರ್ತನೆಯಲ್ಲುಂಟಾದ ಅತಿರೇಕವನ್ನೂ ಕ್ಷಮಿಸು; ನಮ್ಮ ಹೆಜ್ಜೆಗಳನ್ನು ದೃಢಪಡಿಸು ಹಾಗೂ ಅವಿಶ್ವಾಸಿಗಳಿಗೆದುರಾಗಿ ನೀನು ನಮಗೆ ಸಹಾಯ ಮಾಡು.') ಪ್ರತಿಯೊಬ್ಬ ಅಹ್ಮದಿಗೂ ಅಲ್ಲಾಹನು ಇದರ ಸೌಭಾಗ್ಯ ನೀಡಲಿ.

ಈಗ ಜುಮಾ ನಮಾಝ್ ನಂತರ ಕೆಲವು ಜನಾಝ ಗಾಇಬ್ ನಮಾಝ್ ನಿರ್ವಹಿಸುವೆನು. ಅವರ ಬಗ್ಗೆ ಪ್ರಸ್ತಾಪಿಸಲು ಬಯಸುತ್ತೇನೆ. ಮೊದಲ ಪ್ರಸ್ತಾಪ ಮುಲ್ತಾನ್ ಜಿಲ್ಲೆಯ ಅಮೀರ್ ಆಗಿದ್ದ ಸನ್ಮಾನ್ಯ ಮಲಿಕ್ ಫಾರೂಖ್ ಅಹ್ಮದ್ ಖೋಖರ್ ಸಾಹಿಬ್‌ರದ್ದಾಗಿದೆ. ಡಿಸೆಂಬರ್ 18ರಂದು 80ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರ ತಂದೆ ಮಲಿಕ್ ಉಮರ್ ಅಲಿ ಖೋಖರ್ ಸಾಹಿಬ್ ಆಗಿದ್ದರು. ಅವರು ಮುಲ್ತಾನಿನ ಸರದಾರರೆಂದು ಕರೆಯಲ್ಪಡುತ್ತಿದ್ದರು. ತಾಯಿ ಸಯ್ಯದ ನುಸ್ರತ್ ಜಹಾನ್ ಬೇಗಂ ಸಾಹಿಬ. ಸಯ್ಯದ ಬೇಗಂ ಸಾಹಿಬ ಎಂಬ ಹೆಸರಿನಿಂದ ಅರಿಯಲ್ಪಡುತ್ತಿದ್ದರು. ಹಝ್ರತ್ ಮೀರ್ ಮುಹಮ್ಮದ್ ಇಸ್‌ಹಾಖ್ ಸಾಹಿಬ್‌ರ ಮಗಳಾಗಿದ್ದರು. ಹಝ್ರತ್ ಮಲಿಕ್ ಉಮರ್ ಅಲಿ ಸಾಹಿಬ್‌ರು ತನ್ನ ಯೌವ್ವನದಲ್ಲಿ ಅಹ್ಮದಿಯ್ಯತ್ ಸ್ವೀಕರಿಸಿದ್ದರು. ಹಝ್ರತ್ ಖಲೀಫತುಲ್ ಮಸೀಹ್ ಸಾನಿಯರ ಕಾಲದಲ್ಲಿ ಖಾದಿಯಾನಿಗೆ ಹೋಗಿ ಅವರು ಬೈಅತ್ ಮಾಡುವ ಸೌಭಾಗ್ಯ ಪಡೆದರು. ಮಲಿಕ್ ಉಮರ್ ಅಲಿ ಸಾಹಿಬ್‌ರ ನಿಧನ ಬೇಗನೇ ಆಗಿತ್ತು. ಆ ಸಮಯದಲ್ಲಿ ಮಲಿಕ್ ಫಾರೂಖ್ ಅಹ್ಮದ್ ಸಾಹಿಬ್ ಸುಮಾರು ಇಪ್ಪತ್ತು ಇಪ್ಪತ್ತೆರಡು ವರ್ಷದ ಯುವಕರಾಗಿದ್ದರು. ಮಲಿಕ್ ಸಾಹಿಬ್‌ರಿಗೆ ಭೂಸ್ವತ್ತು ಅಲ್ಲದೇ ಕರಾಚಿಯಲ್ಲಿ ಸ್ವಲ್ಪ ವ್ಯಾಪಾರವೂ ಇತ್ತು. ಅದನ್ನು ಅವರು ಬಹಳ ಉತ್ತಮ ರೀತಿಯಲ್ಲಿ ನಿಭಾಯಿಸಿದರು. ತನ್ನ ತಂದೆತಾಯಂದಿರು ಮತ್ತು ಸಹೋದರ ಸಹೋದರರ ಪಾಲನೆ ಪೋಷಣೆ ಮಾಡಿದರು. ಮಲಿಕ್ ಫಾರೂಖ್ ಖೋಖರ್ ಸಾಹಿಬ್‌ರು ದೀರ್ಘಕಾಲ ಮುಲ್ತಾನ್ ಜಿಲ್ಲೆಯ ಖಾಇದ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಆಗಿಯೂ ಮುಲ್ತಾನ್ ಪ್ರದೇಶದ ಖಾಇದ್ ಆಗಿಯೂ ಸೇವೆ ಮಾಡುತ್ತಿದ್ದರು. 1980 ರಿಂದ 85 ತನಕ ಮುಲ್ತಾನಿನ ಜಿಲ್ಲಾ ಅಮೀರ್ ಆಗಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆದರು. ಈ ವೇಳೆ ಅವರು ಮುಲ್ತಾನ್ ಪಟ್ಟಣದ ಅಮೀರ್ ಆಗಿ ಸೇವೆ ಸಲ್ಲಿಸುವ ಸೌಭಾಗ್ಯ ಪಡೆಯುತ್ತಿದ್ದರು. ಅವರ ವಿವಾಹ 1968ರಲ್ಲಿ ಹಝ್ರತ್ ಮಿರ್ಝಾ ಅಝೀಝ್ ಅಹ್ಮದ್ ಸಾಹಿಬ್‌ರ ಮಗಳಾದ ದರ್ದಾನ ಸಾಹಿಬರೊಂದಿಗೆ ನಡೆಯಿತು. ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರಹ್) ನಿಕಾಹ್ ನಿರ್ವಹಿಸಿದ್ದರು. ಅಲ್ಲಾಹನು ಅವರಿಗೆ ಒಬ್ಬ ಪುತ್ರ ಮತ್ತು ಐವರು ಪುತ್ರಿಯರನ್ನು ದಯಪಾಲಿಸಿದ್ದಾನೆ.

ಅವರ ಪತ್ನಿ ಹೇಳುತ್ತಾರೆ: ಬಹಳ ಪ್ರೀತಿಸುವ ಮತ್ತು ಕಾಳಜಿ ವಹಿಸುವವರಾಗಿದ್ದರು. ಸಣ್ಣ ಸಣ್ಣ ಸಂಗತಿಗಳ ಬಗ್ಗೆ ಕಾಳಜಿ ವಹಿಸುತ್ತಿದ್ದರು. ನಿಯತವಾಗಿ ತಹಜ್ಜುದ್ ನಿರ್ವಹಿಸುತ್ತಿದ್ದರು. ನನ್ನನ್ನೂ ದಿನಾಲೂ ತಹಜ್ಜುದ್‌ಗಾಗಿ ಎಬ್ಬಿಸುತ್ತಿದ್ದರು. ಮೃತಪಟ್ಟ ದಿನದ ರಾತ್ರಿಯೂ ನಫ್ಲ್ ನಮಾಝ್ ನಿರ್ವಹಿಸಿ ಮಲಗಿದ್ದರು. ಸದಾ ವುಝೂವಿನಲ್ಲಿ ಇರಲು ಶ್ರಮಿಸುತ್ತಿದ್ದರು. ಜಮಾಅತಿನ ಅಮೀರ್ ಆಗಿಲ್ಲದ ಕಾಲದಲ್ಲಿ ಯಾವನಾದರೂ ಅಹ್ಮದಿಯ ಏನಾದರೂ ಸಮಸ್ಯೆಯಿದ್ದರೆ ಬೇಗನೇ ಆ ಕೆಲಸಕ್ಕಾಗಿ ತಯಾರಾಗುತ್ತಿದ್ದರು. ಜಮಾಅತಿನ ಅಮೀರ್ ಆದಾಗ, ಯಾವುದೇ ಸಮಯದಲ್ಲಿ ಅತಿಥಿಗಳು ಬರಬಹುದು ಆದ್ದರಿಂದ ಯಾವಾಗಲೂ ಆಹಾರ ಮತ್ತು ಚಹಾದ ಏರ್ಪಾಡು ಇರಬೇಕೆಂದು ಹೇಳಿದ್ದರು. ನನ್ನ ಮನೆ ಅತಿಥಿಗಳಿಲ್ಲದೇ ಇರುವುದಾಗಿ ನನಗೆ ನೆನಪಿಲ್ಲ. ಕೆಲವು ಮುಬಲ್ಲಿಗ್‌ರನ್ನು ಸಹ ಮನೆಯಲ್ಲಿ ತಂಗಿಸುತ್ತಿದ್ದರು. ಮನೆ ಆಫೀಸ್‌ನಂತೆಯೇ ಇತ್ತು. ಬಹಳ ತೆರೆದ ಮನಸ್ಸಿನ ಮತ್ತು ಮನಸ್ಸಾರೆ ಪ್ರೀತಿಸುವವರಾಗಿದ್ದರು. ಅಹ್ಮದಿಯೇತರ ಸಂಬಂಧಿಕರು ಮತ್ತು ಸಂಪೂರ್ಣ ಖೋಖರ್ ಕುಟುಂಬ ಅವರನ್ನು ಬಹಳ ಗೌರವಾದರದಿಂದ ಕಾಣುತ್ತಾರೆ. ಅಲ್ಲಾಹನ ಅನುಗ್ರಹದಿಂದ ಪವಿತ್ರ ಖುರ್‌ಆನಿನ ಪಾರಾಯಣ ಬಹಳ ಉತ್ತಮವಾಗಿ ಮಾಡುತ್ತಿದ್ದರು. ನಾನು ತಿಲಾವತ್ ಮಾಡುವಾಗ ಪವಿತ್ರ ಖುರ್‌ಆನ್ ನೋಡದೇ ತಪ್ಪುಗಳನ್ನು ಸರಿಪಡಿಸಿ ಹೇಳುತ್ತಿದ್ದರು.

ಅವರ ಮಗನಾದ ತಲ್‌ಹ ಹೇಳುತ್ತಾರೆ: ಮನೆ ಅವರ ಹೃದಯದ ಹಾಗೆ ಎಲ್ಲರಿಗೂ ತೆರೆದಿತ್ತು. ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್‌ರ ಹಿಜ್ರತ್ ಯಾತ್ರೆಯಲ್ಲಿ ಹುಝೂರಿನ ಸಂಘದೊಂದಿಗೆ ಭಾಗಿಯಾಗಲು ಅವರಿಗೆ ಸೌಭಾಗ್ಯ ಲಭಿಸಿತ್ತು. ಅಮೀರ್ ಆಗಿದ್ದಾಗ ನಮ್ಮ ಮನೆ ಮನೆಗಿಂತ ಹೆಚ್ಚಾಗಿ ಆಫೀಸ್ ಹಾಗೆ ಇರುತ್ತಿತ್ತು. ತನ್ನ ಸಂಪೂರ್ಣ ಸಮಯವನ್ನು ಧರ್ಮದ ಸೇವೆಗಾಗಿ ಮುಡಿಪಾಗಿಟ್ಟಿದ್ದರು. ಅಹ್ಮದಿಯೇತರ ಸಂಬಂಧಿಕರ ಧನಸಹಾಯ ಸಹ ಮಾಡುತ್ತಿದ್ದರು. ಸದಾ ನಮ್ಮೊಡನೆ ನಮಾಝ್ ನಿರ್ವಹಿಸಲು ಉಪದೇಶಿಸುತ್ತಿದ್ದರು. ವಿಶೇಷವಾಗಿ ಫಜ್ರ್ ನಮಾಝ್. ಅವರ ಕಿರಿಯ ಮಗಳಾದ ಫಾಇಝ ಹೇಳುತ್ತಾಳೆ: ತಂದೆ ಅಲ್ಲಾಹನ ಮೇಲಿನ ಭರವಸೆಯಲ್ಲಿ ಒಂದು ಮಾದರಿಯಾಗಿದ್ದರು. ಎಲ್ಲ ರೀತಿಯ ಕಾಲವನ್ನು ಅವರು ಕಂಡರು. ಯೌವ್ವನದಲ್ಲಿ ಅನಾಥರಾದರು. ಕಷ್ಟದ ಮತ್ತು ಸುಖದ ಕಾಲವನ್ನು ಕಂಡರು. ನನ್ನ ಎಲ್ಲ ಕೆಲಸವನ್ನು ಅಲ್ಲಾಹನು ಸ್ವತಃ ಮಾಡುತ್ತಾನೆ ಎಂದು ಯಾವಾಗಲೂ ಹೇಳುತ್ತಿದ್ದರು. ಖಿಲಾಫತಿನೊಂದಿಗೆ ಅಪರಿಮಿತವಾದ ಪ್ರೀತಿಯಿತ್ತು. ಖಿಲಾಫತಿನ ಬಗ್ಗೆ ಹೇಳುವಾಗ ಅತ್ತುಬಿಡುತ್ತಿದ್ದರು. ಒಂದು ವಿಪತ್ತು ಸಹ ಅವರಿಗೆ ಉಂಟಾಯಿತು. ಅದನ್ನು ಕೂಡ ಅವರು ಬಹಳ ಸಹನೆ ಮತ್ತು ದುಆದೊಂದಿಗೆ ಕಳೆದರು.

ಅವರ ಕಿರಿಯ ಸಹೋದರ ಹೇಳುತ್ತಾರೆ: ನನ್ನ ಸಹೋದರ ಬಡವರಿಗೆ ಸಾಲ ನೀಡುತ್ತಿದ್ದರು. ಆದರೆ ಎಂದಿಗೂ ಮರಳಿ ಕೇಳುತ್ತಿರಲಿಲ್ಲ.

ಅವರ ಕಿರಿಯ ಮಗಳಾದ ನಮೂದ್ ಸಹರ್ ಹೇಳುತ್ತಾರೆ: ತಂದೆಯ ಕೆಲವು ಸಂಗತಿಗಳು ವಿಶೇಷವಾಗಿದ್ದುವು ಮತ್ತು ಅವು ಪದೇ

ಪದೇ ನೆನಪಿಗೆ ಬರುತ್ತವೆ. ಅವುಗಳಲ್ಲಿ ಅತ್ಯಧಿಕ ಅವರ ಅತಿಥಿ ಸತ್ಕಾರ ಮತ್ತು ಜನರೊಂದಿಗೆ ಪ್ರೀತಿ. ಅತಿಥಿ ಸತ್ಕಾರದ ಸ್ಥಿತಿ ಏನಾಗಿತ್ತು ಎಂದರೆ, ಮನೆಯಲ್ಲಿ ಆಹಾರ ತಯಾರಿಸಿ ಮನೆಯವರು ಊಟಕ್ಕಾಗಿ ಕುಳಿತುಕೊಂಡಿರುವಾಗ ಕೆಲವೊಮ್ಮೆ ಅತಿಥಿಗಳು ಬರುತ್ತಿದ್ದರು. ಆಗ ಅದೇ ಊಟವನ್ನು ಅತಿಥಿಗಳಿಗೆ ಕೊಡುತ್ತಿದ್ದರು ಮತ್ತು ಮನೆಯವರು ಮೊಟ್ಟೆಗಳನ್ನು ಬೇಯಿಸಿ ತಿನ್ನುತ್ತಿದ್ದರು. ಅನೇಕ ತಪ್ಪುಗಳು ಜೀವಿತದಲ್ಲಿ ಆಗುತ್ತವೆ. ಮನುಷ್ಯನಿಂದ ಹೆಚ್ಚು ಕಮ್ಮಿ ಆಗುತ್ತವೆ. ಆದ್ದರಿಂದ ಕೆಲವೊಮ್ಮೆ ವಿಪತ್ತುಗಳಿಂದ ಸಾಗಬೇಕಾಗಿ ಬರುತ್ತದೆ. ಆದರೆ ಅವರು ಖಿಲಾಫತಿನ ಬಗ್ಗೆ ಎಂದಿಗೂ ಖಲೀಫರ ತೀರ್ಪು ತಪ್ಪಾಯಿತು ಎಂಬ ಭಾವನೆ ನಮಗೆ ಬರುವ ರೀತಿಯಲ್ಲಿ ಮಾತನಾಡುತ್ತಿರಲಿಲ್ಲ. ಮನೆಯಲ್ಲಿ ಖುತ್ಬಗಳನ್ನು ಕೇಳುವುದು ಮತ್ತು ಜಮಾಅತಿನೊಂದಿಗೆ ಸಂಬಂಧವಿರಿಸುವುದರ ವಿಶೇಷ ಗಮನವಿತ್ತು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಮಕ್ಕಳಿಗೂ ಸಹನೆ ಮತ್ತು ಧೈರ್ಯವನ್ನು ನೀಡಲಿ. ಸತ್ಕರ್ಮಗಳಲ್ಲಿ ಮುಂದಾಗಲು ಸೌಭಾಗ್ಯ ನೀಡಲಿ.

ಮುಂದಿನ ಜನಾಝ ಇಂಡೋನೇಶ್ಯದ ರಹ್ಮತುಲ್ಲಾಹ್ ಸಾಹಿಬ್‌ರದ್ದಾಗಿದೆ. 66ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಪೂರ್ವ ಜಾವದಲ್ಲಿ ಅವರು ಜನಿಸಿದ್ದರು. 1980ರಲ್ಲಿ ಇಂಡೋನೇಶಿಯದ ಮಾಜಿ ರಈಸುತ್ತಬ್‌ಲೀಗ್ ಸನ್ಮಾನ್ಯ ಸುಯೂತಿ ಅಝೀಝ್ ಅಹ್ಮದ್ ಸಾಹಿಬ್‌ರ ಮೂಲಕ ಬೈಅತ್ ಮಾಡಿ ಜಮಾಅತಿಗೆ ಪ್ರವೇಶಿಸಿದ್ದರು 1993ರಲ್ಲಿ ವಸಿಯ್ಯತ್ ನಿಝಾಮಿನಲ್ಲಿ ಸೇರಿದ್ದರು. ತನ್ನ ನಿಧನದ ತನಕ ಅಲ್ಲಿಯ ಕೇರಂಗಂಟಿಕ ಜಮಾಅತಿನಲ್ಲಿ ಸೇವೆ ಸಲ್ಲಿಸುತ್ತಿದ್ದರು. ದಿವಂಗತರು ತನ್ನ ಪತ್ನಿಯನ್ನಲ್ಲದೆ 3 ಮಕ್ಕಳು ಮತ್ತು 6 ಮೊಮ್ಮಕ್ಕಳನ್ನು ಅಗಲಿರುವರು. ಅವರ ಮಗಳು ಬರೆಯುತ್ತಾರೆ: ಬೈಅತ್ ಮಾಡಿದ ನಂತರ ಲೋಕಲ್ ಜಮಾಅತ್ ಅಲ್ಲದೆ ಲೋಕಲ್ ಮಜ್ಲಿಸ್ ಅನ್ಸಾರುಲ್ಲಾಹ್‌ದಲ್ಲೂ ಸೇವೆ ಸಲ್ಲಿಸುತ್ತಿದ್ದರು. ಜಮಾಅತಿನ ವಿರೋಧಿಗಳ ಕಡೆಯಿಂದ ಹಲ್ಲೆಗಳು ಮತ್ತು ಬೆದರಿಕೆಗಳು ಉಂಟಾಗುತ್ತಿದ್ದುವು. ಅವರು ಬಹಳ ಧೈರ್ಯದಿಂದ ಜಮಾಅತಿನ ಕಡೆಯಿಂದ ಡಿಫೆನ್ಸ್ ಮಾಡುತ್ತಿದ್ದರು. ಬಹಳ ಉದಾರಿಯಾಗಿದ್ದರು. ಯಾರಾದರೂ ಸಹಾಯಕ್ಕಾಗಿ ಅಥವಾ ಸಾಲ ಪಡೆಯಲು ಬಂದರೆ ಯಾವಾಗಲೂ ಸಹಾಯ ಮಾಡುತ್ತಿದ್ದರು. ಖಿಲಾಫತಿನೊಂದಿಗೆ ಅಪರಿಮಿತವಾದ ಪ್ರೀತಿಯನ್ನು ಹೊಂದಿದ್ದರು. ಬಹಳ ಅನುಸರಣೆಯುಳ್ಳವರಾಗಿದ್ದರು.

ಇಂಡೋನೇಶ್ಯದ ಅಮೀರ್ ಅಬ್ದುಲ್ ಬಾಸಿತ್ ಸಾಹಿಬ್‌ರು ಬರೆಯುತ್ತಾರೆ: ಖಿಲಾಫತ್ ಮತ್ತು ಜಮಾಅತಿನೊಂದಿಗೆ ಅಪರಿಮಿತವಾದ ಪ್ರೀತಿಯನ್ನು ಹೊಂದಿದ್ದರು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಮಕ್ಕಳಿಗೂ ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ.

ಮುಂದಿನ ಜನಾಝ ಯಾರೀಪೂರ ಕಾಶ್ಮೀರದ ಅಲ್‌ಹಾಜ್ ಅಬ್ದುಲ್ ಹಮೀದ್ ಟಾಕ್ ಸಾಹಿಬ್‌ರದ್ದಾಗಿದೆ. ಡಿಸೆಂಬರ್ 24ರಂದು 94ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅಲ್ಲಾಹನ ಅನುಗ್ರಹದಿಂದ ಅವರು ವಸಿಯ್ಯತ್ ಮಾಡಿದ್ದರು. ಯಾರಿಪೂರದ ಆರಂಭ ಕಾಲದ ಅಹ್ಮದಿಯರಲ್ಲಿ ಒಬ್ಬರಾದ ಮುಹಮ್ಮದ್ ಅಕ್ರಂ ಟಾಕ್ ಸಾಹಿಬ್‌ರ ಮಗನಾಗಿದ್ದರು. ಅವರು ಬಹಳ ಸಾತ್ವಿಕ, ಸೌಮ್ಯ ಸ್ವಭಾವಿ, ಸ್ನೇಹಮಯಿ, ಎಲ್ಲರಿಗೂ ಪ್ರಿಯಕರ, ಸಭ್ಯ, ಮೌನಪ್ರಕೃತಿಯ ಹಿರಿಯ ವ್ಯಕ್ತಿಯಾಗಿದ್ದರು. ದೀರ್ಘ ಕಾಲ ಜಮಾಅತಿನ ಸೇವೆ ಸಲ್ಲಿಸುವ ಸೌಭಾಗ್ಯ ಪಡೆದರು. ಜಮ್ಮು ಕಾಶ್ಮೀರ ರಾಜ್ಯದ ಅಮೀರ್ ಅಲ್ಲದೆ, ಜಿಲ್ಲಾ ಅಮೀರ್ ಮತ್ತು ನಾಝಿಮ್ ಅನ್ಸಾರುಲ್ಲಾಹ್ ಆಗಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆದರು. ಪ್ರಾದೇಶಿಕ ಜಮಾಅತಿನಲ್ಲಿ ಪ್ರಾದೇಶಿಕ ಹುದ್ದೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದರು. ವರ್ಷಾನುಗಟ್ಟಲೆ ತಹ್ರೀಕ್ ಜದೀದ್ ಭಾರತದ ಸ್ವತಂತ್ರ ಸದಸ್ಯರಾಗಿದ್ದರು. ರಾಜ್ಯ ಇಮಾರತಿನಲ್ಲಿ ಅವರ ಕಾಲದಲ್ಲಿ 1987ರಲ್ಲಿ ಕಾಶ್ಮೀರದಲ್ಲಿ ಜಮಾಅತಿನ ಐದು ಸ್ಕೂಲುಗಳ ಸ್ಥಾಪನೆಯಾಯಿತು. ಅನೇಕ ಮಸೀದಿಗಳು ಮತ್ತು ಮಿಶನ್ ಹೌಸುಗಳ ನಿರ್ಮಾಣಕ್ಕಾಗಿ ಅವರು ಬಹಳ ಪರಿಶ್ರಮಿಸಿದರು. ಯುವಕರ ಜ್ಞಾನಪರವಾದ ಸಾಮರ್ಥ್ಯಗಳನ್ನು ಮೇಲಕ್ಕೆತ್ತಲು ಮತ್ತು ವರ್ಧಿಸಲಿಕ್ಕಾಗಿ ಅವರು ಸಾಕಷ್ಟು ಪ್ರಯತ್ನಗಳನ್ನು ಮಾಡುತ್ತಿದ್ದರು. ಈ ಕೆಲಸದಲ್ಲಿ ಸದಾ ಮುಂದಿರುತ್ತಿದ್ದರು. ಯಾರೀಪೂರದ ಪ್ರದೇಶದಲ್ಲಿ ಅವರ ಸಾಮಾಜಿಕ ಸೇವೆಗಳ ಕಾರಣದಿಂದ ಅವರಿಗೆ ಬಹಳ ಗೌರವವಿತ್ತು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ.**ಆಮೀನ್**

*************

**MUSLIM TELEVISION AHMADIYYA INTERNATIONAL**
**www.mta.tv**

*(ಪುಟ ಸಂಖ್ಯೆ 02ರ ಉಳಿದ ಭಾಗ)*

ನೋಡಿದ್ದೀರಿ. ಆ ಗ್ರಂಥಗಳು ಮುತ್ತಿನಂತಿವೆ. ಅವು ಆಧ್ಯಾತ್ಮದ ಹಾಲು ಉಣಿಸುತ್ತಿದೆ. ಅವುಗಳನ್ನು ಮೌಲ್ವಿಗಳು ಒಂದು ದೃಷ್ಟಾಂತ ಎಂದು ಪರಿಗಣಿಸುವರು ಎಂದು ಭಾವಿಸುತ್ತೇನೆ. ಅದನ್ನು ನೋಡಲು ಸಿದ್ಧರಾಗುವರು, ನಾವು ಸದಾ ಅದೇ ಭರವಸೆಯನ್ನು ಹೊಂದಿದ್ದೇವೆ. ಆದರೆ ಅವರುಗಳು ಕೆಟ್ಟದ್ದರಿಂದ ಅವರ ಕಾರ್ಯಗಳ ಕೆಡುಕುಗಳು ಬಯಲಾದವು. ಅದರಿಂದ ತಿಳಿಯಿತು ನನ್ನ ಗ್ರಹಿಕೆ ತಪ್ಪಾಯಿತು. ಮೌಲ್ವಿಗಳ ಕಣ್ಣುಗಳು ತೆರೆಯುತ್ತಿಲ್ಲ. ಅದರಿಂದ ನಿರಾಶೆಯಾಯಿತು ಮತ್ತು ಭರವಸೆ ಕಮರಿಹೋಯಿತು. ಶೇಖ್ ಬಟಾಲ್ವಿ ಸತ್ಯಾನ್ವೇಷಕರಿಗೆ ಅಡ್ಡಿಯಾದರು. ನನ್ನ ಗ್ರಂಥದ ಮೇಲೆ ಆಕ್ಷೇಪಗಳನ್ನು ಎತ್ತಿದರು ಮತ್ತು ಹೇಳಿದರು. ಅವರ ನುಡಿಗಳು ಹಗುರವಾಗಿ ಒಳ್ಳೆಯದಲ್ಲ. ಬದಲು ತಪ್ಪು ಹಾಗೂ ಅಶ್ಲೀಲವಾಗಿವೆ. ಅವರ ವಿವರಗಳು ಸ್ಪಷ್ಟವಾಗಿಲ್ಲ. ಸಾಹಿತ್ಯವಿಲ್ಲ. ನಾನು ಅರಬಿಯ ಸುಂದರವಾದ ಆಕರ್ಷಕ ಸಾಹಿತ್ಯ ಪೂರ್ಣ ಗ್ರಂಥಗಳನ್ನು ಬರೆದಿದ್ದೆ, ಈ ಕಿಡಿಗೇಡಿ ಆ ಪ್ರತಾಪವನ್ನು ಆರಿಸಬಯಸಿದನು. ಜನರಲ್ಲಿ ಒಡಕುಂಟು ಮಾಡಬಯಸಿದನು. ಮತ್ತವನು ಸಾಹಿತ್ಯ ಶ್ರೀಮಂತಿಕೆಯನ್ನು ಮೆರೆದನು. ಜನರಿಗೆ ಈ ರೀತಿ ಸತ್ಯವನ್ನು ಮರೆಮಾಚಿ ಮೋಸಗೊಳಿಸಿದನು. ತನ್ನ ಟೊಳ್ಳು ಮಾತುಗಳಿಂದ ಹುಡುಗರಿಗೆ ಮೋಜು ಮಾಡುವಂತೆ ಮತ್ತು ಅಪ್ಪಟ ಸುಳ್ಳನ್ನು ಅರುಹಿದನು. ನಾವು ಹೊಸದಾದ ಮುತ್ತುಗಳನ್ನು ಕೊಟ್ಟೆವು. ಆದರೆ ಅವನಿಗೆ ಹಿಡಿಸಲಿಲ್ಲ, ನಾವು ಖರ್ಜೂರದ ಮರವನ್ನು ಕೊಟ್ಟೆವು. ಆದರೆ ಅವನು ಮುಟ್ಟಲಿಲ್ಲ. ಬದಲು ಅಹಂಕಾರಿಗಳಂತೆ ಜಿಪುಣತನ ಮತ್ತು ಧಿಕ್ಕಾರಿಯಾಗಿ ಮೆರೆದು ಹೇಳಿದನು ಈ ವ್ಯಕ್ತಿಯ ಗ್ರಂಥಗಳು ತಪ್ಪುಗಳಿಂದ ತುಂಬಿವೆ. ಶುದ್ಧತೆ ಸಾಹಿತ್ಯ ನುಡಿಗಟ್ಟುಗಳಿಂದ ಖಾಲಿ ಇವೆ, ಸ್ವಚ್ಛ ನೀರಿನಂತಿಲ್ಲ. ಅಂದಹಾಗೆ ಅವರು ಸ್ಥಿರವಾದ ನಿಲುವು ತಾಳಲಿಲ್ಲ. ಬದಲು ಸತ್ಯವನ್ನು ಅಡಗಿಸಿದರು. ಜನರನ್ನು ನನ್ನಿಂದ ತಡೆದು ಮೋಸಗೊಳಿಸಿದರು. ನಂತರ ನನ್ನ ಗ್ರಂಥದ ಮೇಲೆ ಮೋಹಿತನಾದನು. ಅವನಿಗೆ ಚನ್ನಾಗಿ ಗೊತ್ತಿತ್ತು. ಸತ್ಯಸಾಕ್ಷಿ ತಪ್ಪಿಸುವುದು ಪಾಪವಾಗಿದೆ ಎಂದು ಮತ್ತು ಸತ್ಯವಂತನನ್ನು ದಿಕ್ಕರಿಸುವುದು ಪಾಪವಾಗಿದೆ ಎಂದು.

ಆದರೆ ಅವರು ಪರಲೋಕದ ಚಿಂತೆಯನ್ನು ಬಿಟ್ಟು ಇಹಲೋಕದ ಮೇಲೆ ಮೋಹಿತರಾದರು. ದುಷ್ಪ್ರೇರಕ ಆತ್ಮವನ್ನು ಧರ್ಮದ ಮೇಲೆ ಆಧ್ಯತೆಯಾಗಿಟ್ಟುಕೊಂಡರು. ಹಾಗಾಗಿ ಅಲ್ಲಾಹನು ಅವನನ್ನು ಅವಮಾನಿಸಲು ತೀರ್ಮಾನಿಸಿದನು. ಅಂದಹಾಗೆ ಅವರು ದಿಕ್ಕಾರಿಗಳಲ್ಲಿ ಸೇರಿದರು. ಅಂದಹಾಗೆ ಅವರಲ್ಲಿ ಇಲ್ಲಸಲ್ಲದ ಮಾತುಗಳ ಹೊರತು, ನಾಲಿಗೆ ಹರಿದು ಬಿಡುವ ಹೊರತು ಮತ್ತ್ಯಾವ ಕಲೆಯೂ ಇಲ್ಲ. ಸುಳ್ಳನ್ನು ಸುಂದರಗೊಳಿಸುವರಲ್ಲಿ ಸೇರಿದವರಾಗಿದ್ದಾರೆ. ಪ್ರಕಾಶವನ್ನು ಆರಿಸ ಬಯಸುತ್ತಾರೆ. ಜನರನ್ನು ದುಷ್ಕರ್ಮ ಹಾಗೂ ಅವಿಶ್ವಾಸಕ್ಕೆ ತಳ್ಳಬಯಸುತ್ತಾನೆ. ಸತ್ಯದಿಂದ ವಿಮುಖ ಗೊಳಿಸಬಯಸುತ್ತಾನೆ. ಅಲ್ಲಾಹನು ಅವನನ್ನು ಕಾಪಾಡಲಿ. ಅವನಿಗೆ ಸಾಹಿತ್ಯ ಏನೆಂಬುದೇ ತಿಳಿದಿಲ್ಲ. ಅದರ ಶಾಖೆಗಳಾವುವು. ಹೇಗೆಲ್ಲ ವಿವರಿಸಬೇಕು. ಅದರ ಹಕ್ಕೇನು ಜ್ಞಾನದ ಯಾವ ಹಂತವು ಸಹ ತಿಳಿದಿಲ್ಲ. ಕೇವಲ ಪಶು ಮತ್ತು ವಂಚಕರ ರೀತಿಯಲ್ಲಿದ್ದಾನೆ. ಅಂದಹಾಗೆ ಅವನು ನಿಜವಾಗಿಯೂ ಜನರಿಗೆ ಸುಳ್ಳಿನಿಂದ ಮುಕ್ತಿ ಕೊಡಬಯಸುವವನಾದರೆ ನಮಗೆ ತನ್ನ ವಾಕ್ಚಾತುರ್ಯ ಮತ್ತು ಇತರ ಅರಬ್ ವಿದ್ವಾಂಸರ ವಾಕ್ಚಾತುರ್ಯಗಳನ್ನು ಮುಂದಿರಿಸಲಿ. ನನ್ನ ಮತ್ತು ತನ್ನ ಹೆಸರು ಗೌಪ್ಯವಾಗಿಡಲಿ, ಮತ್ತೆ ಅವನು ಹೇಳಲಿ, ನನ್ನ ಗ್ರಂಥ ಯಾವುದು ಮತ್ತು ಅವನ ಗ್ರಂಥ ಯಾವುದು ಅವನು ಸಂತೃಸುವಂತಾದರೆ ಹಾಗೆ ಮಾಡಿ. ನೋಡಲಿ, ಅಂದ ಹಾಗೆ ಅವನು ತನ್ನ ನುಡಿ ಮತ್ತು ಅವನ ನುಡಿಗಳನ್ನು ಗುರುತಿಸಿಕೊಂಡರೆ, ಬೀಜ ಮತ್ತು ಸಿಪ್ಪೆಯಂತೆ ನೈಜಸ್ಥಿತಿ ಬಯಲಾಗುವುದು. ಹಾಗಾದಲ್ಲಿ ನಾವು ಅವನಿಗೆ ಐವತ್ತು ರೂಪಾಯಿಗಳನ್ನು ಬಹುಮಾನ ರೂಪದಲ್ಲಿ ನೀಡುವೆವು. ಮತ್ತಿದು ಅವನ ಪವಾಡ ಎಂದು ಭಾವಿಸಿಕೊಳ್ಳುವೆವು. ಮತ್ತೆ ಅವನನ್ನು ನಾವು ವಿದ್ವಾಂಸರಲ್ಲಿ ಪಂಡಿತರಲ್ಲಿ ಗಣನೆಗೆ ತೆಗೆದುಕೊಳ್ಳುವೆವು. ಮತ್ತು ಸ್ವೀಕರಿಸುವೆವು. ಅದನ್ನು ಆಕ್ಷೇಪಡುವುದರಲ್ಲಿ ಸತ್ಯವಂತನಾಗಿದ್ದ ಎಂದು. ಅಂದಹಾಗೆ ಅವನು ಈ ರೀತಿಯ ಪರೀಕ್ಷೆಗೆ ಒಳಪಡಿಸಲಿ. ಈ ಮೈದಾನದಲ್ಲಿ ಸಜ್ಜುಗೊಳ್ಳಲಿ, ಸಜ್ಜುಗೊಂಡು ಸಜ್ಜನರಂತೆ ನಮಗೆ ತಿಳಿಸಲಿ. ಈ ಸಾಮಾಚಾರವನ್ನು ಸಮಾಚಾರ ಪತ್ರಿಕೆಗಳಲ್ಲಿ ದೃಢತೆಯಿಂದ ಪ್ರಕಟಿಸಲಿ. ಅವನು ಇದಕ್ಕೆ ಸಜ್ಜಾದ ನಂತರ ಕೆಲ ಪುಟಗಳನ್ನು ಪರೀಕ್ಷಾ ರೂಪದಲ್ಲಿ ಅವನಿಗೆ ಕೊಡುವೆನು. ಏಕೆಂದರೆ ಅಲ್ಲಾಹನು ನನ್ನ ಮತ್ತು ಅವನ ಮಧ್ಯೆ ತೀರ್ಪು ನೀಡುವಂತಾಗಲಿ. ಅವನು ತೀರ್ಪು ನೀಡುವವರಲ್ಲಿ ಅತ್ಯುತ್ತಮ ತೀರ್ಪು ನೀಡುವವನಾಗಿದ್ದಾನೆ. ನಾನು ಹಲವು ವರ್ಷಗಳಿಂದ ನೋಡುತ್ತಿದ್ದೇನೆ. ಈ ವ್ಯಕ್ತಿ ಅಸಭ್ಯತೆಯಿಂದ ಹೊರಬರುತ್ತಿಲ್ಲ. ಮತ್ತು ಅಲ್ಲಾಹನಿಂದ

ಭಯಪಡುತ್ತಿಲ್ಲ. ಆದುದರಿಂದ ಅವನ ಕುಟಿಲತೆಯು ನನಗೆ ಪರೀಕ್ಷೆ ತೆಗೆದುಕೊಳ್ಳಲು ವಿವಶನನ್ನಾಗಿ ಮಾಡಿದೆ. ಆದುದರಿಂದ ಮೈದಾನದಲ್ಲಿ ಬಂದು ತಾನು ವಾದಿಸಿದ್ದನ್ನು ಸಾಬೀತು ಮಾಡಿ ತೋರಿಸಲಿ. ನನ್ನ ನುಡಿಗಳನ್ನು ಮತ್ತು ತನ್ನ ನುಡಿಗಳನ್ನು ಪ್ರತ್ಯೇಕಗೊಳಿಸಿ ತೋರಿಸಲಿ. ಆಗ ನಾವು ಅವನಿಗೆ ಬಹುಮಾನ ಕೊಡುವೆವು. ಅದು ಅವನು ಆಳಿಸಿಯಾಗಿದೆ. ಅದಾಗ್ಯೂ ಪಲಾಯನಗೈದರೆ ನಮ್ಮ ಎದುರು ಬರಲಿಲ್ಲ ಎಂದಾದರೆ ತನ್ನ ಬಿಲದಲ್ಲಿಯೇ ನುಸುಳಿಕೊಂಡ ಹಾಗೆ. ಅಡಗಿ ಹೋದ ಹಾಗೆ ಮತ್ತು ಸುಳ್ಳನ್ನು ತ್ಯಜಿಸಲಿಲ್ಲ ಎಂದಾಗುತ್ತದೆ. ಅಂದಹಾಗೆ ಅಂತಹನಿಗೆ ನರಕವಿದೆ. ಅದರಲ್ಲಿ ಅವನು ಜೀವಿಸಲು ಆಗುವುದಿಲ್ಲ. ಮರಣವು ಸಂಭವಿಸುವುದಿಲ್ಲ.

ಅಲ್‌ಮುಅ್‌ಲಿನು: ಮಿರ್ಝಾ ಗುಲಾಂ ಅಹ್ಮದ್ ಖಾದಿಯಾನಿ 26 ಮೇ 1897. (ಹುಜ್ಜತುಲ್ಲಾಹ್, ರೂಹಾನಿ ಖಝಾಈನ್, ಸಂಪುಟ–12, ಪುಟ–141–147)

ಮುಹಮ್ಮದ್ ಹುಸೇನ್ ಬಟೌಲ್ವಿ ಎದುರಿಸಲು ಬರಲಿಲ್ಲ. ಈ ಹಿಂದೆಯೂ ಎಂದೂ ಅವರಿಗೆ ಮುಂಬರಲು ಧೈರ್ಯ ತೋರಲಿಲ್ಲ. ಹೇಗೆ ಸಾಧ್ಯವಾಗುವುದು ಅವರು ಕೇವಲ ಉರ್ದು ಜ್ಞಾನ ಹೊಂದಿದ್ದರೇ ಹೊರತು ಅರಬಿಯದಲ್ಲ. ಮುಂದಿನ ಸಂಚಿಕೆಯಲ್ಲಿ ನಾವು ಇನ್‌ಶಾಅಲ್ಲಾಹ್ ಸಯ್ಯದ್‌ನಾ ಮಸೀಹ್ ಮೌಊದ್(ರ) ರವರ ಇನ್ನೊಂದು ಬಹುಮಾನದ ಪಂಥಾಹ್ವಾನ ಓದುಗರ ಮುಂದೆ ಪ್ರಸ್ತುತಪಡಿಸುವೆವು.

**(ಮನ್ಸೂರ್ ಅಹ್ಮದ್ ಮಸ್ರೂರ್)**

*(ಪುಟ ಸಂಖ್ಯೆ* **01ರ** *ಉಳಿದ ಭಾಗ)*

ಪಾರಾಯಣದ ನಂತರ ಸಭಾಧ್ಯಕ್ಷರು ಉದ್ಘಾಟನಾ ಭಾಷಣ ಮಾಡಿದರು. ಅವರು ಹೇಳಿದರು. ಹಝ್ರತ್ ಮಸೀಹ್ ಮೌಊದ್(ಅ) 1891 ರಂದು ಅಲ್ಲಾಹನ ಆಜ್ಞೆ ಮೇರೆಗೆ ಈ ಜಲ್ಸದ ಬುನಾದಿ ಹಾಕಿದ್ದರು. ಈ ಜಲ್ಸ ಲೌಕಿಕ ಜಾತ್ರೆಯಲ್ಲ. ಬದಲು ಅದರ ಸ್ಥಾಪನೆಯ ಉದ್ದೇಶ ವಿಶ್ವಾಸ ಹಾಗೂ ಆಧ್ಯಾತ್ಮಿಕತೆಯಲ್ಲಿ ಪ್ರಗತಿ ಹೊಂದುವುದಾಗಿದೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳಿದಂತೆ; ಎಲ್ಲಾ ನಿಷ್ಠಾವಂತರೂ ಮತ್ತು ಬೈಅತ್ ಮಾಡಿ ಈ ಸಂಘಟನೆಗೆ ಸೇರಿದವರು ನೆನಪಿಡಲಿ. ಬೈಅತ್ತಿನ ಉದ್ದೇಶ ಲೌಕಿಕ ಪ್ರೇಮವನ್ನು ಬಿಡುವುದಾಗಿದೆ ಮತ್ತು ತನ್ನ ಒಡೆಯನಾದ ಅಲ್ಲಾಹನ ಹಾಗೂ ರಸೂಲುಲ್ಲಾಹ್(ಸ) ರವರ ಪ್ರೀತಿ ಹೃದಯದಲ್ಲಿ ಅಂಕುರಿಸಬೇಕಾಗಿದೆ. ಮತ್ತು ಹಝ್ರತ್ ಮಸೀಹ್ ಮೌಊದ್(ಅ) ನುಡಿದರು. ಈ ಜಲ್ಸದಿಂದ ಒಂದು ತಾತ್ಕಾಲಿಕ ರೀತಿಯ ಪ್ರಯೋಜನ ಹೀಗೂ ಪಡೆಯಲು ಸಾಧ್ಯವಾಗುತ್ತದೆ. ಪ್ರತಿ ಹೊಸ ವರ್ಷದಲ್ಲಿ ಎಷ್ಟೆಲ್ಲ ಹೊಸ ಸಹೋದರರು ಈ ಜಮಾಅತಿನಲ್ಲಿ ಸೇರುವರು. ಅವರು ಈ ನಿಗದಿತ ತಾರೀಖುಗಳಲ್ಲಿ ಹಾಜರಿ ಕೊಟ್ಟು ತಮ್ಮ ಹಿಂದಿನ ಸಹೋದರ ಮುಖ ಕಾಣುತ್ತಾರೆ. ಆದರಣೀಯ ಸಭಾಧ್ಯಕ್ಷರು ನುಡಿದರು. ಈ ಇಸ್ಲಾಮಿ ಭಾತ್ರತ್ವವೇ ಆಗಿದೆ. ಅದು ಒಂದು ಸಮುದಾಯವಾಗಿ ಮಾಡಲು ಅತ್ಯಗತ್ಯವಾಗಿದೆ. ಹುಝೂರೆ ಅನ್ವರ್ ಜಲ್ಸ ಸಾಲಾನ ಯು.ಕೆ ಯಲ್ಲಿ ಭಾಗವಹಿಸಿದವರ ಕುರಿತು ಕೆಲ ವಿಶ್ವಾಸವರ್ಧಕ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಒಂದು ಅನಿಸಿಕೆ ಸಭಾಧ್ಯಕ್ಷರು ಗನಿಕನಾಕರಿಯ ಲಿಜ್ಞಾಜೌ ಮುಹಮ್ಮದ್ ವಕೀಲ್ ಅಥವಾ ತಾರಾ ಸಾಹಿಬ್ ಅವರದ್ದು ಉಲ್ಲೇಖಿಸಿದರು. ಅವರು ಧಾರ್ಮಿಕ ಕಾರ್ಯಗಳ ಇನ್ಸ್‌ಪೆಕ್ಟರ್ ಜನರಲ್ ಆಗಿದ್ದರು. ಅವರು ಹೇಳುತ್ತಾರೆ. ಜಲ್ಸದ ಮೂರು ದಿನಗಳು ನನ್ನನ್ನು ಪ್ರಭಾವಿತಗೊಳಿಸಿದ ಅಂಶವೇನೆಂದರೆ ಅಹ್ಮದಿ ಬಾಂಧವರ ಪರಿಶುದ್ಧ ಇಸ್ಲಾಮಿ ಶಿಕ್ಷಣಗಳನ್ವಯ ಮಾಡಿದ ಕಾರ್ಯಗಳು. ಎಲ್ಲ ಅಹ್ಮದಿಗಳು ಇಲ್ಲಿ ಒಟ್ಟುಗೂಡಿದರು. ಇವರೆಲ್ಲರೂ ಇಸ್ಲಾಮಿ ಭಾತೃತ್ವದ ಅತ್ಯುತ್ತಮ ಮಾದರಿಯಾಗಿದ್ದಾರೆ. ಒಂದೇ ತಾಯಿಯ ಮಕ್ಕಳಂತೆ ಒಂದೇ ಮನೆಯಿಂದ ಬರುವ ರೀತಿಯಲ್ಲಿ ಆಗಮಿಸಿದ್ದಾರೆ. ಅಸಾಮಾನ್ಯ ಶಿಸ್ತು, ತಾಳ್ಮೆ, ಸ್ವಯಂ ಸೇವಕರು ಮುಗುಳ್ನಗು, ಜಲ್ಸ ಸ್ಥಳದಲ್ಲಿ ಯಾರನ್ನು ತೊಂದರೆಗೆ ಎಡೆಮಾಡದೇ ಬರುವುದು ಹೋಗುವುದು, ಇದೆಲ್ಲ ನೋಡಿ ಅನಿಸುತಿತ್ತು. ಇಂದು ಯಾವುದಾದರೂ ಒಂದು ಜಮಾಅತ್ ಇಸ್ಲಾಮ್ ಧರ್ಮವನ್ನು ಪ್ರತಿನಿಧಿಸುತ್ತಿದೆ ಎಂದರೆ ಅದು ಜಮಾಅತ್ ಅಹ್ಮದಿಯಾ ಮಾತ್ರವಾಗಿದೆ. ಹೇಳುತ್ತಾರೆ. ನನಗೆ ಇತರ ಬೇರೆ ಇಸ್ಲಾಮಿ ರಾಷ್ಟ್ರಗಳಲ್ಲದೇ ಸೌದಿ ಅರೇಬಿಯಾನಲ್ಲಿಯೂ ಸಹ ಹಲವು ಸಲ ಹೋಗಿ ಬರುವ ಅವಕಾಶಗಳು ದೊರೆತಿವೆ. ಆದರೆ ಖಡಾಖಂಡಿತವಾಗಿ ಹೇಳುತ್ತಿದ್ದೇನೆ. ನನಗೆ ಇಸ್ಲಾಮಿ ಸಹೋದರತ್ವದಿಂದ ಒಳಗೂಡಿದ ವಾತಾವರಣ ಎಲ್ಲೂ ಒದಗಿ ಬಂದಿಲ್ಲ. ನಾನು ಅದನ್ನು ಹೇಳಲು ಸ್ವಲ್ಪವೂ ಸಂಕೋಚಪಡುವುದಿಲ್ಲ. ಸುಮಾರು ನಲವತ್ತು ಸಾವಿರ ಜನರನ್ನು ಒಂದೇ ಜಾಗದಲ್ಲಿ ಒಟ್ಟುಗೂಡಿಸುವುದು ಮತ್ತು ನಿರಂತರ ಇಸ್ಲಾಮಿ ಶಿಕ್ಷಣವನ್ನು ಪ್ರಚಾರ ಮಾಡುವುದು, ಯಾವುದೇ ಜಗಳ ಗಲಾಟೆಯಿಲ್ಲದೇ, ಅಲ್ಲಾಹ್ ಮತ್ತು ಅವನ ಪ್ರವಾದಿಯ ಪ್ರೀತಿಯಲ್ಲಿ ದಿನಗಳನ್ನು ಕಳೆಯುವುದು ಇದು ಅಹ್ಮದಿಯಾ ಜಮಾಅತಿನ ಏಕಮಾತ್ರ ವೈಶಿಷ್ಟ್ಯವಾಗಿದೆ ಕೊನೆಗೆ ಸಭಾಧ್ಯಕ್ಷರು ಜಲ್ಸ ಸಾಲಾನಾದಲ್ಲಿ ಭಾಗವಹಿಸಿದವರಿಗಾಗಿ ಕಾಲಘಟ್ಟದ ಇಮಾಮರಾದ ಹಝ್ರತ್ ಮಸೀಹ್ ಮೌಊದ್(ಅ) ರವರು ಮಾಡಿದ ಪ್ರಾರ್ಥನೆಗಳನ್ನು ಪ್ರಸ್ತುತಪಡಿಸಿ ತನ್ನ ಭಾಷಣ ಮುಗಿಸಿದರು. ಅನಂತರ ಮುಕರ್ರಮ್ ಮುರ್‌ಶಿದ್ ಅಹ್ಮದ್ ಡಾರ್ ತನ್ನ ಸಂಗಡಿಗರೊಂದಿಗೆ ಒಂದು ನಝ್ಮ್ ಪ್ರಸ್ತುತಪಡಿಸಿದರು.

ಇಂದಿನ ಜಲ್ಸ ಸಾಲಾನಾದ ಮೊದಲ ಅಧಿವೇಶನದ ಮೊದಲ ಭಾಷಣ ಮುಕರ್ರಮ್ ಮೌಲಾನ ಮುಹಮ್ಮದ್ ಇನ್‌ಆಮ್ ಗೌರಿ ಸಾಹಿಬ್ ನಾಝಿರ್ ಆಲಾ ಹಾಗೂ ಅಮೀರ್ ಮುಖಾಮಿ ಖಾದಿಯಾನ್, ಮಾಡಿದರು. ಅವರ ಭಾಷಣದ ವಿಷಯ, "ಆಡಳಿತ ಮುಖಂಡರುಗಳಿಗೆ ಹಝ್ರತ್ ರಸೂಲುಲ್ಲಾಹ್(ಸ) ರವರ ಜೀವನ ಸಂಹಿತೆ ಮಾದರಿ" ಎಂದಾಗಿತ್ತು.

ಈ ಅಧಿವೇಶನದ ಎರಡನೇ ಭಾಷಣ "ಸಹಾಬರ ಜೀವನ ಚರಿತ್ರೆ ಇಮಾಮ್ ಹಸನ್(ರ), ಹಝ್ರತ್ ಮಿಯಾ ಬಶೀರ್ ಅಹ್ಮದ್ ಸಾಹಿಬ್(ರ) ವಿಷಯದ ಮೇಲೆ ಮುಕರ್ರಮ್ ಮುಹಮ್ಮದ್ ಶರೀಫ್ ಕೌಸರ್ ಸಾಹಿಬ್ ಮಾಡಿದರು. ಈ ಭಾಷಣ ಡಾ| ಅಬ್ದುಲ್ ಖಾಲಿಖ್ ಸಾಹಿಬ್ ಸದರ್ ಮಜ್ಲಿಸ್ ಅನ್ಸಾರುಲ್ಲಾಹ್ ಪಾಕಿಸ್ತಾನದವರಾಗಿದ್ದರು. ಅದನ್ನು ಮುಕರ್ರಮ್ ಮುಹಮ್ಮದ್ ಶರೀಫ್ ಕೌಸರ್ ಸಾಹಿಬ್ ಜಾಮಿಯಾ ಅಹ್ಮದಿಯಾ ಖಾದಿಯಾನ್ ಓದಿದರು. ಈ ಭಾಷಣದ ನಂತರ 12.00 ಗಂಟೆಗೆ ಉದ್ಘಾಟನಾ ಅಧಿವೇಶನ ಮುಕ್ತಾಯವಾಯಿತು.

**ನಮಾಝ್ ಜುಮುಅ**

ಜಲ್ಸ ಸ್ಥಳದಲ್ಲಿ ಜುಮುಅ ನಮಾಝ್‌ಗೋಸ್ಕರ ಮೊದಲ ಅಝಾನ್ 1 ಗಂಟೆಗೆ ಕೊಡಲಾಯಿತು. ಮತ್ತು 1.30 ಕ್ಕೆ ಖುತುಬಾ ಜುಮುಅ ಪ್ರಾರಂಭವಾಯಿತು. ನಮಾಝ್ ಜುಮುಅ ಹಾಫಿಝ್ ಮಖ್ದೂಮ್ ಶರೀಫ್ ಸಾಹಿಬ್ ನಾಯಿಬ್ ನಾಝಿರ್ ಆಲಾ ಇರ್ವಹಿಸಿಕೊಟ್ಟರು ಕುತುಬಾ ಜುಮುಅ ದಲ್ಲಿ ಹುಝೂರ್ ಅನ್ವರ್ (ಅಬಿಅ) ರವರ ಖುತುಬ ಜುಮಾಅದ ಸಾರಾಂಶ ಹೇಳಿಕೊಟ್ಟರು.

**ಮೊದಲ ದಿನ– ಎರಡನೇ ಅಧಿವೇಶನ**

ಮೊದಲ ದಿನದ ಎರಡನೇ ಅಧಿವೇಶನದ ಕಾರ್ಯಕ್ರಮ ಮಧ್ಯಾಹ್ನ ಸರಿಯಾಗಿ 2.00 ಗಂಟೆಗೆ ಪ್ರಾರಂಭವಾಯಿತು. ಈ ಅಧಿವೇಶನದ ಅಧ್ಯಕ್ಷತೆ ಮುಕರ್ರಮ್ ಜಲಾಲುದ್ದೀನ್ ಸಯ್ಯದ್ ಸಾಹಿಬ್ ಸದರ್ ಮಜ್ಲಿಸ್ ತಹಿರೀಕ್ ಜಹೀದ್ ಖಾದಿಯಾನ್ ವಹಿಸಿದ್ದರು. ಮುಕರ್ರಮ್ ಮುರ್‌ಶಿದ್ ಅಹ್ಮದ್ ಸಾಹಿಬ್ ಡಾರ್, ಗುರುಗಳು ಜಾಮಿಯಾ ಅಹ್ಮದಿಯಾ ಖಾದಿಯಾನ್ ಸೂರಃ ಅಲ್–ಅಅರಾಫಿನ 55–59 ವಚನಗಳನ್ನು ಪಾರಾಯಣ ಮಾಡಿದರು. ಮತ್ತು ಅದರ ಅನುವಾದ ಮು ಮೌಲ್ವಿ ಸಯ್ಯದ್ ಕಲೀಲುದ್ದೀನ್ ಅಹ್ಮದ್ ಸಾಹಿಬ್ ಕೇಂದ್ರೀಯ ಖಾಝಿ ದಾರುಲ್ –ಖಝಾ ಖಾದಿಯಾನ್ ತಫ್ಸೀರ್ ಸಗ್ಹೀರ್‌ರಿಂದ ಪ್ರಸ್ತುತಪಡಿಸಿದರು. ನಂತರ ಮುಕರ್ರಮ್ ನಸ್ರುಮ್ ಮಿನಲ್ಲಾಹಿ ಸಾಹಿಬರ್ ನಾಯಿಬ್ ನಾಝಿರ್ ಉಮುರೇ ಆಮ ಖಾದಿಯಾನ್ ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊರ್(ರ) ರವರ ಕವನ ಸಂಗ್ರಹದಿಂದ

**ನೌನಿಹಾಲಾನೆ ಜಮಾಅತ್ ಮುಜೆಕುಛ್ ಕೆಹ್ನಾ ಹೈ**
**ಹರ್ ಹೈ ಎ ಶರ್ತ್ ಝಾಯೆ ಮೇ ರಾ ಪೈಗಾಮ್ ನ ಹೋ**

ದಿಂದ ಕೆಲ ಸಾಲುಗಳನ್ನು ಮಧುರಕಂಠದಿಂದ ಪ್ರಸ್ತುತಪಡಿಸಿದರು.

ಈ ಅಧಿವೇಶನದಲ್ಲಿ ಉಲಮಾಅಗಳ ಎರಡು ಭಾಷಣಗಳಾದವು. ಮೊದಲ ಭಾಷಣ ಮುಕರ್ರಮ್ ಮೌಲಾನಾ ಮುಹಮ್ಮದ್ ಕರೀಮುದ್ದೀನ್ ಸಾಹಿಬ್ ಶಾಹಿದ್ ಸದರ್ ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್ ಮಾಡಿದರು. ಅವರ ಭಾಷಣದ ವಿಷಯ "ದೇವಾಸ್ತಿತ್ವ ಪ್ರಾರ್ಥನೆಗಳ ಸ್ವೀಕಾರ ಪ್ರಕಾಸದಲ್ಲಿ ಎಂದಾಗಿತ್ತು.

ಎರಡನೇ ಭಾಷಣ ಮುಕರ್ರಮ್ ಕೆ ತಾರಿಖ್ ಅಹ್ಮದ್ ಸಾಹಿಬ್ ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ ಮಾಡಿದರು. "ಹೊಸ ಪೀಳಿಗೆಯ ತರಬೇತಿ ಮತ್ತು ಖಿಲಾಫತ್ ಅಹ್ಮದಿಯಾ ಅವರ ಭಾಷಣದ ವಿಷಯವಾಗಿತ್ತು. ಅನಂತರ ಸಭಾಧ್ಯಕ್ಷರ ಅನುಮತಿಯಿಂದ ಮೊದಲ ದಿನದ ಎರಡನೆಯ ಅಧಿವೇಶನ ಮುಕ್ತಾಯವಾಯಿತು.

**ದಿನಾಂಕ: 25 ಡಿಸೆಂಬರ್ 2021 ಜಲ್ಸದ ಎರಡನೆಯ ದಿವಸದ ಮೊದಲ ಅಧಿವೇಶನ**

ಎರಡನೆಯ ದಿವಸ ಮೊದಲ ಅಧಿವೇಶನದ ಕಾರ್ಯಕ್ರಮ ಸರಿಯಾಗಿ 10.00 ಗಂಟೆಗೆ ಪ್ರಾರಂಭವಾಯಿತು. ಈ ಅಧಿವೇಶನದ ಅಧ್ಯಕ್ಷತೆ ಮುಕರ್ರಮ್ ಶೀರಾಝ್ ಅಹ್ಮದ್ ಸಾಹಿಬ್ ನಾಯಿಬ್ ನಾಝೀರ್ ಆಲಾ

ಭಾರತ್ ವಹಿಸಿದ್ದರು. ಪವಿತ್ರ ಖುರ್‌ಆನ್ ಪಾರಾಯಣ ಹಾಫಿಝ್ ಫಾರೂಖ್ ಆಝಿಮ್ ಮಾಡಿದರು ಅವರು ಸೂರಃ ಅಲ್‌ಬಖರದ 262 ರಿಂದ 265 ರವರೆಗಿನ ವಚನಗಳನ್ನು ಪಾರಾಯಣ ಮಾಡಿದರು ಅದರ ಅನುವಾದ ಮುಕರ್ರಮ್ ಮುಹಮ್ಮದ್ ನಸರ್ ಗೌರಿ ಸಾಹಿಬ್ ನಾಯಿಬ್ ಇನ್‌ಚಾರ್ಜ್ ನೂರುಲ್ ಇಸ್ಲಾಮ್ ಹಝ್ರತ್ ಮುಸ್ಲಿಹ್ ಮೌಊದ್(ರ) ರವರ ತಫ್ಸೀರ್ ಸಗೀರ್‌ರಿಂದ ಪ್ರಸ್ತುತಪಡಿಸಿದರು. ಅನಂತರ ನಝ್ಮ್ (ಕವನ) ಮುಕರ್ರಮ್ ಅಬ್ದುಲ್ ವಾಸೆಹ್ ಮಲ್ಕಾನ ಸಾಹಿಬ್ ಮಧುರ ಸ್ವರದಿಂದ ಪ್ರಸ್ತುತಪಡಿಸಿದರು. ಅವರು ಸಯ್ಯದ್‌ನಾ ಹಝುರತ್ ಮಸೀಹ್ ಮೌಊದ್ (ಅ) ರವರ ಪರಿಶುದ್ಧ ಕವನ ಸಂಗ್ರಹದಿಂದ ನೂರೆ ಪುರ್‌ಖಾನ್ ಹೈ ಜೋ ಸಬ್ ನೂರೋ ಸೇ ಅಜ್ಲಾ ನಿಕ್ಲಾ" ಯಿಂದ ಕೆಲ ಸಾಲುಗಳನ್ನು ಅತ್ಯಂತ ಮಧುರ ಕಂಠದಿಂದ ಪಠಿಸಿದರು. ಅನಂತರ ಈ ಅಧಿವೇಶನದಲ್ಲಿ ಮೂರು ಭಾಷಣಗಳಾದವು.

ಮೊದಲ ಭಾಷಣ ಮುಕರ್ರಮ್ ಅತಾಇಲಾಹಿ ಅಹ್ಸನ್ ಗೌರಿ ಸಾಹಿಬ್ ನಾಝಿರ್ ತಾಮೀರಾತ್ ಮಾಡಿದರು ಅವರ ಭಾಷಣದ ವಿಷಯ ಹಝ್ರತ್ ಮಸೀಹ್ ಮೌಊದ್(ಅ) ರವರ ಜೀವನ ಚರಿತ್ರೆ ಖುರ್‌ಆನ್ ನೊಂದಿಗಿರುವ ಅವರ ಪ್ರೇಮ ಖುರ್‌ಆನ್‌ನ ಸೇವೆಯ ಪ್ರಕಾಶದಲ್ಲಿ ಆಗಿತ್ತು.

ಈ ಅಧಿವೇಶನದ ಎರಡನೇ ಭಾಷಣ ಉ. ರಫೀಖ್ ಅಹ್ಮದ್ ಬೇಗ್ ಸಾಹಿಬ್ ನಾಝೀರ್ ಬೈತುಲ್ ಮಾಲ್ ಆಮದ್ ಮಾಡಿದರು. ಅವರ ಭಾಷಣದ ಶೀರ್ಷಿಕೆ "ಸಾಂಪತ್ತಿಕ ತ್ಯಾಗದ ಮಹತ್ವ ಹಝ್ರತ್ ರಸೂಲುಲ್ಲಾಹ್(ಸ) ರವರ ಮತ್ತು ಹಝ್ರತ್ ಮಸೀಹ್ ಮೌಊದ್(ಅ) ರವರ ಸಹಾಬರ ಜೀವನ ಚರಿತ್ರೆಯ ಪ್ರಕಾಶದಲ್ಲಿ ಆಗಿತ್ತು.

ಈ ಅಧಿವೇಶನದ ಮೂರನೇ ಭಾಷಣ ಮುಕರ್ರಮ್ ಮೌಲಾನ ಮುಹಮ್ಮದ್ ಹಮೀದ್ ಕೌಸರ್ ಸಾಹಿಬ್ ನಾಝೀರ್ ದಾವತ್ ಇಲಲ್ಲಾಹ್ ಉತ್ತರ ಭಾರತ, ಮಾಡಿದರು. ಅವರ ಭಾಷಣದ ವಿಷಯ. ಸಯ್ಯದ್‌ನಾ ಹಝ್ರತ್ ಖಲೀಫತುಲ್ ಮಸೀಹ್(ಅಬಅ) ರವರ ಪ್ರಾರ್ಥನೆ ಸ್ವೀಕಾರಗಳ ವಿಶ್ವಾಸವರ್ಧಕ ಘಟನೆಗಳು" ಆಗಿತ್ತು.

**ಎರಡನೆಯ ದಿನ ಎರಡನೆ ಅಧಿವೇಶನ**

ಎರಡನೇ ದಿನದ ಎರಡನೆ ಅಧಿವೇಶನದ ಕಾರ್ಯಕ್ರಮಗಳ ಪ್ರಾರಂಭ ಮುಕರ್ರಮ್ ಸಯ್ಯದ್ ತನ್ವೀರ್ ಅಹ್ಮದ್ ಸಾಹಿಬ್ ಸದರ್ ಮಜ್ಲಿಸ್ ವಖ್ಫೆ ಜದೀದ್ ಅಧ್ಯಕ್ಷತೆಯಲ್ಲಿ ಜರುಗಿತು. ಖುರ್‌ಆನ್ ಪಾರಾಯಣವನ್ನು ಜಾಮಿಯಾ ಅಹ್ಮದಿಯಾ ಖಾದಿಯಾನ್‌ನ ವಿದ್ಯಾರ್ಥಿ ಮುಕರ್ರಮ್ ಉಮೈರ್ ಅಹ್ಮದ್ ಅಬ್ಬಾಸ್ ಸಾಹಿಬ್ ಮಾಡಿದರು. ಅವರು ಸೂರಃ ಅಸ್ಸಫ್‌ನ 7 ರಿಂದ 10 ವಚನಗಳನ್ನು ಪಾರಾಯಣ ಮಾಡಿದರು. ಅದರ ಅನುವಾದ ಮುಕರ್ರಮ್ ಖಮರುಲ್ ಹಖ್ ಖಾನ್ ಸಾಹಿಬ್ ಪ್ರಸ್ತುತಪಡಿಸಿದರು. ಅನಂತರ ಒಂದು ಕವನ ಮುಕರ್ರಮ್ ರಿಜ್ವನ್ ಅಹ್ಮದ್ ಸಾಹಿಬ್ ಗುರುಗಳು ಜಾಮಿಯಾ ಅಹ್ಮದಿಯ ಖಾದಿಯಾನ್ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಕವನ ಸಂಗ್ರಹದಿಂದ ಕೆಲ ಸಾಲುಗಳನ್ನು ಅತ್ಯಂತ ಮಧುರ ಕಂಠದಿಂದ ಪ್ರಸ್ತುತಪಡಿಸಿದರು.

ಹಮೇಂ ಉಸ್ ಯಾರಸೇ ತಖ್ವಾ ಅತಾ ಹೈ
ನ ಏ ಹಮ್‌ಸೇ ಕೆ ಇಹ್‌ಸಾನೇ ಖುದಾ ಹೈ

ಅನಂತರ ಮುಕರ್ರಮ್ ಮೌಲಾನಾ ಮುನೀರ್ ಅಹ್ಮದ್ ಖಾದಿಮ್ ಸಾಹೀಬ್ ಅಡಿಶನಲ್ ನಾಝಿರ್ ಇಸ್ಲಾಹ್ ವ ಇರ್ಷಾದ್ ದ. ಭಾರತ, ಅಹ್ಮದಿಯಾ ಜಮಾಅತಿನ ಅಭಿವೃದ್ಧಿ ಹಝ್ರತ್ ಮಸೀಹ್ ಮೌಊದ್(ಅ) ರವರ ಭವಿಷ್ಯವಾಣಿಗಳ ಪ್ರಕಾಶದಲ್ಲಿ ಎಂಬ ವಿಷಯದ ಮೇಲೆ ಮಾಡಿದರು.

ಅನಂತರ ಜಲ್ಸ ಸ್ಥಳದಲ್ಲಿಯೇ ಹುಝೂರೆ ಅನ್ವರ್ (ಅಬಅ) ರವರು ಮಾಡಿದ ಸಮಾರೋಪ ಭಾಷಣ ಉಪಸ್ಥಿತರಿಗೆ ಆಲಿಸಲು ವ್ಯವಸ್ಥೆ ಮಾಡಲಾಗಿತ್ತು. ಅದನ್ನು ಹುಝೂರ್ ಜಲ್ಸ ಸಲಾನಾ ಜರ್ಮನಿಯಿಂದ 9 ಅಕ್ಟೋಬರ್ 2021 ರಂದು ಪ್ರಸ್ತುತಪಡಿಸಿದರು.

**ದಿನಾಂಕ: 26 ಡಿಸೆಂಬರ್ 2021 ಜಲ್ಸದ ಮೂರನೆಯ ದಿನದ ಮೊದಲ ಅಧಿವೇಶನ**

ಮೂರನೇ ದಿನದ ಮೊದಲ ಅಧಿವೇಶನದ ಕಾರ್ಯಕ್ರಮದ ಪ್ರಾರಂಭ ಮುಕರ್ರಮ್ ಮೌಲಾನಾ ಮುಹಮ್ಮದ್ ಹಮೀದ್ ಕೌಸರ್ ಸಾಹಿಬ್ ನಾಝಿರ್ ದಾವತ್ ಇಲಲ್ಲಾಹ್ ಉ. ಭಾರತ ಅಧ್ಯಕ್ಷತೆಯಲ್ಲಿ ನಡೆಯಿತು. ಪವಿತ್ರ ಖುರ್‌ಆನ್ ಪಾರಾಯಣ ಮುಕರ್ರಮ್ ಹಾಫಿಝ್ ಸಿಯಾರ್ ಅಹ್ಮದ್ ಸಾಹಿಬ್ ಸಂಘಟನಾ ಪ್ರಚಾರಕರು ಮಾಡಿದರು. ಅವರು ಸೂರಃ ಅನ್ನಿಸಾಅದ 58 ರಿಂದ 60 ರವರೆಗಿನ ವಚನಗಳನ್ನು ಪಾರಾಯಣ ಮಾಡಿದರು. ಈ ವಚನಗಳ ಅನುವಾದ ಮುಕರ್ರಮ್ ಮೌಲ್ವಿ ಮಝ್‌ಹರ್ ಅಹ್ಮದ್ ವಸೀಮ್ ಸಾಹಿಬ್ ನಾಯಿಬ್ ಅಫ್ಸರ್ ಜಲ್ಸ ಸಾಲಾನ ಖಾದಿಯಾನ್ ಪ್ರಸ್ತುತಪಡಿಸಿದರು. ನಂತರ ಸಂಘಟನಾ ಮುರಬ್ಬಿ ಮುಕರ್ರಮ್ ಸಮೀದ್ ಅಹ್ಮದ್ ಮೌಲಾನಾ ಸಾಹಿಬ್ ಅತ್ಯಂತ ಮಧುರಕಂಠದಿಂದ ಹಝ್ರತ್ ಮಸೀಹ್ ಮೌಊದ್(ಅ) ರವರ ಸಂಗ್ರಹದಿಂದ ಕೆಲ ಸಾಲುಗಳನ್ನು ಮಧುರ ಕಂಠದಿಂದ ಆಲಿಸಿಕೊಟ್ಟರು.

ಕ್ಯೂಂ ಅಜಬ್ ಕರ್ತೆ ಹೋ ಗರ್ ಮೈ ಆಗಯಾ ಹೋಕರ್
ಖುದ್ ಮಸೀಹಾಯಿ ಕಾ ದಮ್ ಭರ್ತೆ ಹೈ ವ ಖಾದೋಬಹಾರ್॥

ಅನಂತರ ಈ ಅಧಿವೇಶನದ ಮೊದಲ ಭಾಷಣ ಮುಕರ್ರಮ್ ಜಾವೀದ್ ಅಹ್ಮದ್ ಸಾಹಿಬ್ ಲೋನ್ ನಾಝೀರ್ ದೀವಾನ್ ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್ ಮಾಡಿದರು. ಅವರ ಭಾಷಣದ ವಿಷಯ ಹಝ್ರತ್ ಮಸೀಹ್ ಮೌಊದ್(ಅ) ರವರ ಶುಭವಾರ್ತೆಗಳು ಹಾಗೂ ಮುನ್ನೆಚ್ಚರಿಕೆ ಭವಿಷ್ಯವಾಣಿಗಳು ಪ್ರಸಕ್ತ ಕಾಲದ ದೃಷ್ಟಿಯಿಂದ ಆಗಿತ್ತು.

ಈ ಅಧಿವೇಶನದ ಎರಡನೆಯ ಭಾಣ ಮುಕರ್ರಮ್ ಶೀರಾಝ್ ಅಹ್ಮದ್ ಸಾಹಿಬ್ ಅಡಿಶನಲ್ ನಾಝಿರ್ ಆಲಾ ದ. ಭಾರತ ಮಾಡಿದರು. ಅವರ ಭಾಷಣದ ವಿಷಯ ಪ್ರಸಕ್ತ ಪ್ರಸಾರ ಮಾಧ್ಯಮಗಳು ಮತ್ತು ದಾಯೀನ್ ಇಲಲ್ಲಾಹಿ ಆಗಿತ್ತು.

ಈ ಅಧಿವೇಶನದ ಮೂರನೇ ಬಭಾಷಣ ಮುಕರ್ರಮ್ ಹಾಫೀಝ್ ಮಖ್ದುಮ್ ಶರೀಫ್ ಸಾಹಿಬ್ ನಾಝಿರ್ ನಶರ್ ಏ ಇಶಾಅತ್ ಖಾದಿಯಾನ್ ಅವರು "ಹಝ್ರತ್ ಮಸೀಹ್ ಮೌಊದ್(ಅ) ಹಾಗೂ ಖಲೀಫರುಗಳ ಗ್ರಂಥ ಮತ್ತು ಜಮಾಅತಿನ ಪತ್ರಿಕೆಗಳ ಅಧ್ಯಯನದ ಮಹತ್ವ" ಎಂಬ ವಿಷಯದ ಮೇಲಿತ್ತು. ಅದರ ಜೊತೆಯಲ್ಲೇ ಮೂರನೇ ದಿನದ ಮೊದಲ ಅಧಿವೇಶನ ಅಂತ್ಯಗೊಂಡಿತು.

**ಸಮಾರೋಪ ಸಮಾರಂಭ ಮತ್ತು ಹುಝೂರ್ ಅನ್ವರ್ (ಅಬಅ) ರವರ ದೂರದೃಷ್ಟಿಯುಳ್ಳ ಸಂಬೋಧನೆ:-**

ಇಂದು ಜಲ್ಸ ಸಾಲಾನ ಖಾದಿಯಾನಿನ ಅಂತಿಮ ದಿನದ ಅಂತಿಮ ಅಧಿವೇಶನವಾಗಿತ್ತು. ಈ ಸಮಾರೋಪ ಸಮಾರಂಭವನ್ನು ಸಯ್ಯದ್‌ನಾ ಹುಝೂರ್ ಅನ್ವರ್ (ಅಬಅ) ಸಂಬೋಧಿಸಬೇಕಾಗಿತ್ತು.

ಜಲ್ಸ ಸ್ಥಳದಲ್ಲಿದ್ದವರೆಲ್ಲರು ಮೌನವಾಗಿ ಹುಝೂರ್ ಅನ್ವರ್ ಅವರ ಸಂಬೋಧನೆಯನ್ನು ಕಾಯುತ್ತಿದ್ದರು. ಹುಝೂರ್ ಅನ್ವರ್ ಅವರ ಸಂಬೋಧನೆಗಿಂತ MTA studio ಲಂಡನ್ನಿನಿಂದ ಖಾದಿಯಾನ್ ದಾರುಲ್ ಅಮಾನ್ ಪಟ್ಟಣ ಮತ್ತು ಜಲ್ಸಾ ಸಾಲಾನಾ ಕುರಿತು ಒಂದು ಸುಂದರವಾದ ಡಾಕ್ಯುಮೆಂಟರಿ ತೋರಿಸಲಾಯಿತು. ಈ ಜಲ್ಸಾ ಆ ಸಮಯ ಒಂದು ಜಾಗತಿ ಜಲ್ಸಾದ ರೂಪಧಾರಣೆ ಮಾಡಿಕೊಂಡಿತ್ತು. ಅಮೀರುಲ್ ಮುಮಿನೀನ್ ಹಝ್ರತ್ ಖಲೀಫತುಲ್ ಮಸೀಹ್(ಅಬಅ) ರವರ ಅನುಗ್ರಹ ಪೂರ್ಣ ಅಧ್ಯಕ್ಷತೆಯಲ್ಲಿ ಐವಾನೆ ಮಸ್ರೂರ್ ಇಸ್ಲಾಮಾಬಾದ್‌ಯಿಂದ MTA ಯ ಪ್ರಸಾರ ಮಾಧ್ಯಮದಿಂದ ಈ ಜಲ್ಸದ ಸಮಾರೋಪ ಕಾರ್ಯಕ್ರಮ ಇಡೀ ಲೋಕದಲ್ಲಿ ನೇರಪ್ರಸಾರ ಮಾಡಲಾಯಿತು. ಹುಝೂರ್ ಅನ್ವರ್(ಅಬಅ) ಭಾರತೀಯ ಸಮಯಾನುಸಾರ 4.00 ಗಂಟೆಗೆ ಐವಾನೆ ಮಸ್ರೂರ್ ಇಸ್ಲಾಮಾಬಾದ್‌ಗೆ ಆಗಮಿಸಿದರು. ಹುಝೂರ್ ಅನ್ವರ್(ಅಬಅ) ಎಲ್ಲ ಸಭಿಕರಿಗೆ ಅಸ್ಸಲಾಮು ಅಲೈಕುಮ್ ಸಂದೇಶ ನೀಡಿದರು. ಅಧಿವೇಶನದ ವಿಧಿಬದ್ಧ ಆರಂಭವು ಪವಿತ್ರ ಖುರ್‌ಆನ್‌ನ ಪಾರಾಯಣದಿಂದಾಯಿತು. ಆ ಸೌಭಾಗ್ಯವು ಮುಕರ್ರಮ್ ಮಹ್ಮೂದ್ ಅಹ್ಮದ್ ವದಿಕ್ ಸಾಹಿಬ್ ಪಡೆದರು. ಅವರು ಸೂರಃ ಆಲಿ ಇಮ್ರಾನಿನ ವಚನ 20 ರಿಂದ 23 ರವರೆಗೆ ಪಾರಾಯಣಗೈದರು ಮತ್ತು ಅದರ ಉರ್ದು ಅನುವಾದ ಪ್ರಸ್ತುತಪಡಿಸಿದರು. ಅನಂತರ ಮುಕರ್ರಮ್ ಉಮರ್ ಶರೀಫ್ ಸಾಹಿಬ್, ಹಝ್ರತ್ ಅಖದಸ್ ಮಸೀಹ್ ಮೌಊದ್(ಅ) ರವರ ಕವನ

ಇಸ್ಲಂ ಸೇ ನಾ ಭಾಗೋ ರಾಹೇ ಹುದ ಯಹೀ ಹೈ
ಅಯ್ ಸೋನೇವಾಲೆ ಜಾಗೋ ಶಮ್ಸು ಝು ಹಾ ಯಹೀ ಹೈ

ಕೆಲ ಸಾಲುಗಳನ್ನು ಅತ್ಯಂತ ಮಧುರವಾಣಿಯಿಂದ ಆಲಿಸಿಕೊಟ್ಟರು.

ಸುಮಾರು ನಾಲ್ಕು ಕಾಲು ಗಂಟೆಗೆ ಜಲ್ಸ ಸಾಲಾನಾದ ಆ ಅಮೃತ ಘಳಿಗೆ ಬಂತು. ಆಗ ಖಾದಿಯಾನ್ ಮತ್ತು ಯು.ಕೆಯಿಂದ ಉತ್ಸಾಹಭರಿತ ಘೋಷಣೆಗಳ ನಂತರ ಹಝ್ರತ್ ಖಲಿಫತುಲ್ ಮಸೀಹ್ ಅಲ್ ಖಾಮಿಸ್(ಅಬಅ) ತಮ್ಮ ಭಾಷಣ ಪ್ರಾರಂಭಿಸಿದರು. ತಶಹುದ್ ತವ್ವೂಝ್ ಮತ್ತು ಸೂರಃ ಫಾತಿಹಾ ಪಾರಾಯಣದ ನಂತರ ಹುಝೂರ್ ಅನ್ವರ್(ಅಬಅ) ನುಡಿದರು. **(ಮುಂದುವರಿಯುವುದು)**

**ಇನ್ಸಾನಿಯತ್ ಝಿಂದಾಬಾದ್**
**ಮಾನವೀಯತೆ ಚಿರಕಾಲ ಬಾಳಲಿ**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Postal Reg. No: 3000039689/2020-22 Vol No.03, Thursday, 03 February 2022, Issue No. 05

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.575/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

### 8 ಜೂನ್ 2015 ಸೋಮವಾರ (ಶೇಷ ವರದಿ)

ಹಂಗ್‌ರಿಯಿಂದ ಬಂದ ತಂಡದ ಹುಝೂರ್ ಅನ್ವರ್(ಅಬಿಅ) ಅವರೊಂದಿಗಿನ ಭೇಟಿ.

* 7 ಗಂಟೆಗೆ 05 ನಿಮಿಷಕ್ಕೆ ಹಂಗರಿಯಿಂದ ಬಂದ ತಂಡವು ಹುಝೂರ್ ಅನ್ವರ್ ಅವರನ್ನು ಭೇಟಿಯಾಗುವ ಭಾಗ್ಯ ಪಡೆದರು.

* ಹಂಗ್‌ರಿಯಿಂದ 21 ಜನರನ್ನೊಳಗೊಂಡ ತಂಡ ಬಂದಿತ್ತು. ಹುಝೂರ್ ಅನ್ವರ್ ಅವರೆಲ್ಲರ ಕುಶಲೋಪರಿ ವಿಚಾರಿಸಿದರು. ಹಂಗರಿಯ ಮಿತ್ರರೊಬ್ಬರು Mezei Laszlo ಸಾಹಿಬರು ಜಲ್ಸದಲ್ಲಿ ಭಾಗವಹಿಸಿದ್ದರು. ಅವರು ಪೋಲೀಸ್ ವಿಭಾಗದಲ್ಲಿ ವಿವಿಧ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಇದೀಗ ಹಂಗೇರಿಯುಲ್ಲಿ ಒಬ್ಬ ಕ್ರಾಂತಿಕಾರಿ ಪ್ರಧಾನಮಂತ್ರಿಯ ಹೆಸರಿನಲ್ಲಿ ಒಂದು ಫಂಡ್ ಸ್ಥಾಪಿಸಿದ್ದಾರೆ. ಆ ಮೂಲಕ ಮಾನವರ ಸೇವೆಯಲ್ಲಿ ತೊಡಗಿದ್ದಾರೆ. ಅವರು ಧಾರ್ಮಿಕವಾಗಿ ಕ್ರೈಸ್ತ ಮತಕ್ಕೆ ಸೇರಿದವರಾಗಿದ್ದಾರೆ. ಅವರು ತಮ್ಮ ಭಾವನೆಗಳನ್ನು ಹೀಗೆ ವ್ಯಕ್ತಪಡಿಸಿದರು. ಕಿರಿಯರಾಗಲಿ, ಹಿರಿಯರಾಗಲಿ ಒಬ್ಬರು ಮತ್ತೊಬ್ಬರಿಗೆ ಸಲಾಂ ಮಾಡುತ್ತಿದ್ದರು ಮತ್ತು ತುಂಬ ಪ್ರೀತಿಯಿಂದ ಭೇಟಿಯಾಗುತ್ತಿದ್ದರು. ನನಗೆ ಅವರ ಭಾಷೆ ತಿಳಿಯುತ್ತಿರಲಿಲ್ಲ. ಆದರೆ ಅವರ ಮುಖಭಾವದಿಂದ ತಿಳಿದುಬರುತಿತ್ತು. ಅವರು ಪರಸ್ಪರ ಪ್ರೀತಿಯನ್ನು ಹಂಚುತ್ತಿದ್ದಾರೆ ಎಂದು. ನಾನು ಲೋಕವನ್ನೇ ಸುತ್ತಿದ್ದೇನೆ. ಪೂರ್ವದಿಂದ ಪಶ್ಚಿಮದವರೆಗೆ ಈ ತರಹದ ದೃಶ್ಯ ಎಲ್ಲೂ ಕಾಣಲಿಲ್ಲ. ನನ್ನ ಮೇಲೆ ಈ ಜಲ್ಸ ವಿಚಿತ್ರ ರೀತಿಯ ಪ್ರಭಾವ ಬೀರಿದೆ. ನಿಶ್ಚಯವಾಗಿಯೂ ತನ್ನ ಮಿತ್ರರಿಗೂ ತನ್ನ ಪರಿಚಯಸ್ತರಿಗೂ ಅಹ್ಮದಿಯಾ ಜಮಾಅತಿನ ಈ ಜಲ್ಸಾ ಬಗ್ಗೆ ತಿಳಿಸಿಕೊಡುವೆನು.

ಖಲೀಫತುಲ್ ಮಸೀಹ್ ಅವರ ಭೇಟಿಯ ನಂತರ ಹೇಳಿದರು. ನಾವು ಎಷ್ಟು ಹೊತ್ತು ಅವರ ಬಳಿ ಕುಳಿತುಕೊಂಡೆವೋ ಆಗ ಹೀಗೆ ಭಾಸವಾಗುತ್ತಿತ್ತು. ಖಲೀಫತುಲ್ ಮಸೀಹ್ ಅವರಿಂದ ಪ್ರಕಾಶದ ಕಿರಣಗಳು ಹೊರಟು ನನ್ನೊಳಗೆ ಸೇರುತ್ತಿವೆ. ಅದೇ ರೀತಿ ಜಲ್ಸಾದಲ್ಲಿ ಖಲೀಫತುಲ್ ಮಸೀಹ್ ಸಂಬೋಧಿಸುವಾಗ ಅವರ ನಯನಗಳಿಂದ ಕಿರಣಗಳು ಹೊರಟು ಇಡೀ ಸಮಾವೇಶದ ಮೇಲೆ ಬೀಳುತ್ತಿವೆ, ಮತ್ತು ಇಡೀ ಸಮಾವೇಶ ಅವರ ಹಿಡಿತದಲ್ಲಿರುವ ರೀತಿ ಬಾಸವಾಗುತ್ತಿತ್ತು.

ಅವರು ಮತ್ತು ಹೇಳಿದರು. ಇಷ್ಟೊಂದು ದೊಡ್ಡ ಸಮೂಹ ಇಷ್ಟು ಶಿಸ್ತಿನಿಂದ ಕಾರ್ಯಕ್ರಮ ಆಯೋಜಿಸುವುದು ಒಂದು ಅಚ್ಚರಿದಾಯಕ ಹಾಗೂ ಅವರ್ಣನೀಯ ವಿಷಯವಾಗಿದೆ.

* ಹಂಗ್‌ರಿಯ ಕ್ರೈಸ್ತ ಪಾದರಿಯೊಬ್ಬರು Gabor Thamos ಸಾಹಿಬ್ ಸಹ ಜಲ್ಸಾದಲ್ಲಿ ಭಾಗವಹಿಸಿದ್ದರು. ಅವರು ಹಿಂದಿನ ವರ್ಷ ಸಹ ಜಲ್ಸಾದಲ್ಲಿ ಶಾಮೀಲಾಗಿದ್ದರು. ಈ ಸಲ ಸ್ವಯಂ ಫೋನ್ ಮಾಡಿ ಕೇಳಿದರು. ನಾನು ಈ ವರ್ಷವು ಜಲ್ಸಾದಲ್ಲಿ ಭಾಗವಹಿಸಬಹುದೇ ಎಂದು. ಹಾಗೆ ಹುಝೂರ್ ಅನ್ವರ್ ಕೇಳಿದರು. ನೀವು ಹಿಂದಿನ ವರ್ಷ ಸಹ ಬಂದಿದ್ದೀರಿ. ನಾನು ಆಶ್ಚರ್ಯಗೊಂಡೆ. ಹುಝೂರ್‌ರರಿಗೆ ಲಕ್ಷಾಂತರ ಜನರು ಬೇಟಿಯಾಗುತ್ತಾರೆ. ಆದರೂ ಹೇಗೆ ನೆನಪಿನಲ್ಲಿಟ್ಟುಕೊಂಡಿದ್ದಾರೆ. ಅವರು ಜಲ್ಸಾದ ಬಗ್ಗೆ ತಮ್ಮ ಅನಿಸಿಕೆ ವ್ಯಕ್ತಪಡಿಸುತ್ತಾ ಹೀಗೆ ಹೇಳಿದರು. ನಾನು ತಮ್ಮ ಜಲ್ಸಾದಲ್ಲಿ ಪಾಲ್ಗೊಂಡು ತಮ್ಮ ವಿಶ್ವಾಸದಲ್ಲಿ ಒಂದು ರೀತಿಯ ಹೊಸ ಚೈತನ್ಯ ಪಡೆಯುತ್ತೇನೆ. ನೀವು ಅತೀ ಸಾಹಸದಿಂದ ಲೋಕ ಮತ್ತು ಧರ್ಮಗಳ ಮಧ್ಯೆ ಶಾಂತಿ ಸ್ಥಾಪಿಸುವ ಕಾರ್ಯದಲ್ಲಿ ತೊಡಗಿದ್ದೀರಿ. ಮುಂದುವರಿಯುತ್ತಾ ಅವರು ಹೇಳಿದರು. ಹುಝೂರ್ ಅನ್ವರ್ ಇಂಗ್ಲೀಷಿನಲ್ಲಿ ಮಾಡಿದ ಭಾಷಣ ಕೇವಲ ಮಾನವೀಯತೆಯನ್ನು ನಶಿಸುವುದರಿಂದ ಉಳಿಸುವುದಿಲ್ಲ. ಬದಲು ಮಾನವನ ಮೌಲ್ಯವನ್ನು ಸ್ಥಾಪಿಸುವಂತಿದೆ.

ಆಗ ಹುಝೂರ್ ಅನ್ವರ್ ಹೇಳಿದರು. ನಮಗೆ ಇಡೀ ಲೋಕದಲ್ಲಿ ಮಾನವ ಮೌಲ್ಯಗಳನ್ನು ಸ್ಥಾಪಿಸಬೇಕಾಗಿದೆ. ಆಗ ಮಾತ್ರ ಲೋಕದಲ್ಲಿ ಶಾಂತಿ, ಸಮಾನತೆ ಮತ್ತು ಸೌಹಾರ್ಧತೆ ಉಂಟಾಗಬಹುದು. ಲೋಕವು ಶಾಂತಿಯ ನಂದನವನವಾಗುವುದು.

* ಒಂದು ತಿಂಗಳ ಹಿಂದೆ ಬೈಅತ್ ಮಾಡಿದ್ದ ಮಹಿಳೆಯೊಬ್ಬರು ಜಲ್ಸಾದಲ್ಲಿ ಭಾಗವಹಿಸಲು ಬಂದಿದ್ದರು. ಅವರು ಹೇಳಿದರು, ನಾನು ಶಾಲಾ ಶಿಕ್ಷಕಿಯಾಗಿದ್ದೇನೆ. Organic Chemistry ವಿಷಯದಲ್ಲಿ PhD ಮಾಡುತ್ತಿದ್ದೇನೆ. ಹುಝೂರ್ ಅನ್ವರ್ ಹೇಳಿದರು. ಅಲ್ಲಾಹನು ನಿಮಗೆ ಕರುಣಿಸಲಿ ಮತ್ತು ನಿಮ್ಮ ಶುಭಾಕಾಂಕ್ಷೆಗಳನ್ನೆಲ್ಲಾ ಪೂರ್ಣಗೊಳಿಸಲಿ.

* ಹಂಗ್‌ರಿ ತಂಡದಲ್ಲಿ ಓರ್ವ ಅಫ್ಘಾನಿ ಅಹ್ಮದಿಯೇತರ ಮಿತ್ರರಾದ ಮುಹಮ್ಮದ್ ಅಜ್ಮಲ್ ಸಾಹಿಬ್ ಸಹ ಪಾಲ್ಗೊಂಡಿದ್ದರು ಅವರಿಗೆ ಕೆಲ ಅವಧಿ ಮೊದಲು ಜಮಾಅತಿನ ಪರಿಚಯವಾಗಿದೆ. ಜಲ್ಸದಲ್ಲಿ ಭಾಗವಹಿಸಿದ ನಂತರ ಹೇಳಿದರು. ನನಗಂತೂ ನಿಮ್ಮ ಜಮಾಅತಿನಲ್ಲಿ ಅಮುಸ್ಲಿಮರು ಎನ್ನುವಂತಹ ಯಾವ ಮಾತು ಕಂಡಿಲ್ಲ ನೀವು ಪ್ರಸ್ತುತಪಡಿಸುತ್ತಿರುವ ಇಸ್ಲಾಂ ಅಂತೂ ಬಹು ಉತ್ತಮವಾಗಿದೆ. ನಿಮ್ಮ ಮೇಲೆ ಪಾಕಿಸ್ತಾನ ಅಥವಾ ಇತರ ಸರಕಾರಗಳು ಮಾಡುತ್ತಿರುವ ದೌರ್ಜನ್ಯಗಳು ಧರ್ಮಬಾಹಿರವಾಗಿವೆ. ಎಲ್ಲೆಡೆ ಪ್ರೀತಿಯಿದೆ, ಸೌಹಾರ್ಧತೆ ಇದೆ ಮತ್ತು ಹಝುರತ್ ರಸೂಲುಲ್ಲಾಹ್(ಸ) ರವರ ಮೇಲೆ ದುರೂದ್ ಪಠಿಸಲಾಗುತ್ತಿದೆ.

* ಹಂಗೇರಿಯ ತಂಡದಲ್ಲಿ ಗಾಬೋರ್ ಪೀಟರ್ ಸಾಹಿಬರು ಸಹ ಶಾಮೀಲಾಗಿದ್ದರು. ಧಾರ್ಮಿಕವಾಗಿ ಅವರು ಯಹೂದಿಯಾಗಿದ್ದರು. ಶಿಕ್ಷಣ ಇಲಾಖೆಗೆ ಸಂಬಂಧಿಸಿದವರಾಗಿದ್ದರು. ಅವರು ಹೇಳಿದರು. ನಾನು ಇಲ್ಲಿ ಜಲ್ಸಾದಲ್ಲಿ ಭಾಗವಹಿಸಿ ಇಸ್ಲಾಮಿನ ಯಥಾರ್ಥ ಶಿಕ್ಷಣವನ್ನು ಆಲಿಸಿದ್ದೇನೆ. ಇವು ನನ್ನ ಜೀವನದ ಅತಿ ಮುಖ್ಯ ದಿನಗಳಾಗಿದ್ದವು. ಅಹ್ಮದಿಯಾ ಜಮಾಅತ್ ಎಲ್ಲರೊಡನೆಯೂ ಮಾತನಾಡಲು ಮತ್ತು ಎಲ್ಲರೊಡನೆ ಸೇರಿ ಕೆಲಸ ಮಾಡಲು ಬಯಸುತ್ತದೆ.

ಆಗ ಹುಝೂರ್ ಹೇಳಿದರು. ನಮ್ಮಲ್ಲಿರುವ ಎಲ್ಲ ಸಹಮತ ವಿಷಯಗಳಲ್ಲಿ ಎಲ್ಲರೂ ಒಗ್ಗೂಡಬೇಕಾಗಿದೆ. ಮತ್ತು ಎಲ್ಲರೂ ಸೇರಿ ಮಾನವ ಮೌಲ್ಯಗಳನ್ನು ಸ್ಥಾಪಿಸಬೇಕಾಗಿದೆ ಮತ್ತು ಪರಸ್ಪರ ಗೌರವಿಸಬೇಕಾಗಿದೆ.

ಅವರ ಬಗ್ಗೆ ಹಂಗ್‌ರಿಯ ಮುಬಲ್ಲಿಗ್ ಸಾಹಿಬರ ಹೇಳಿದ್ದು. ಜಲ್ಸಾದಲ್ಲಿ ಶಾಮೀಲಾಗುವ ಮುಂಚೆ ಇಸ್ಲಾಂ ಮತ್ತು ಯಹೂದಿಯತ್ ಬಗ್ಗೆ ಮಾತನಾಡುವಾಗ ಕೆಲವೊಮ್ಮೆ ತೀಕ್ಷಣ ಚರ್ಚೆ ಮಾಡುತ್ತಿದ್ದರು. ಆದರೆ ಹುಝೂರ್ ಅನ್ವರ್‌ರೊಡನೆ ಭೇಟಿಯಾದ ನಂತರ ಹೇಳಿದರು.

ನೀವು ಕೇವಲ Love For All, Hatred For None ಮೇಲೆ ವಿಶ್ವಾಸವಿಡುವವರಲ್ಲ. ಬದಲು ಅದರಂತೆ ನಡೆಯುವವವರಾಗಿದ್ದೀರಿ. ಇದು ಸ್ವತ: ನನ್ನ ಅನುಭವ ಆಗಿದೆ. ಹುಝೂರ್ ಅನ್ವರ್ ಅವರೊಡನೆ ಭೇಟಿ ಆದ ನಂತರ ಚರ್ಚೆ ಬಿಟ್ಟುಬಿಟ್ಟರು ಮತ್ತು ಜಲ್ಸಕ್ಕೆ ಆಹ್ವಾನಿಸಿದ್ದಕ್ಕೆ ಕೃತಜ್ಞತೆ ಅರ್ಪಿಸುತ್ತಾ ಹೇಳಿದರು. ಹಂಗೇರಿಯಲ್ಲಿ ಯಾವುದೆ ವಿಷಯದಲ್ಲಿ ಜಮಾಅತಿಗೆ ಅಗತ್ಯಬಿದ್ದರೆ ನನಗೆ ತಿಳಿಸಿ ನಾನು ಸಹಕರಿಸುವೆನು.

* ಹಂಗರಿಯಲ್ಲಿ ವಾಸಿಸುತ್ತಿರುವ ಮೋರೆತಾನಿಯಾ ದೇಶಕ್ಕೆ ಸಂಬಂಧಿಸಿದ ಓರ್ವ ಹಳೆಯ ಅಹ್ಮದಿ, ಈ ತಂಡದವರೊಂದಿಗೆ ಬಂದಿದ್ದರು. ಅವರು ಹೇಳುತ್ತಾರೆ ಹಂಗರಿಯಲ್ಲಿ ನಾನು ವಿದ್ಯಾರ್ಥಿಯಾಗಿ ಬಂದು ಇಲ್ಲೇ ನೆಲೆಸಿದ್ದೇನೆ. ನನಗೆ ಅತ್ಯಂತ ಸಮಾಧಾನದ ವಿಷಯವೆಂದರೆ ನಾನು ಅಹ್ಮದಿಯಾ ಜಮಾಅತಿನ ಭಾಗವಾಗಿದ್ದೇನೆ. ಇದು ನಮ್ಮ ಅದೃಷ್ಟವಾಗಿದೆ ನಾವು ಅಹ್ಮದಿಯಾಗಿದ್ದೇವೆ. ಉತ್ತಮ ಜಾಗದಲ್ಲಿದ್ದೇವೆ ಇಂದು ನಾವು ಎಷ್ಟು ಭಾಗ್ಯವಂತರು, ಹುಝೂರ್‌ರನ್ನು ಸಂದರ್ಶಿಸುತ್ತಿದ್ದೇವೆ ಮತ್ತು ಮಾತನಾಡುತ್ತಿದ್ದೇವೆ.

**(ಮುಂದುವರಿಯುವುದು)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800–103–2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.